ಖಂಡಿತವಾಗಿಯೂ ಅದಕ್ಕೆ ನಾನು ಅವಕಾಶ ಕೊಡುವುದಿಲ್ಲ.

ನಿಯಮ 69ರ ಮೇರೆಗೆ ---

ವಿಷಯ :- ಬೆಂಗಳೂರು ನಾಗರಿಕರಿಗೆ ಕುಡಿಯುವ ನೀರಿನ ತೀವ್ರ ಅಭಾವದಿಂದ ಉಂಟಾಗಿರುವ ಪರಿಸ್ಥಿತಿ. -----

ಶ್ರೀ ಎಚ್.ಎನ್.ನಂಜೇಗೌಡ (ಬಸವನಗುಡಿ) :- ಸನ್ಮಾನ್ಯ ಅಧ್ಯಕ್ಷರೇ, ಬೆಂಗಳೂರು ನಗರದಲ್ಲಿ ಉಂಟಾಗಿರತಕ್ಕ ಕುಡಿಯುವ ನೀರಿನ ಅಭಾವದ ಪರಿಸ್ಥಿತಿ ಕುರಿತಂತೆ ಅಲ್ಪ ಕಾಲದ ಚರ್ಚೆಯನ್ನು ಪ್ರಾರಂಭಿಸುವುದಕ್ಕೆ ತಮ್ಮ ಅನುಮತಿಯನ್ನು ಕೇಳುತ್ತಿದ್ದೇನೆ. ನಾನು ಈ ಚರ್ಚೆಯನ್ನು ಪ್ರಾರಂಭಿಸತಕ್ಕಂಥ ಕಾಲದಲ್ಲಿ ಹೆಚ್ಚಿನ ಸಮಯ ತೆಗೆದುಕೊಂಡು ಲಂಬಿಸಿ, ಅನಗತ್ಯವಾಗಿ ಮಾತನಾಡುವುದಕ್ಕೆ ಪ್ರಯತ್ನ ಮಾಡುವುದಿಲ್ಲ. ಇವೊತ್ತು ಸದನದ ಮುಂದೆ ಅಧಿಕೃತವಾಗಿ ಚರ್ಚೆಗೆ ಬಂದಿದ್ದರೂ ಕೂಡ ವಿಶೇಷವಾದ ಅನೇಕ ಸಂದರ್ಭಗಳಲ್ಲಿ ಮುಖ್ಯ ಮಂತ್ರಿಗಳ ಜೊತೆ, ಮತ್ತು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಅಧಿಕಾರಿಗಳ ಜೊತೆ ಮಾತನಾಡಿದ್ದೇನೆ. ಈ ಮಂಡಳಿಯ ಅಧಿಕಾರಿಗಳೂ ಸಹ ತಮ್ಮ ಕೈಲಾದ ಮಟ್ಟಿಗೆ ಪ್ರಯತ್ನ ಮಾಡುತ್ತಿರತಕ್ಕಂಥಾದ್ದು ನಮ್ಮ ಕಣ್ಣಿಗೆ ಕಂಡು ಬಂದಿದೆ, ಅದನ್ನು ನಾನು ಅಲ್ಲಗಳೆಯುವುದಿಲ್ಲ. ಒಂದು ವಿಷಯವೇನೆಂದರೆ, ಮೊನ್ನೆ ತಾನೇ ಮುಖ್ಯ ಮಂತ್ರಿಗಳು ಅಪ್ಪಣೆ ಕೊಡಿಸಿದಂತೆ, 31ರೊಳಗೆ ಅದನ್ನು ಏರ್ಪಾಡು ಮಾಡತಕ್ಕಂಥ ಕಾರ್ಯ ಮಾಡುತ್ತೇವೆಂದು ಹೇಳಿದ್ದಾರೆ. ಬಹುಶ: ಅಷ್ಟು ಮಾಡಿದರೆ ಇರತಕ್ಕಂಥ ಕೆಪಾಸಿಟಿಯಲ್ಲಿ ಏನು ಮಾಡಬಹುದೋ ಅದನ್ನು ಮಂಡಳಿಯ ಅಧಿಕಾರಿಗಳೆಲ್ಲರೂ ಕುಳಿತುಕೊಂಡು ಮಾಡುತ್ತಾರೆ. ಇವೊತ್ತು ಬೆಂಗಳೂರು ನಗರ ವಿಶ್ವ ವಿಖ್ಯಾತವಾಗಿದ್ದು, ಮುಖ್ಯ ಮಂತ್ರಿಗಳು ಮತ್ತು ಇತರರು ಇತ್ತೀಚೆಗೆ ಹೊರ ದೇಶಗಳಿಗೆ ಹೋಗಿ ಬಂದ ನಂತರ ಈ ಬೆಂಗಳೂರು ನಗರಕ್ಕೆ ಇನ್ನು ಹೆಚ್ಚು ಪ್ರಾಮುಖ್ಯತೆ ಸಿಗುತ್ತಿದೆ. ಇಲ್ಲಿ ಏನಾಗಿದೆಯೆಂದರೆ, ಸಮಸ್ಯೆಯ ಮೂಲದ ಬಗ್ಗೆ ಅವರು ಏನು ಅರ್ಥ ಮಾಡಿಕೊಂಡಿದ್ದಾರೋ ಗೊತ್ತಿಲ್ಲ. ಹೊಸದಾಗಿ ಯಾವ ಲೇಔಟ್‌ಗಳನ್ನು ಮಾಡಿದ್ದಾರೆ, ಅದು ಜಯನಗರ ಇರಬಹುದು, ಜೆ.ಪಿ.ನಗರ ಇರಬಹುದು, ಇತ್ತೀಚೆಗೆ ಅಧಿಕೃತವಾಗಿ ಬಿ.ಡಿ.ಎ. ಮೂಲಕ ನಿರ್ಮಿಸಿರುವ ಹೊಸ ಬಡಾವಣೆಗಳೇನಿವೆ, ಆ ಬಡಾವಣೆಗಳಿಗೆ ನೀರನ್ನು ಸರಿಯಾಗಿ ಸರಬರಾಜು ಮಾಡುವ ವ್ಯವಸ್ಥೆ ಇದೆ. ಈ ಬಡಾವಣೆಗಳೆಲ್ಲಾ ನಾಗಾಲೋಟದಿಂದ ಬೆಳೆಯುತ್ತಿದ್ದು, ಜೊತೆಗೆ ಬಹು ಮಹಡಿಗಳನ್ನು ಕಟ್ಟುವುದಕ್ಕೆ ಅನುಮತಿ ಕೊಟ್ಟಿದ್ದಾರೋ ಗೊತ್ತಿಲ್ಲ. ನಾನು ಲ್ಯಾವೆಲಿ ರಸ್ತೆಯಲ್ಲಿ ವಾಸಿಸುತ್ತಿದ್ದು, 1975ನೇ ಇಸಿವಿಯಲ್ಲಿ ಅಲ್ಲಿಗೆ ಹೋದಾಗ, ಆ ಇಡೀ ರಸ್ತೆಯಲ್ಲಿ ಕ್ರಾಸ್ ರೋಡುಗಳೂ ಸೇರಿಕೊಂಡು 25 ಕಾರುಗಳೂ ಸಹ ಇರುತ್ತಿರಲಿಲ್ಲ. ಆದರೆ, ಅಲ್ಲಿ ಇವೊತ್ತು 2,000 ಕಾರುಗಳು ಇದ್ದು ಪರಿಸ್ಥಿತಿ ಏನಾಗಿದೆಯೆಂದು ನೀವೇ ಅರ್ಥ ಮಾಡಿಕೊಳ್ಳಬಹುದು. ಯಾವ ಮಟ್ಟದಲ್ಲಿ ಜನಸಂಖ್ಯೆ ಏರಿವೆ ಎಂದು ನೀವೇ ಅರ್ಥ ಮಾಡಿಕೊಳ್ಳಬಹುದು. ಅವೊತ್ತು ಯಾವುದೋ ಒಂದು ಜನಸಂಖ್ಯೆಗೆ ಸ್ಯೂವರೇಜ್ ಮತ್ತು ವಾಟರ್ ಲೈನ್

ಎರಡೂ ಮಾಡಿರುತ್ತಾರೆ. ಈವತ್ತು ವಾಟರ್ ಲೈನ್ ಮತ್ತು ಸ್ಯೂವರೇಜ್ ಲೈನ್ ಇನ್‌ಸಫಿಷಿಯಂಟ್ ಏತಕ್ಕೆಂದರೆ ಲೋಡ್ ಜಾಸ್ತಿಯಾಯಿತು. ಮತ್ತೊಂದು ವಿಚಾರ, ನಗರದಲ್ಲಿ ಬಹು ಮಹಡಿ ಕಟ್ಟಡಗಳು ತಲೆಯೆತ್ತಿದ ಮೇಲೆ, ಈ ಕಟ್ಟಡದಲ್ಲಿ ವಾಸಿಸುತ್ತಿರುವವರು ಸಕ್ಕಿಂಗ್ ಪಂಪ್ ಹಾಕಿಕೊಂಡು ಅಧಿಕೃತವಾಗಿ ಪೂರ್ತಿ ನೀರನ್ನು ಉಪಯೋಗಿಸಿಕೊಳ್ಳುತ್ತಾರೆ. ಈಗಂತೂ ಯದ್ವಾತದ್ವಾ ವ್ಯವಸ್ಥೆಗಳಾಗಿವೆ. ಅದನ್ನು ಒಟ್ಟಾರೆ ಸರಿಪಡಿಸಬೇಕೆಂದು ಅಂದುಕೊಂಡರೆ ಎಲ್ಲೆಲ್ಲಿ ಹಳೆಯ ಪೈಪುಗಳಿವೆಯೋ ಅಲ್ಲಿ ಮೊದಲು ಅವುಗಳ ವ್ಯವಸ್ಥೆಯಾಗಬೇಕು. ಉದಾಹರಣೆಗೆ, ಕೆಂಪೇಗೌಡ ನಗರದಲ್ಲಿ ತನಿಖೆಗೆಂದು ನನ್ನ ಸ್ನೇಹಿತರು ಹಾಗೂ ಪ್ರದೇಶದ ಜನ ಮಹಾಶಯರು ಕರೆದಾಗ ಅಲ್ಲಿಗೆ ಹೋಗಿದ್ದಾಗ ಆ ಸ್ಥಳದಲ್ಲಿದ್ದ ಒಂದು ಮ್ಯಾನ್‌ಹೋಲ್ ಲೀಕ್ ಆಯಿತು. ನೋಡುತ್ತಿದ್ದಂತೆ ಕೆಲವು ನಿಮಿಷಗಳಲ್ಲಿ ಪಕ್ಕದಲ್ಲಿದ್ದ ಮತ್ತೊಂದು ಮ್ಯಾನ್‌ಹೋಲ್ ಸಹ ಲೀಕ್ ಆಯಿತು. ಏಕೆಂದರೆ, ತೆಗೆದುಕೊಂಡು ಹೋಗತಕ್ಕ ಲೈನಿಗೆ ಸಾಮರ್ಥ್ಯ ಕಡಿಮೆ ಇದ್ದು, ಲೋಡ್ ಜಾಸ್ತಿಯಾಗಿದೆ. ಇದು ಎಲ್ಲಾ ಕಡೆ ಆಗಿರತಕ್ಕಂಥಾದ್ದು. ಇದರ ಬಗ್ಗೆ ಸಮಗ್ರವಾಗಿ ವಿಚಾರ ಮಾಡಬೇಕಾಗುತ್ತದೆ. ಇನ್ನೊಂದು ಗಾಬರಿ ವಿಷಯ ಏನೆಂದರೆ ಬೆಂಗಳೂರಿನಲ್ಲಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಮಾಡುತ್ತಿದ್ದೀರಿ. ಈಗ ನಿಮ್ಮ Priorities of the Government as on today, ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣ ಮಾಡುವುದು ಬಹಳ ಅವಶ್ಯಕತೆಯಿರುವುದರಿಂದ ಇದು ಪ್ರೈಯಾರಿಟಿಯಲ್ಲಿದೆ. ಅದು ನಿರ್ಮಾಣವಾದರೆ ಅಲ್ಲಿಗೆ ನೀರಿನ ವ್ಯವಸ್ಥೆ ಮಾಡಬೇಕಲ್ಲವೇ ? ನೀರನ್ನು ಎಲ್ಲಿಂದಾದರೂ ತಂದು ಪೂರೈಸಬೇಕಲ್ಲವೇ ? ನೀರನ್ನು ನ್ಯೂಯಾರ್ಕ್‌ನಿಂದ ತರುತ್ತಾರೆಯೇ ? ನಮಗಾಗಿರುವ ಗಾಬರಿ, ಸಂಶಯಗಳ ಬಗ್ಗೆ ಹೇಳಬೇಕಲ್ಲಾ. ಈಗಿನ ಪರಿಸ್ಥಿತಿಯಲ್ಲಿ ಬೆಂಗಳೂರಿಗೆ ಸರಿಯಾಗಿ ಕುಡಿಯುವ ನೀರನ್ನು ಪೂರೈಸಲಾಗುತ್ತಿಲ್ಲ. ಬೆಂಗಳೂರಿನಲ್ಲಿರುವ ನಿವಾಸಿಗಳ ಪರಿಸ್ಥಿತಿಯ ಬಗ್ಗೆ ನನಗೆ ಚಿಂತೆಯಾಗಿದೆ. ಮುಂದೆ ಇಂಪ್ರೂವ್‌ಮೆಂಟ್ ಮಾಡತಕ್ಕದ್ದು, ಕೆಪಾಸಿಟಿಯನ್ನು ಜಾಸ್ತಿ ಮಾಡತಕ್ಕಂಥಾದ್ದು, ವಾಟರ್ ಲೈನ್ ಮತ್ತು ಸೀವರೇಜ್ ಲೈನ್‌ಗಳನ್ನು ಬದಲಾವಣೆ ಮಾಡತಕ್ಕಂಥಾದ್ದು, ಇವುಗಳ ಬಗ್ಗೆ ದೊಡ್ಡ ಯೋಜನೆಯನ್ನೇ ತಯಾರು ಮಾಡಿಕೊಳ್ಳಬೇಕಾಗುತ್ತದೆ. ಇದರ ಜೊತೆಗೆ ಹಿಂದಿನ ಹಳೆಯ ಬಡಾವಣೆಗಳೇನಿವೆ, ಅದು ಕೆಂಪೇಗೌಡ ನಗರವಿರಬಹುದು, ಬಸವನಗುಡಿ ಇರಬಹುದು, ಚಿಕ್ಕಪೇಟೆ ಇರಬಹುದು; ಈ ಹಳೆಯ ಬಡಾವಣೆಗಳಲ್ಲಿರುವ ವಾಟರ್ ಲೈನ್ ಮತ್ತು ಸ್ಯೂವರೇಜ್ ಲೈನ್, ಈ ಎರಡನ್ನೂ ಬದಲಾವಣೆ ಮಾಡಲೇಬೇಕಾಗುತ್ತದೆ. ಈಗ ಇರತಕ್ಕಂಥ ಪರಿಸ್ಥಿತಿಯಲ್ಲಿ ಇಲ್ಲಿ ಏನಾಗಿದೆ ಎಂಬ ಬಗ್ಗೆ ನಾನು ಹಾಗೆಯೇ ಪ್ರಾಕ್ಟಿಕಲ್ ಆಗಿ ಯೋಚನೆ ಮಾಡತಕ್ಕವನು. ನೀರು ಎಲ್ಲಿ ಬರುತ್ತದೆ ? ಸದಾಶಿವನಗರ ಮತ್ತು ಜಯನಗರದಲ್ಲಿ ಚೆನ್ನಾಗಿ ನೀರು ಬರುತ್ತದೆ. ವಿ.ಐ.ಪಿ.ಗಳಿರುವ ಕಡೆ ದಿನವೂ ನೀರು ಬರುತ್ತದೆ. ಈಗ ನಾನು ವಾಸವಾಗಿರುವ ಕಡೆ ದಿನವೂ ನೀರು ಬರುತ್ತದೆ. ಅದು ಏಕೆ ಬರುತ್ತದೆಯೋ ನನಗೆ ಗೊತ್ತಿಲ್ಲ. ನೀರು ಬಿಡಿ ಎಂದು ನಾವು ಕೇಳಲಿಲ್ಲ. ಮಾನ್ಯ ಅಧ್ಯಕ್ಷರೇ, ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ಇಲ್ಲಿ ಮೂರು ತರಹದ ವಿಚಾರಗಳಿವೆ. ಈಗ ನೀವು ಬೆಂಗಳೂರು ನಗರದಲ್ಲಿ ನಾಲ್ಕು ನೂರು ಚಿಲ್ಲರೆ ಸ್ಲಮ್ಸ್‌ಗಳಿವೆಯೆಂದು ಹೇಳಿದಿರಿ.

ಆರನೂರು ಚಿಲ್ಲರೆ ಸ್ಲಮ್ಸ್‌ಗಳಿವೆಯೆಂದೂ ಹೇಳುತ್ತಾರೆ. ಅಲ್ಲಿರತಕ್ಕ ಜನಸಂಖ್ಯೆ 7-8 ಲಕ್ಷ ಎಂದು ಹೇಳುತ್ತಾರೆ. ಅವರಿಗೆ ಖಚಿತವಾಗಿ ಇಷ್ಟೆ ಪ್ರಮಾಣದಲ್ಲಿ ನೀರು ಪೂರೈಸಬೇಕು, ಲೆಟ್ರಿನ್ ಸೌಲಭ್ಯ ಒದಗಿಸಬೇಕೆಂದೇನೂ ಇಲ್ಲ. ಬೆಂಗಳೂರಿನಲ್ಲಿ ಈ ಪರಿಸ್ಥಿತಿ ಹೇಗಿದೆಯೆಂದರೆ, ಇವೊತ್ತಿನ ದಿವಸ ಫುಟ್‌ಪಾತ್ ಮೇಲೆ ಒಬ್ಬರು ಗಾರ್ಡನ್ ಮಾಡುತ್ತಿದ್ದರು. ಫುಟ್‌ಪಾತ್ ಇರುವುದು ಜನರು ಓಡಾಡುವುದಕ್ಕೆ, ನೀವು ಏತಕ್ಕೆ ತೋಟ ಮಾಡುತ್ತಿದ್ದೀರೆಂದು ಕೇಳಿದೆ. ಅದಕ್ಕೆ ಅವರು, ಸ್ವಾಮಿ, ತೋಟ ಮಾಡದೆ ಹೋದರೆ ನಮ್ಮ ಒಳಚರಂಡಿ ಆಳವಾಗಿ ಇರುವುದರಿಂದ ಇದನ್ನು ಜನರು ಪಬ್ಲಿಕ್ ಲೆಟ್ರಿನ್ ಮಾಡಿಕೊಳ್ಳುತ್ತಾರೆ. ಆಗ ನಾವು ಬಲವಂತ ಮಾಡಿದರೂ, ಹೊಡೆದರೂ ಅವರು ಹೋಗುವುದಿಲ್ಲ, ಅದಕ್ಕೆ ನಾವು ಪ್ರಿವೆಂಟ್ ಮಾಡಿಕೊಂಡಿದ್ದೇವೆಂದು ಹೇಳುತ್ತಾರೆ. ಕೆಲವರಿಗೆ ನೇಚರ್ ಕಾಲ್‌ಗೆ ಹೋಗಲು ಸ್ಥಳ ಇಲ್ಲದೇ ಇರತಕ್ಕಂಥ ಪರಿಸ್ಥಿತಿ ಇವೊತ್ತು ಬೆಂಗಳೂರಿನಲ್ಲಿ ನಿರ್ಮಾಣವಾಗಿದೆ. ಆ 8 ಲಕ್ಷ ಲೊಕಾಲಿಟಿ ಎಂಧು ಏನು ಹೇಳುತ್ತೇವೆ, ಅಲ್ಲಿ ನನ್ನ ಅಂದಾಜಿನ ಪ್ರಕಾರ 3-4 ಲಕ್ಷ ಜನರಿರಬಹುದು. ಅವರು ಹೆಚ್ಚು ಕಡಿಮೆ ದಿನವೂ ಸ್ನಾನ ಮಾಡತಕ್ಕಂಥ ಜನರೂ ಇದ್ದಾರೆ. ಅವರಿಗೆಲ್ಲಾ ನೀರು ಸರಬರಾಜಾಗುತ್ತದೆ. ಬೆಂಗಳೂರಿನಲ್ಲಿ 40 X 60, 50 X 80, 60 X 90, 80 X 120 ಅಳತೆಯ ಸೈಟುಗಳು ಮತ್ತು ಕೆಲವು ಕಡೆ 100 X 160 ಅಳತೆಯ ಸೈಟುಗಳಿರುತ್ತವೆ. ಇವರೆಲ್ಲಾ ದೊಡ್ಡ ಸಂಪ್ ಮಾಡಿಕೊಂಡಿರುತ್ತಾರೆ. ಆ ಸಂಪ್ ತುಂಬಾ ನೀರು ತುಂಬಿಸಿಕೊಂಡು ಪಂಪ್ ಮಾಡಿಕೊಳ್ಳುತ್ತಾರೆ. ಅವರಿಗೆ ಯಾವಾಗ ನೀರು ಬಿಟ್ಟರೂ ನಡೆಯುತ್ತದೆ. ಆದರೆ, 30 X 40, 30 X 50, 25 X 40, 20 X 30, ಈ ಕಡಿಮೆ ಅಳತೆಯ ಸೈಟ್ ಇರುವವರಿಗೆ ಏನಾಗುತ್ತದೆಂಧರೆ ಇವರು ನಲ್ಲಿಯಿಂದಲೇ ನೇರವಾಗಿ ನೀರನ್ನು ತಂಬಿಗೆಯಲ್ಲಿ ಹಿಡಿದುಕೊಂಡು ಮನೆಯ ಹಂಡೆ, ಇತರೆ ಪಾತ್ರೆಗಳನ್ನು ತುಂಬಿಸಿಕೊಳ್ಳಬೇಕಾದ ವಾಸ್ತವ ಪರಿಸ್ಥಿತಿ ಇದೆ. ಇವರಿಗೆಲ್ಲಾ ನೀರು ಯಾವಾಗ ಕೊಡುತ್ತಾರೆಂದರೆ, ರಾತ್ರಿ ಹೊತ್ತು. ಆ ಸಮಯದಲ್ಲಿ ಅವರು ಏನು ಮಾಡುತ್ತಾರೆಂದರೆ ನಲ್ಲಿಯನ್ನು ತಿರುಗಿಸಿ ಬಿಡುತ್ತಾರೆ. ಕೊಡ, ಹಂಡೆ ತುಂಬಿದ ಮೇಲೆ ಪೈಪ್ ಹಾಕುವುದು ಹಂಡೆಗೆ ಆ ನೀರು ಬೆಳಗಿನವರೆಗೆ ಹರಿದುಕೊಂಡು ಹೋಗುತ್ತಿರುತ್ತದೆ. ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ, ಮ್ಯಾನೇಜ್‌ಮೆಂಟ್ ಕೂಡ ನಮ್ಮ ದೃಷ್ಟಿಯಲ್ಲಿ ಸ್ವಲ್ಪ ಬದಲಾವಣೆಯಾಗಬೇಕು. ನಾವು ಹೊರಗೆ ಕಾರಿನಲ್ಲಿ ಒಂದು ಘಂಟೆ ಓಡಾಡಿಕೊಂಡು ಬಂದರೆ ಕನಿಷ್ಠ ಪಕ್ಷ ನೀರು ಲೀಕ್ ಆಗತಕ್ಕಂಥ 20 ಹೊಂಡಗಳು ಸಿಗುತ್ತವೆ. ಇದರ ಪರಿಸ್ಥಿತಿ ಹೇಳುತ್ತೇನೆ. ಪೈಪ್‌ನಲ್ಲಿ ನೀರು ಹರಿದುಕೊಂಡು ಹೋದ ಮೇಲೆ ಈ ಹೊಂಡದ ನೀರು ಪುನಃ ಪೈಪ್‌ನೊಳಗೆ ಹೋಗುತ್ತದೆ. ಇದು ಇತತಕ್ಕಂಥ ಪರಿಸ್ಥಿತಿ. ಇದರ ಬಗ್ಗೆ ನಾನು ಯಾರ ಮೇಲೆಯೂ ಆಪಾದನೆ ಮಾಡುತ್ತಿಲ್ಲ. ನನ್ನ ವಿಚಾರವೆಂದರೆ, ನೀರಿನ ಫ್ಲೋಲು ಹೇಗಾಗುತ್ತದೆ ? ಕೆಲವು ಕಡೆ ಡಿಸೆಂಟ್ರಿ ಶುರುವಾಗುತ್ತದೆ, ಏತಕ್ಕಾಗುತ್ತದೆ ? ಕಾಳಪ್ಪ ಬ್ಲಾಕ್ ಎಂದು ನನ್ನ ಕ್ಷೇತ್ರದಲ್ಲಿದೆ. ನನಗೆ ಅಲ್ಲಿಂದ ಮೂರು ಜನ ಮಹಿಳೆಯರು ಒಬ್ಬರಾದ ಮೇಲೊಬ್ಬರು ಫೋನ್ ಮಾಡಿ ಇವೊತ್ತು ನೀರು ಬಿಟ್ಟಿದ್ದಾರೆ ಸಾರ್, ಕುಡಿಯುವ ನೀರಿನ ಜೊತೆ ಸ್ಯೂವರೇಜ್ ನೀರೂ ಬರುತಿದೆ ಎಂದರು. ಇದನ್ನು ನಾನು ಇಲ್ಲಿ ವಾದಕ್ಕೆಂದು ಹೇಳುತ್ತಿಲ್ಲ. ಇವೊತ್ತು ಬೆಳಿಗ್ಗೆ ನನಗೆ ಆದ ಅನುಭವ, ಸಾಕಷ್ಟು

ಮೇಂಟನೆನ್ಸ್ ಬಗ್ಗೆ ಆಸಕ್ತಿ ವಹಿಸಬೇಕು. ಮಾನ್ಯ ಅಧ್ಯಕ್ಷರೇ, ನಾನು ತಮ್ಮಲ್ಲಿ ವಿನಂತಿಸಿಕೊಳ್ಳುವುದೇನೆಂದರೆ, ಈ ವಾಟರ್ ಸಪ್ಲೈ ಮತ್ತು ಸ್ಯೂವರೇಜ್ ಬೋರ್ಡ್‌ನಲ್ಲಿರತಕ್ಕವರಾದಿಯಾಗಿ ಅನಿರೀಕ್ಷಿತ ಭೇಟಿಗಳನ್ನು ಆಗಿಂದಾಗ್ಗೆ ಹಾಕಿಕೊಳ್ಳಬೇಕು. ನಾವು ಎಲ್ಲಿ ಹೋದರೂ ನೀರು ಬಂದಿಲ್ಲವೆಂದು ಹೇಳುತ್ತಾರೆ. ಎರಡನೆಯದಾಗಿ, ದೂರು ಏನೆಂದರೆ, ವಾಲ್‌ಮನ್ ನಾವು ಹೇಳುವಂತೆ ಕೇಳುವುದಿಲ್ಲ. ಉದಾಹರಣೆಗೆ, ಶಂಕರಪುರಂನಲ್ಲಿ ಎಲ್ಲಾ ವಿಚಾರವಂತರು ಇರತಕ್ಕಂಥವರು. ಒಂದು ದೊಡ್ಡ ಸ್ಟೈಟ್‌ನಲ್ಲಿ 12 ಮನೆಗಳನ್ನು ಕಟ್ಟಿಕೊಂಡಿದ್ದಾರೆ. ಅಲ್ಲಿಗೆ ಹೋದಾಗ ಜನ ಸಂಪರ್ಕ ಸಭೆಯಲ್ಲಿ ಜನರು ವಾಲ್‌ಮನ್ ದಿವಸವೂ ನೀರು ಬಿಡಲು ಪ್ರತಿ ಮನೆಗೆ ತಿಂಗಳಿಗೆ ಇಪ್ಪತ್ತು ರೂಪಾಯಿಗಳನ್ನು ಕೊಟ್ಟರೆ ಮಾತ್ರ ಬಿಡುತ್ತೇನೆಂದು ಹೇಳಿದನಂತೆ. ನನಗೆ ಬೆಂಗಳೂರಿನಲ್ಲಿ ನಿಜವಾಗಲೂ ಶಾಸಕನಾಗುವುದು ಇಷ್ಟು ತಲೆನೋವೆಂದು ಗೊತ್ತಿರಲಿಲ್ಲ. ಭಾರಿ ತಲೆನೋವು. ಶಾಸಕರಾದವರು ದಿನ ಬೆಳಗಾದರೆ ಎಲ್ಲರ ಕಾಲಿಗೂ ಫುಟ್‌ಬಾಲ್. ನಾವು ಅವರ ಹತ್ತಿರ ರೇಗುವ ಹಾಗಿಲ್ಲ. ಅವರು ಹೇಳುವ ದೂರುಗಳೆಲ್ಲವನ್ನೂ ಕೇಳಬೇಕು. ಸಣ್ಣಪುಟ್ಟ ವಿಚಾರಗಳ ಕಸ ಗುಡಿಸಿಲ್ಲ, ತೊಟ್ಟಿ ಕಸ ತೆಗೆದಿಲ್ಲ, ಇಂಥ ದೂರುಗಳನ್ನು ಹೇಳುತ್ತಿರುತ್ತಾರೆ. ಇಲ್ಲಿ ಏನಾಗಿದೆಯೆಂದರೆ, ಕೆಳಗಿನ ಮಟ್ಟಕ್ಕೆ ಹೋಗುತ್ತಾ ಹೋಗುತ್ತಾ ಹೆಲ್ತ್ ಇನ್ಸ್‌ಪೆಕ್ಟರ್ ಇರಲಿ, ಜ್ಯೂನಿಯರ್ ಇಂಜಿನಿಯರ್ ಇರಲಿ, ವಾಲ್‌ಮನ್ ಇರಲಿ, ಕಸ ಗುಡಿಸುವವರು ಇರಲಿ, ಅವರಿಗೆ ಯಾವುದೇ ಅಕೌಂಟಬಿಲಿಟಿ ಮತ್ತು ರೆಸ್ಪಾನ್ಸಿಬಿಲಿಟಿ ಇರುವುದಿಲ್ಲ. ದೊಡ್ಡ ಅಧಿಕಾರಿಗಳಾದ ಚೀಫ್ ಇಂಜಿನಿಯರ್, ಎಕ್ಸಿಕ್ಯೂಟಿವ್ ಇಂಜಿನಯರ್ ಇವರಿಗೆ ಹೇಳಬಹುದು. ಅವರು ತಮ್ಮ ಕೆಳಗಿನ ಅಧಿಕಾರಿಗಳಿಗೆ ಹೇಳುತ್ತಾರೆ. ಎಷ್ಟೋ ಬಾರಿ ಇವರು ಹೇಳಿದಂತೆ ಅವರು ಜಾರಿಗೊಳಿಸುವುದಿಲ್ಲ. ಪರಿಸ್ಥಿತಿ ಈ ರೀತಿಯಾಗಿದೆ. ಕೆಲವು ಕಡೆ ನೀರು ಹೋಗುತ್ತದೆ, ಈ ವಾಲ್‌ಮನ್‌ಗಳ ರಾಜಕೀಯದಿಂದಾಗಿ ನೀರು ಎಲ್ಲಾ ಕಡೆ ಸರಬರಾಜಾಗುವುದಿಲ್ಲ. ಇದು ಈಗಾಗಲೇ ಶ್ರೀನಗರದಲ್ಲಿ ನನ್ನ ಅನುಭವಕ್ಕೆ ಬಂದಿದೆ.

ಅಧ್ಯಕ್ಷರು :- ಇದನ್ನು ರಾಜಕೀಯವೆಂದು ಕರೆಯುತ್ತೀರಾ ? ವಾಲ್‌ಮನ್‌ಗಳ ಕೈ ಚಳಕ ಅದು.

ಶ್ರೀ ಎಚ್.ಎನ್.ನಂಜೇಗೌಡ :- ಅದು ಕೈ ಚಳಕವಲ್ಲ. ವಾಲ್‌ಮನ್‌ಗಳ ರಾಜಕೀಯ. ಅವರದೂ ರಾಜಕೀಯ ಇರುತ್ತದೆ. ಅದನ್ನು ಇಲ್ಲಿ ಹೇಳುವುದು ಬೇಡ. ಶ್ರೀನಗರವು ಎಂಟು ವಿಭಾಗಗಳಲ್ಲಿ ಅದೂ ಒಂದು. ಚುನಾವಣೆಯಾದ ನಂತರ ಸುಮಾರು 35 ಬಾರಿ ಅಲ್ಲಿಗೆ ಹೋಗಿದ್ದೇನೆ. ಅಲ್ಲಿ ಜನತೆಗೆ ಸಮಾಧಾನವೇನೆಂದರೆ, ನಮ್ಮ ಕ್ಷೇತ್ರದ ಶಾಸಕರು ಬಂದು ನೋಡುತ್ತಾರೆ, ನಮ್ಮದು ಕೆಲಸ ಮಾಡಿಸುತ್ತಾರೆ ಎಂದು. ನನಗೆ ಇಬ್ಬರು ಮಕ್ಕಳಿದ್ದಾರೆ. ಅವರಿಬ್ಬರೂ ನಿರುದ್ಯೋಗಿಗಳು. ನಮ್ಮ ಸ್ನೇಹಿತರೊಬ್ಬರು ಬಂದು ನನಗೆ ಅವರು ಏನು ಮಾಡುತ್ತಿದ್ದಾರೆಂದು ಕೇಳಿದರು. ನಾನು ಏನು ಮಾಡುತ್ತಿಲ್ಲ ಎಂದೆ. ಅದಕ್ಕೆ ಅವರು ಒಳ್ಳೆಯದೊಂದು ಬಿಸಿನೆಸ್ ಇದೆ, ಹತ್ತಾರು ವರ್ಷಗಳು ನಡೆಯಬಹುದು ಎಂದರು. ಅದಕ್ಕೆ ನಾನು.

ಆ ಬಿಸಿನೆಸ್ ಏನು ? ಎಂದೆ . ಅವರು ಎರಡು ಟ್ಯಾಂಕರ್‌ಗಳನ್ನು ಕಟ್ಟಿಸಿ, ಒಬ್ಬ ಮಗನನ್ನು ನೀರಿನ ವ್ಯಾಪಾರಕ್ಕೆ ಹಾಕಿ ಎಂದರು. ಇದನ್ನು ನಾನು ತಮಾಷೆಗೆ ಹೇಳುತ್ತಿಲ್ಲ. ಇವೊತ್ತು ಏನಾದರೂ ಚೆನ್ನಾಗಿ ಆದಾಯ ಗಳಿಸುತ್ತಿರುವವರೆಂದರೆ, ನೀರಿನ ವ್ಯಾಪಾರ ಮಾಡುತ್ತಿರುವವರು. ಅವರು ಕೈ ತುಂಬಾ ಹಣ ಸಂಪಾದಿಸುತ್ತಿದ್ದಾರೆ. ಅಂತಹ ಪರಿಸ್ಥಿತಿ ಇವೊತ್ತು ಬಂದಿದೆ. ನೀರನ್ನು ಕೊಂಡುಕೊಳ್ಳತಕ್ಕ ಜನರು ಸಾಕಷ್ಟಿದ್ದಾರೆ. ಆದುದರಿಂದ, ನಾನು ಇದನ್ನು ಹೆಚ್ಚಾಗಿ ಅವಲಂಬಿಸಿ ಮಾತನಾಡುವುದಕ್ಕೆ ಹೋಗುವುದಿಲ್ಲ. ಇವೊತ್ತು ಬೆಂಗಳೂರಿನಲ್ಲಿ ಏನು ಸಾರ್ವಜನಿಕ ಅಭಿಪ್ರಾಯ ರೂಪುಗೊಳ್ಳುತ್ತದೆಯೋ that will perculate to all the villages also. ಈ ಸರ್ಕಾರ ಸ್ವಲ್ಪ ದಕ್ಷತೆಯಿಂದ ಕೆಲಸ ನಿರ್ವಹಿಸುತ್ತದೆ, ಚುರುಕಾಗಿದೆ, ರಾಜ್ಯದಲ್ಲಿ ಜನರು ನೆಮ್ಮದಿಯಿಂದಿದ್ದಾರೆಂಬ ಭಾವನೆ ಬರಬೇಕಾದರೆ ಮೊದಲು ಬೆಂಗಳೂರಿನಲ್ಲಿ ಈ ಸರ್ಕಾರದ ಬಗ್ಗೆ ಒಳ್ಳೆಯ ಅಭಿಪ್ರಾಯ ಜನರಲ್ಲಿ ಬರಬೇಕು. ನೀವು ನೀರು, ತೊಟ್ಟಿ ಕಸ ಎತ್ತುವುದು, ಇಂತಹ ಸಣ್ಣ ಪುಟ್ಟ ವಿಚಾರಗಳನ್ನು ಸರಿಪಡಿಸಿದರೆ ಪರವಾಗಿಲ್ಲ ಸರ್ಕಾರ ಚುರುಕಾಗಿದೆ ಎನ್ನುವ ಭಾವನೆ ಬರುತ್ತದೆ. ಅದು ಬೇರೆ ಕಡೆಗೆ ಪರ್ಕ್ಯುಲೇಟ್ ಆಗುತ್ತದೆ. ಆದುದರಿಂದ, ಇದನ್ನು ಲಘುವಾಗಿ ಪರಿಗಣಿಸದೆ ಸ್ವಲ್ಪ ಆಸ್ಥೆ ವಹಿಸಿ ಮಾಡಬೇಕಾಗುತ್ತದೆ. ಕೆಂಪೇಗೌಡ ನಗರದಲ್ಲಿ ಕೆಂಪಾಂಬುದಿ ಕೆರೆ ಎಂದು ಇದೆ. ಇದರ ಸುಮಾರು 5 ಕಿ.ಮೀ.ಫಾರ್ಸಲ್‌ವರೆಗೂ ಸೊಳ್ಳೆ ಕಾಟ ಇದೆ. ಏಕೆಂದರೆ ಚರಂಡಿ ನೀರೆಲ್ಲಾ ಹೋಗಿ ಇಲ್ಲಿಯೇ ನಿಂತುಕೊಳ್ಳುತ್ತದೆ. ಅವರು ಹೇಳುತ್ತಲೇ ಇದ್ದಾರಂತೆ. ಮಾನ್ಯ ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿ ಆದಾಗಿನಿಂದ ನಾವು ಹೇಳುತ್ತಲೇ ಇದ್ದೇವೆ, 83ನೇ ಇಸವಿಯಿಂದ ನಾವು ಹೇಳುತ್ತಾ ಬಂದರೂ ಇನ್ನೂ ಏನೂ ಆಗಿಲ್ಲವೆಂದು ಹೇಳುತ್ತಲೇ ಇದ್ದಾರೆ. ನಾನು ಒಂದು ದಿವಸ ಸುಮಾರು ನಾಲ್ಕುವರೆ ಗಂಟೆ ಕಾಲ ಹೋಗಿ ನಡೆದುಕೊಂಡೇ ಸುತ್ತಿ ನೋಡೋಣ ಇಲ್ಲಿ ಏನು ಪರಿಸ್ಥಿತಿ ಇದೆ ಎಂದು. ಅಲ್ಲಿಗೆ ಬರುವುದೆಲ್ಲಾ ಬರೀ ಚರಂಡಿ ನೀರೇ. ಇಂಥಾದ್ದು 5 ಇದೆ. ಓಪನ್ ಆಗಿ ಅದು ಬರುತ್ತದೆ. ಅಲ್ಲಿ ಅದು ನಿಂತುಬಿಡುತ್ತದೆ. ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ಈ ಪೋರ್ಟ್ ಪೋಲಿಯೋವನ್ನು ಮಾನ್ಯ ಮುಖ್ಯಮಂತ್ರಿಗಳೇ ಇಟ್ಟುಕೊಂಡಿರತಕ್ಕದ್ದು. ಮಂತ್ರಿಗಳು, ಜೊತೆಗೆ ದೊಡ್ಡ ದೊಡ್ಡ ಅಧಿಕಾರಿಗಳು; ಈ ಬೆಂಗಳೂರು ನಗರದಲ್ಲಿ ತಿರುಗಾಡುವ ಪರಿಪಾಠವನ್ನು ಇಟ್ಟುಕೊಳ್ಳಬೇಕು. ಬೆಳಿಗ್ಗೆ ಹೊತ್ತು ಅವರು ಎಲ್ಲಾದರೂ ಹೊರಗಡೆ ಹೋಗಬೇಕಲ್ಲಾ ಅದೇ ಸಮಯದಲ್ಲಿ ಈ ಬೆಂಗಳೂರನ್ನು ತಮ್ಮ ಕಾರಿನಲ್ಲೇ ಸುತ್ತಾಡಲಿ. ಯಾವ ಯಾವ ಬಡಾವಣೆಗಳಲ್ಲಿ ನೀರಿಗೋಸ್ಕರ ಜನರು ಎಷ್ಟೆಷ್ಟು ಕೊಡಗಳನ್ನು ಇಟ್ಟುಕೊಂಡು ಕಾಯುತ್ತಿರುತ್ತಾರೆಂಬುದು ಗೊತ್ತಾಗುತ್ತದೆ. ಇನ್ನು ರಿಗ್ ವೆಲ್ ಬಗ್ಗೆ ಹೇಳುವುದಾದರೆ, ಈ ಬೆಂಗಳೂರಿನ ಶಾಸಕರನ್ನು ಕರೆದು ತಾವು ಒಂದೆರಡು ಸಭೆಗಳನ್ನೂ ಮಾಡಿದಿರಿ. ಬೆಂಗಳೂರಿನ ಸಮಸ್ಯೆಗಳ ಬಗ್ಗೆ ಮೊದಲನೆಯ ಸಭೆಯನ್ನು ಮಾಡಿದಂಥ ಕೀರ್ತಿ ಮಾನ್ಯ ಮುಖ್ಯ ಮಂತ್ರಿಗಳಿಗೆ ಬರುತ್ತದೆ. ಅದನ್ನು ನೀವು ತೆಗೆದುಕೊಳ್ಳಿ, ಸಂತೋಷ. ತಾವೇನೋ ಸಭೆಯನ್ನು ಮಾಡಿದಿರಿ. ನಾನು ತಮಗೆ ಅವತ್ತು ಹೇಳಿದೆ. ತಾವು ಸಭೆಯನ್ನು ಮಾಡಿ ನಮ್ಮ ಅಭಿಪ್ರಾಯಗಳನ್ನು ಕೇಳಿದ ಮೇಲೆ ನೀವು ಹಣವನ್ನು ಕೊಡಬೇಕು. ಈ ಮಾತನ್ನು

ಏತಕ್ಕೆ ಹೇಳುತ್ತಿದ್ದೇನೆಂದರೆ, ಊಟ ಮಾಡಿದ್ದಕ್ಕೆ ಗುರುತು ಎಂದರೆ ಹೊಟ್ಟೆ ತುಂಬಿರಬೇಕು. ಹೊಟ್ಟೆ ಖಾಲಿ ಇದ್ದರೆ ಊಟ ಆದಂತಾಗುವುದಿಲ್ಲ. ನೀವು ನಮ್ಮನ್ನು ಕರೆದ ಮೇಲೆ, ನಮ್ಮ ಸಮಸ್ಯೆಗಳು ಬಗೆಹರಿಯಬೇಕು, ಕೆಲಸ ಆಗಬೇಕು. ರಿಗ್ ವೆಲ್ಸ್‌ಗೆ ಕೊಡುವುದಕ್ಕೆ ವಾಟರ್ ಸಪ್ಲೈ ಬೋರ್ಡ್‌ನಲ್ಲಿ ಹಣ ಇರುವುದಿಲ್ಲ. ಇಲ್ಲಿ 7-7 1/2 ಪರ್ಸೆಂಟ್ ಜನರಿದ್ದಾರೆ. ಅವರು ಯಾರಿಂದ ಆದರೂ ಟ್ಯಾಕ್ಸನ್ನು ಕಲೆಕ್ಟ್ ಮಾಡಿಕೊಳ್ಳಲಿ. They are incidental for the collection of around 30% of the revenue of the State. ಬೆಂಗಳೂರು ಸಿಟಿಯಲ್ಲಿ ಇಷ್ಟು ಜನರಿದ್ದಾರೆ. ನಂಜೇಗೌಡರು ಶಾಸಕರಾಗಿ ಇದೇನನ್ನೋ ಹೇಳುತ್ತಿದ್ದಾರೆಂದು ಅಂದುಕೊಳ್ಳುವುದು ಬೇಡ. ಇರತಕ್ಕ ವಾಸ್ತವ ಸಂಗತಿಯನ್ನು ನಾನು ಹೇಳುತ್ತಿದ್ದೇನೆ, ನನ್ನನ್ನು 4-5 ಜನರು ಇವತ್ತು ಬಂದು ಭೇಟಿ ಮಾಡಿದರು. ಅವರು ಎಂದರೆ ಕೆಲವು ರಿಟೈರ್ಡ್ ಸೀನಿಯರ್ ಆಫೀಸರ್ಸ್. ಅವರು ಏನು ಹೇಳಿದರೆಂದರೆ, ಸ್ವಾಮಿ ತಾವು ಹೋರಾಟಗಾರರಂತೆ, ಈ ಬೆಂಗಳೂರಿನಲ್ಲಿ ಒಂದು ಹೋರಾಟವನ್ನು ಪ್ರಾರಂಭ ಮಾಡಬೇಕು. ಅದಕ್ಕೆ ನೀವು ನಾಯಕತ್ವವನ್ನು ವಹಿಸಿಕೊಳ್ಳಬೇಕು ಎಂದು. ಅದಕ್ಕೆ ನಾನು ಕೇಳಿದೆ, ಅದು ಏನು ಹೇಳಿ ಎಂದು. ನೋ ಫೆಸಿಲಿಟೀಸ್- ನೋ ಟ್ಯಾಕ್ಸ್ ಎನ್ನತಕ್ಕ ಒಂದು ಅಂದೋಳನವನ್ನು ಬೆಂಗಳೂರಿನಲ್ಲಿ ಶುರು ಮಾಡಿ ಎಂದು. ಏಕೆಂದರೆ ನೀರಿನದು ಒಂದೇ ಅಲ್ಲ. ಪ್ರತಿಯೊಂದು ಫೆಸಿಲಿಟೀಸನ್ನೂ ಕೊಟ್ಟರೆ ಟ್ಯಾಕ್ಸ್ ಕೊಡೋಣ. ಇಲ್ಲದಿದ್ದರೆ ನಾವು ಏತಕ್ಕೆ ಕೊಡಬೇಕು ? ಪ್ರಾಪರ್ಟಿ ಟ್ಯಾಕ್ಸ್, ಹೆಲ್ತ್ ಟ್ಯಾಕ್ಸ್ ಇನ್ನೂ ಮುಂತಾದಾದನ್ನೆಲ್ಲಾ ಕೊಡಬೇಕು ? ನಾವು ಯಾವುದನ್ನೂ ಕೊಡುವುದೇ ಬೇಡ. ನೋ ಫೆಸಿಲಿಟೀಸ್-ನೋ ಟ್ಯಾಕ್ಸ್. ಈ ಒಂದು ಅಂದೋಳನವನ್ನು ನೀವು ಶುರು ಮಾಡಿದರೆ ನಿಮಗೆ ಒಳ್ಳೆಯ ಹೆಸರು ಬರುತ್ತದೆ ಎಂಬುದಾಗಿ ಒಂದು ಸಲಹೆಯನ್ನು ಕೆಲವರು ಕೊಟ್ಟರು. ಆದರೆ ಅಂದೋಳನವನ್ನು ಶುರು ಮಾಡಬೇಕೆಂಬ ಮಟ್ಟಕ್ಕೆ ಹೋಗಬೇಕೆಂಬ ಇಚ್ಛೆ ನಮಗೇನೂ ಇಲ್ಲ. ಸರ್ಕಾರದ ಈ ಸಮಸ್ಯೆ ಗಂಭೀರತೆಯನ್ನು ಅರ್ಥ ಮಾಡಿಕೊಂಡು ಹಣವನ್ನು ಬಿಡುಗಡೆ ಮಾಡಬೇಕು. ಏಕೆಂದರೆ ಈ ಮಾತನ್ನು ಇಲ್ಲಿ ಹೇಳಬೇಕೋ ಬಿಡಬೇಕೋ ನನಗೆ ಗೊತ್ತಿಲ್ಲ. ಇವರು ಆನಂತರ ಎರಡು ಮೀಟಿಂಗ್ ಕರೆದರು. ವಾಟರ್ ಸಪ್ಲೈ ಮತ್ತು ಸ್ಯೂವರೇಜ್ ಬೋರ್ಡಿಗೆ ಕನಿಷ್ಟ 1 ಕೋಟಿ ರೂ.ಆದರೂ ಬಿಡುಗಡೆ ಮಾಡುತ್ತೇನೆಂದು ಹೇಳಿದರು. ಆನಂತರ ಅಷ್ಟು ಇಲ್ಲ. ಈಗ 50 ಲಕ್ಷ ರಿಲೀಸ್ ಮಾಡಿದ್ದೇವೆ ಎಂದರು. ಇವರು ಡಿ.ಸಿ.ಗೆ ಕೊಟ್ಟು, ಪಿ.ಹೆಚ್.ಇ.ಗೆ ಕೊಟ್ಟು ಇವರಿಗೆ ಏನೂ ಕೊಟ್ಟೇ ಇಲ್ಲ. ನಾನು ಇದನ್ನು ಕೇಳಿ ಇಷ್ಟು ದುಡ್ಡನ್ನು ಸರ್ಕಾರ ಕೊಟ್ಟಿದೆಯಂತೆ ಎಂದರೆ, ಇಲ್ಲವೆಂದು ಅವರು ಹೇಳುತ್ತಾರೆ. ಹೀಗಾದರೆ ಬಹಳ ಕಷ್ಟವಾಗುತ್ತದೆ. ನಾನು ತಮಗೆ ಸಲಹೆ ಕೊಡುವುದಾದರೆ, ತಾವು ಎರಡು ಯೋಜನೆಗಳನ್ನು ತಯಾರಿಸಿಕೊಳ್ಳಬೇಕು. ಮಾನ್ಯ ಮುಖ್ಯ ಮಂತ್ರಿಗಳೇ ಈ ಬೆಂಗಳೂರು ನಗರ ವಾಟರ್ ಸಪ್ಲೈ ಬೋರ್ಡನ್ನು ಇಟ್ಟುಕೊಂಡಿರುವುದರಿಂದ ತಾತ್ಕಾಲಿಕವಾಗಿ ಏನು ಆಗಬೇಕು ಎಂಬುದನ್ನು ಯೋಚನೆ ಮಾಡಬೇಕು. ನನ್ನ ಅಭಿಪ್ರಾಯ ಹೇಳುವುದಾದರೆ, ಇರತಕ್ಕ ರಿಗ್ ವೆಲ್ಸ್ ರಿಪೇರಿ, ಮಿನಿ ವಾಟರ್ ಸಪ್ಲೈ, ಈ ಕೆಲಸ ಮಾಡಬೇಕು. ಪಬ್ಲಿಕ್ ಟ್ಯಾಪ್ ಎಂದು ಕೊಟ್ಟಿದ್ದಾರೆ. ಕಾರ್ಪೊರೇಷನ್‌ನವರು 10 ಸಾವಿರ ರೂ.ಗಳನ್ನು ಪ್ರತಿ ವರ್ಷ

ಕೊಡುತ್ತಾರಂತೆ. ಅಲ್ಲಿ ನಲ್ಲಿಯೇ ಇರುವುದಿಲ್ಲ. ಇವರು ನೀರು ಬಿಟ್ಟಾಗ ಸಾಲೋದ್ಧಾರವಾಗಿ ಚರಂಡಿಯಲ್ಲಿ ಹರಿದುಕೊಂಡು ಹೋಗುತ್ತಿರುತ್ತದೆ. ಈ ರೀತಿ ವೇಸ್ಟೇಜ್ ಬಹಳಷ್ಟು ಇದೆ. ಇದನ್ನೆಲ್ಲಾ ನಿಲ್ಲಿಸಬೇಕು. ನಮ್ಮಲ್ಲಿ ವಾಟರ್ ಸ್ಕೇರ್ಸಿಟಿ ಬಹಳವಾಗಿದೆ. ಪ್ರತಿಯೊಂದು ಹನಿಯೂ ಬಹಳ ಮುಖ್ಯವಾಗಿದೆ. ಒಂದೊಂದು ಲೆವಲ್‌ನಲ್ಲೂ ಜವಾಬ್ದಾರಿಯನ್ನು ಫಿಕ್ಸ್ ಮಾಡಬೇಕು. ಯಾವುದೋ ಒಂದು ಬೀದಿಯಲ್ಲಿ ಪಬ್ಲಿಕ್ ನಲ್ಲಿಯಲ್ಲಿ ನೀರು ಹರಿದು ಹೋಗುತ್ತಿದ್ದರೆ, ಅದನ್ನು ರಿಪೇರಿ ಮಾಡಿಲ್ಲ ಎಂದರೆ ಅದಕ್ಕೆ ಸಂಬಂಧಪಟ್ಟ ಜೂನಿಯರ್ ಇಂಜಿನಿಯರನ್ನು ಜವಾಬ್ದಾರರನ್ನಾಗಿ ಮಾಡಿ. ಏಕೆಂದರೆ ಎಷ್ಟೋ ಸಾರಿ ನಾನೇ ಫೋನ್ ಮಾಡಿದರೂ ಪಬ್ಲಿಕ್ ಟ್ಯಾಪ್‌ನಲ್ಲಿ ಹರಿದುಹೋಗುತ್ತಿರುವ ನಲ್ಲಿ ರಿಪೇರಿ ಮೂರು ದಿನವಾದರೂ ರಿಪೇರಿ ಆಗುವುದಿಲ್ಲ. ಅದು ಫೌಂಟೇನ್ ರೀತಿಯಲ್ಲಿ ಹೋಗುತ್ತಿರುತ್ತದೆ. ಆದ್ದರಿಂದ ಆಯಾಯ ಹಂತದಲ್ಲಿ ಅಕೌಂಟಬಿಲಿಟಿಯನ್ನು ಫಿಕ್ಸ್ ಮಾಡಬೇಕು. ತಾತ್ಕಾಲಿಕ ವ್ಯವಸ್ಥೆ ಎಂದರೆ ಇದರ ರಿಪೇರಿ ಕೆಲಸ. ಅದು ವಾಟರ್ ಲೈನ್ ಇರಬಹುದು, ರಿಗ್ ವೆಲ್ಸ್ ಇರಬಹುದು, ಮಿನಿ ವಾಟರ್ ಸಪ್ಲೈ ಇರಬಹುದು; ಹೊಸದಾಗಿ ಕೆಲವು ಕಡೆ ನೀವು ರಿಗ್ ವೆಲ್ಸ್ ಹಾಕಬೇಕಾಗಿದೆ, ಟ್ಯಾಂಕನ್ನು ಕಟ್ಟಬೇಕಾಗಿದೆ. ನನ್ನ ಅಂದಾಜಿನ ಪ್ರಕಾರ ಇದಕ್ಕೆಲ್ಲಾ ಸುಮಾರು 2-3 ಕೋಟಿ ರೂ. ಖರ್ಚು ಮಾಡಿದರೆ ಚೆನ್ನಾಗಿ ಮಾಡಬಹುದು. ಇನ್ನು ಖಾಯಂ ಪ್ಲಾನ್ ತಯಾರು ಮಾಡಬೇಕಾದರೆ ಏನು ಮಾಡಬೇಕೆಂಬ ಬಗ್ಗೆ ತಾವು ಒಂದು ಮಾಸ್ಟರ್ ಪ್ಲಾನ್ ತಯಾರು ಮಾಡಿ ತಾವು ಹೇಳಬೇಕು. ಇಲ್ಲದಿದ್ದರೆ ಈ ಸಮಸ್ಯೆ ಬಗೆಹರಿಯುವುದಿಲ್ಲ. ತಮಗೆ ಹೇಳಬೇಕೆಂದರೆ, ಅನೇಕ ಕಡೆಗಳಲ್ಲಿ ವಾಟರ್ ಲೈನ್ ರಸ್ಟ್ ಹಿಡಿದು ಹೋಗಿವೆ. ಅನೇಕ ಕಡೆಗಳಲ್ಲಿ 40-50 ವರ್ಷಗಳ ಹಿಂದೆ ಹಾಕಿದಂಥ ವಾಟರ್ ಲೈನ್ಸ್ ಇವೆ. ಅದನ್ನೆಲ್ಲಾ ಬದಲಾವಣೆ ಮಾಡಬೇಕು. ಇನ್ನು ಕೆಲವು ಕಡೆ ವಾಟರ್ ಪೈಪ್‌ಗಳು ಬಹಳ ಚಿಕ್ಕವು ಇವೆ. ಅವುಗಳಿಗೆ ಲೋಡ್ ಜಾಸ್ತಿ ಆಗಿದೆ. ಲಿಕೇಜ್ ಬಹಳ ಇದೆ. ಶಂಕರಪುರದಲ್ಲಿ ಪೈಪ್‌ಗಳಲ್ಲಿ ನೀರು ಉಕ್ಕಿ ಹರಿಯುತ್ತದೆ ಅದು ಹೇಗಿರಬೇಕೆಂಬುದನ್ನು ತಾವೇ ಯೋಚನೆ ಮಾಡಿ. 35 ಪರ್ಸೆಂಟ್ ರೆವಿನ್ಯೂವನ್ನು ಬೆಂಗಳೂರು ಜನರಿಂದ ಕಲೆಕ್ಟ್ ಮಾಡುತ್ತಾರೆಂದರೆ, ಅವರು ಬೊಂಬಾಯಿಯವರಿಂದ ಮಾಡಬಹುದು, ಹಳ್ಳಿಯವರಿಂದ ಮಾಡಬಹುದು. These people have got a moral right to demand some special grants from the Government for their facilities. ಈ ನಗರಕ್ಕೆ ಸರ್ಕಾರದವರು 4-5 ಕೋಟಿ ರೂ. ಹೆಚ್ಚು ಖರ್ಚು ಮಾಡತಕ್ಕದ್ದು ಇದೆ. ಅದರಲ್ಲೂ ಅಗತ್ಯವಾಗಿ ಬೇಕಾದಂಥ ಕನಿಷ್ಟ ಸೌಲಭ್ಯಗಳಾದ ಕುಡಿಯುವ ನೀರಿಗೆ ಮೊಟ್ಟ ಮೊದಲ ಆದ್ಯತೆಯನ್ನು ಕೊಡಬೇಕೆಂದು ತಮ್ಮ ಮುಖಾಂತರ ಸರ್ಕಾರವನ್ನು ಒತ್ತಾಯ ಮಾಡಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಸ್.ಸುರೇಶ್ ಕುಮಾರ್ (ರಾಜಾಜಿನಗರ) :- ಮಾನ್ಯ ಸಭಾಧ್ಯಕ್ಷರೇ, ಇವತ್ತು ಬೆಂಗಳೂರಿನಲ್ಲಿ ನಾಗರೀಕರಿಗೆ ಸಂಬಂಧಪಟ್ಟ ಯಾವುದೇ ಸಂಸ್ಥೆಯ ಬಗ್ಗೆಯೂ ಕೂಡ ನಾಗರಿಕರಿಗೆ ಒಂದು ಸ್ವಲ್ಪವೂ ನಂಬಿಕೆ ಉಳಿದಿಲ್ಲ. ಕಳೆದ 5-6 ತಿಂಗಳ ಹಿಂದೆ ಈ ಬೆಂಗಳೂರಿನಲ್ಲಿ ಸರ್ವೆ ಮಾಡಿದಂತೆ ಬಿ.ಡಬ್ಲ್ಯು.ಎಸ್.ಎಸ್.ಬಿ,

ಬಿ.ಸಿ.ಸಿ, ಕೆ.ಎಸ್.ಆರ್.ಟಿ.ಸಿ. ಇನ್ನೂ ಮುಂತಾದುವು ಮಾಡಿದಾಗ ಯಾವ ಸಂಸ್ಥೆಗೂ ಕೂಡ ನೂರಕ್ಕೆ ಇಪ್ಪತ್ತಕ್ಕಿಂತ ಹೆಚ್ಚಿಗೆ ಅಂಕಗಳು ಸಿಕ್ಕಲಿಲ್ಲ. ಮಾನ್ಯ ನಂಜೇಗೌಡರು ಹೇಳುತಿದ್ದರು. ಶ್ರೀನಗರದಲ್ಲಿ 3 ಜನರು ಕಂಪ್ಲೆಂಟ್ ಮಾಡಿದರು, ಅಲ್ಲಿ ಡೀಸೆಂಟ್ರಿ ಬಂದಿದೆ, ಬೇರೆ ಕಾಯಲೆ ಬಂದಿದೆ ಎಂದು ಹೇಳಿದರು. ಇವತ್ತು ಬೆಂಗಳೂರಿನಲ್ಲಿ ಒಂದು ಅಭಿಪ್ರಾಯ ಬಂದಿದೆ. ಬಿ.ಡಬ್ಲ್ಯು.ಎಸ್.ಎಸ್.ಬಿ.ಎಂದರೆ ತಮಗೆಲ್ಲಾ ಗೊತ್ತಿರುವಂತೆ ಬೆಂಗಳೂರು ವಾಟರ್ ಸಪ್ಲೈ ಅಂಡ್ ಸ್ಯೂವರೇಜ್ ಬೋರ್ಡ್ ಎಂದು. ಆದರೆ ಬೆಂಗಳೂರು ನಾಗರೀಕರಲ್ಲಿ ಪ್ರಚಲಿತವಾಗಿರುವುದು ಏನೆಂದರೆ, ಬೆಂಗಳೂರು ವಾಟರ್ ಅಂಡ್ ಸ್ಯೂವರೇಜ್ ಸಪ್ಲೈ ಬೋರ್ಡ್ ಎಂದು. ಇದು ಒಂದು ದುರಾದೃಷ್ಟ, ಏಕೆಂದರೆ ಅನೇಕ ಸಾರಿ ನಾವು ಕೇಳಿದ್ದೇವೆ. ಮೋರಿಯ ನೀರು ನಲ್ಲಿಯಲ್ಲಿ ಹೋಗುತ್ತದೆ. ನಲ್ಲಿಯ ನೀರು ಮೋರಿಯಲ್ಲಿ ಹರಿದು ಹೋಗುತ್ತಿರುತ್ತದೆ. ಈ ಅವ್ಯವಸ್ಥೆಯನ್ನು ನಿಲ್ಲಿಸಿ ಈ ಬಿ.ಡಬ್ಲ್ಯು.ಎಸ್.ಎಸ್.ಬಿ.ಯಿಂದ ಜನರಿಗೆ ಒಳ್ಳೆಯದನ್ನು ಮಾಡೋಣವೆಂದು ಅನಿಸಿಲ್ಲ. ಬೆಂಗಳೂರಿನಲ್ಲಿ ಎರಡು ರಾಗ-ಕೇಳಿ ಬರುತ್ತದೆ. ಅದು ಎಂದರೆ ವೋಲ್ಟೇಜ್ ಇದ್ದಾಗ ನೀರು ಇರುವುದಿಲ್ಲ, ನೀರು ಇದ್ದಾಗ ವೋಲ್ಟೇಜ್ ಇರುವುದಿಲ್ಲ. ಆದರೆ ಇವತ್ತು ಬೆಂಗಳೂರಿನಲ್ಲಿ ಎರಡೂ ಇಲ್ಲ. ನಾನು 7-3-1995 ರಲ್ಲಿ ರಾಜಾಜೀ ನಗರಕ್ಕೆ ಸೇರಿದ ಎಲ್ಲಾ ನಗರ ಪಾಲಿಕಾ ಸದಸ್ಯರು, ಹಾಗೂ ಜಲಮಂಡಳಿಯ ಅಧಿಕಾರಿಗಳು ಎಲ್ಲರನ್ನೂ ಸೇರಿಸಿ ಒಂದು ಸಭೆಯನ್ನು ಮಾಡಿದೆ. ನಿಮಗೆ ಏನೇನು ತೊಂದರೆಯಾಗಿದೆ, ಅದಕ್ಕೆ ಏನು ಪರಿಹಾರ ಎಂಬುದನ್ನು ಪತ್ತೆ ಹಚ್ಚಿ ಒಂದು ರೆಸಲ್ಯೂಷನನ್ನು ನಾವು ಮಾಡಿದೆವು. ನಂತರ ನಾನು ವಾಟರ್ ಬೋರ್ಡ್ ಚೇರ್ಮನರ ಹತ್ತಿರ ಹೋದೆ. ನಾನು ಮಾನ್ಯ ಸಭಾಧ್ಯಕ್ಷರ ಮೂಲಕ ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುವುದೇನೆಂದರೆ, ದಯವಿಟ್ಟು ಈ ವಾಟರ್ ಸಪ್ಲೈ ಸಂಸ್ಥೆಗೆ ಪೂರ್ಣಾವಧಿಯ ಅಧ್ಯಕ್ಷರನ್ನು ಹಾಕಿದರೆ ಒಳ್ಳೆಯದು. ಏಕೆಂದರೆ 3 ತಿಂಗಳಿಗೆ ಒಬ್ಬರು, 6 ತಿಂಗಳಿಗೆ ಒಬ್ಬರನ್ನು ಹಾಕುತ್ತೀರಿ. ಇದು ಸರಿಯಾಗುವುದಿಲ್ಲ. ಅನಿರೀಕ್ಷಿತ ಭೇಟಿಯನ್ನು ಕೊಡಬೇಕೆಂದು ಮಾನ್ಯ ಸದಸ್ಯರಾದ ನಂಜೇಗೌಡರು ಹೇಳಿದರು. ನಾವು ವಾಟರ್ ಸಪ್ಲೈ ಬೋರ್ಡ್‌ಗೆ ಭೇಟಿ ಕೊಟ್ಟಾಗ ನಮಗೆ ಸರಪ್ರೈಸ್ ಕಾದಿರುತ್ತದೆ. ಅಲ್ಲಿ ಯಾರು ಚೇರ್ಮನ್ ಆಗಿರುತ್ತಾರೋ ಗೊತ್ತಾಗುವುದಿಲ್ಲ. ನಾನು ಹೋಗಿ ಆ ರೆಸಲ್ಯೂಷನನ್ನು ಆ ಚೇರ್ಮನ್‌ರವರಿಗೆ ಕೊಟ್ಟೆ. ಅವರು ಐ.ಎ.ಎಸ್. ಅಂದರೆ ಐ ಆ್ಯಮ್ ಸಾರಿ ಸರ್ವಿಸ್‌ನವರು. ನಾನು ಕೊಟ್ಟಿದ್ದನ್ನು ಅವರು ಪೂರ್ತಿ ಓದಲೇ ಇಲ್ಲ. ಓದುವುದಕ್ಕಿಂತ ಮುಂಚೆಯೇ ನಮ್ಮಲ್ಲಿ ದುಡ್ಡಿಲ್ಲ ಸ್ವಾಮಿ ಎಂದರು. ದುಡ್ಡು ಏತಕ್ಕೆ ಬೇಕು ಎಂದೇ. ನಾನು ಕೇಳಿರುವುದು ಏನೆಂದರೆ, ಕಾವೇರಿ ನೀರನ್ನು ಹೇಗೆ ರಿಸರ್ವ್ ಪಂಪ್ ಮಾಡಬಹುದು, ಕೆಟ್ಟು ಹೋಗಿರತಕ್ಕ ಬೋರ್‌ವೆಲ್‌ಗಳನ್ನು ಹೇಗಿ ರಿಪೇರಿ ಮಾಡಬಹುದು; ಎಲ್ಲಿಂದ ಪಂಪನ್ನು ಹೆಚ್ಚು ಮಾಡಬಹುದೆಂದು ನಾನು ಕೇಳಿದ್ದೇನೆ. ಆದರೆ ಅದನ್ನು ಕೇಳುವುದಕ್ಕೆ ಅವರು ಸಿದ್ಧವಾಗೇ ಇಲ್ಲ. ನೀವು ಹೊಸ ಬೋರ್‌ವೆಲ್‌ಗಳನ್ನು ಕೇಳುತ್ತೀರಿ, ಯಾರು ಕೇಳಿದರೂ ನಾನು ಹೊಸದಾಗಿ ತೋಡಿಸುವುದಿಲ್ಲ, ನಮಗೆ ದುಡ್ಡು ಕೊಟ್ಟರೇ ತೋಡಿಸುವುದು ಎಂದು ಹೇಳಿದರು. ಅದು ಹೊಸ ಬೋರ್‌ವೆಲ್ ಅಲ್ಲ, ಅದು ಕಟ್ಟಿರುವ ಬೋರ್‌ವೆಲ್, ಅದನ್ನು ರಿಪೇರಿ ಮಾಡಿಕೊಡಬೇಕೆಂದು ನಾನು ಹೇಳಿದೆ. ಅವರಿಗೆ ಪೂರ್ತಿ ಕೇಳುವ ಸೌಜನ್ಯ

ಇರಲಿಲ್ಲ. ಅವರು ಎಷ್ಟು ಎಂದರೆ ನನ್ನಿಂದ ತಪ್ಪಿಸಿಕೊಂಡು ಕೆ.ಐ.ಡಿ.ಡಿ.ಬಿ. ಮೀಟಿಂಗ್ ಇದೆ ಎಂದು ಆ ಮೀಟಿಂಗ್ ಹೋಗುವ ಆತುರದಲ್ಲಿದ್ದರು. ಬೆಂಗಳೂರು ಅಭಿವೃದ್ಧಿ ನೋಡಿಕೊಳ್ಳುತ್ತಿರುವ ಸಚಿವರಿಗೆ ನಾನು ಇದನ್ನು ತಿಳಿಸಿದ್ದೇನೆ. ನನಗೆ ಚೆನ್ನಾಗಿ ಜ್ಞಾಪಕ ಇದೆ, ಹಿಂದೆ ಲಕ್ಷ್ಮೀಸಾಗರ್ ಅವರು ಹೆಚ್.ಯು.ಡಿ.ಮಂತ್ರಿಯಾಗಿ ಬೆಂಗಳೂರನ್ನು ನೋಡಿಕೊಳ್ಳುತ್ತಿದ್ದರು. ಅವರು ಬೆಳಿಗ್ಗೆ 4 ಗಂಟೆಗೆ ನೀರಿನ ಕೊರತೆ ಎಂದು ನೋಡುವುದಕ್ಕೆ ನಮ್ಮ ಪ್ರದೇಶಕ್ಕೆ ಬಂದಿದ್ದರು.

ಅಧ್ಯಕ್ಷರು :- ಅವರಿಗೆ ಮದುವೆ ಆಗಿರಲಿಲ್ಲ, ಮಕ್ಕಳು ಇರಲಿಲ್ಲ. ಆದರೆ ರೋಷನ್ ಬೇಗ್ ಅವರ ವಿಚಾರ ಬೇರೆ.

ಶ್ರೀ ಎಸ್.ಸುರೇಶ್ ಕುಮಾರ್ :- ಆದರೆ ನಾನು ಪದೇ ಪದೇ ಈ ಸಮಸ್ಯೆಯನ್ನು ಹೇಳುತ್ತಿದ್ದೇನೆ. ಒಂದೇ ಒಂದು ಹೆಜ್ಜೆ ಇದರ ಬಗ್ಗೆ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಿಲ್ಲ. ಇನ್ನು ಜಲ ಮಂಡಳಿಯ ವೈಖರಿಯನ್ನು ನೋಡಬೇಕು. ನನಗೆ ಸಂಕಟವಾಗುತ್ತದೆ ಸಭಾಧ್ಯಕ್ಷರೇ, ನಾನು 12 ವರ್ಷಗಳಿಂದ ಈ ಜಲ ಮಂಡಳಿಯನ್ನು ನೋಡುತ್ತಾ ಬಂದಿದ್ದೇನೆ. ಇಲ್ಲಿ ಇಬ್ಬರು ಮುಖ್ಯ ಇಂಜಿನಿಯರ್‌ಗಳು. ಒಬ್ಬರು ಪ್ರಾಜೆಕ್ಟ್‌ಗೆ, ಒಬ್ಬರು ಮೆಯಿಂಟೆನೆನ್ಸ್‌ಗೆ. ಒಬ್ಬರ ಮುಖ ಒಬ್ಬರು ನೋಡುವುದಿಲ್ಲ. ಒಬ್ಬರ ಮಾತು ಇನ್ನೊಬ್ಬರು ಕೇಳುವುದಿಲ್ಲ. ಆ ಪ್ರಾಜೆಕ್ಟ್ ಮಾಡಿ ಎಂದು ಮೆಯಿಂಟೆನನ್ಸ್‌ನವರು ಹೇಳುತ್ತಾರೆ, ಅವರು ಕೆಲಸ ಮಾಡುವುದಿಲ್ಲ. ಎರಡು ಓವರ್ ಹೆಡ್ ಟ್ಯಾಂಕುಗಳು ಪೂರ್ಣವಾಗಿ ಸುಮಾರು ದಿನವಾಗಿದೆ. ಮಹಾಲಕ್ಷ್ಮಿ ಲೇಔಟಿನ 5ನೇ ಬ್ಲಾಕಿನಲ್ಲಿರುವ ಟ್ಯಾಂಕುಗಳನ್ನು ತೆಗೆದುಕೊಳ್ಳಿ, ನೀರು ಬಿಡಿ, ಹ್ಯಾಂಡ್ ಓವರ್ ಮಾಡಿ ಎಂದರೆ ಮಾಡುವುದಿಲ್ಲ. ಇವರು ಅವರ ಬಗ್ಗೆ ಹೇಳುತ್ತಾರೆ, ಅವರು ಇವರ ಬಗ್ಗೆ ಹೇಳುತ್ತಾರೆ. ನಾವು ಗ್ರಿವೆನ್ಸ್ ಸೆಲ್ ಆಗಿಬಿಟ್ಟಿದ್ದೇವೆ. ಇವರ ಪರಸ್ಪರ ಅಭಿಪ್ರಾಯವನ್ನು ನಮ್ಮ ಹತ್ತಿರ ಹೇಳಬೇಕು. ಬೆಂಗಳೂರಿನ ಈ ರೀತಿಯ ಸಮಸ್ಯೆಯನ್ನು ಇವರು ಪರಿಹಾರ ಮಾಡುವುದಕ್ಕಾಗುವುದಿಲ್ಲವೇ ? ನಮಗೆ ಇದು ನಿಜವಾದ ಸಮಸ್ಯೆ. ತಮ್ಮ ಮೂಲಕ ಮಾನ್ಯ ಮುಖ್ಯ ಮಂತ್ರಿಗಳಿಗೆ ಹೇಳುತ್ತೇನೆ ಕಳೆದ 4 ದಿನಗಳಿಂದ ನೀರಿಲ್ಲ, ಬಹಳ ಕ್ರೈಸಿಸ್ ಇತ್ತು. ನಾನು ರಿಸರ್ವಾಯರ್‌ಗೆ ಫೋನ್ ಮಾಡಿದೆ. ಇವತ್ತು ಕರೆಂಟ್ ಇಲ್ಲ, ಕಾವೇರಿಯಲ್ಲಿ ಯಾವ ಪಂಪೂ ಆನ್ ಆಗಿಲ್ಲ ಎಂದು ತಿಳಿಯಿತು. 4 ದಿನಗಳಿಂದ ನೀರು ಇರಲಿಲ್ಲ. ಮುಖ್ಯ ಇಂಜಿನಿಯರ್ ಅವರ ಆಫೀಸಿಗೆ ಫೋನ್ ಮಾಡಿದೆ, ಐದೂವರೆ ಗಂಟೆಯಲ್ಲಿ ಅಧಿಕಾರಿಗಳು ಇಲ್ಲ. ಕೇಳಿದರೆ ಮನೆಗೆ ಹೋಗಿದ್ದಾರೆಂದು ಹೇಳುತ್ತಾರೆ. ಮನೆಗೆ ಹೋದರೆ ಸಿಕ್ಕಿದರು. ಕ್ರೈಸಿಸ್ ಗೈಂನಲ್ಲಿ ಒಂದು ಕ್ರೈಸಿಸ್ ಮ್ಯಾನೇಜ್‌ಮೆಂಟ್ ಸೆಲ್ ಮಾಡೋಣ, ಮಾನಿಟರ್ ಮಾಡೋಣ, ರಾತ್ರಿ 8-9 ಗಂಟೆಯವರೆಗೆ ಕೂಡೋಣ ಜನರಿಗೆ ಅನುಕೂಲ ಮಾಡೋಣವೆಂದು ಏಕೆ ಅನ್ನಿಸುವುದಿಲ್ಲ ಇವರಿಗೆ ? ಇದುವರೆಗೆ ಸುಮ್ಮನೆ ಓಡಾಡಿದ್ದಾರೆ. ಅವರು ಮಾಡಬೇಕಾದ ಕೆಲಸವನ್ನು ನಾವು ಚುನಾಯಿತ ಪ್ರತಿನಿಧಿಗಳು ಮಾಡುತ್ತಿದ್ದೇವೆ. ನಾವು ಸಭೆ ಸೇರಿಸುವುದು ನಾವು ಪರಿಹಾರ ಹುಡುಕುವುದು ಮಾಡುತ್ತಿದ್ದೇವೆ. ಇದಕ್ಕೆ ಒಂದು ಕಾಯಕಲ್ಪವನ್ನು ಮುಖ್ಯ

ಮಂತ್ರಿಗಳು ಕೊಡುತ್ತಾರೆಯೇ ? ಇದರ ಬಗ್ಗೆ ಏನಾದರೂ ಯೋಚನೆ ಮಾಡುತ್ತಾರೆಯೇ ? ಏಕೆಂದರೆ ಇನ್ನು ಬರುವ ಎರಡು ಮೂರು ತಿಂಗಳು ಏನಿವೆ, ಆ ತಿಂಗಳಲ್ಲಿ ಬೆಂಗಳೂರು ನಗರದ ನಾಗರೀಕರಿಗೆ ಬಹಳ ತೊಂದರೆ ಇವೆ. ಇದರ ಮಧ್ಯೆ ನಮ್ಮ ಉಪ ಮುಖ್ಯ ಮಂತ್ರಿಗಳು ಜೂನ್ ತಿಂಗಳವರೆಗೆ ವಿದ್ಯುತ್ ಸರಬರಾಜಿನಲ್ಲಿ ಅಡೆತಡೆ ಇರುವುದಿಲ್ಲವೆಂದು ಸ್ಟೇಟ್‌ಮೆಂಟ್ ಕೊಡುತ್ತಾರೆ. ಜನರು ಕೇಳುತ್ತಾರೇ, ರಾಜಾಜಿನಗರದಲ್ಲಿ ಮಾತ್ರ ಏಕೆ ಕರೆಂಟ್ ಇಲ್ಲವೆಂದು. ವಿದ್ಯುತ್ ಸಚಿವರು ಹೇಳಿದ್ದಾರೆ ಇಲ್ಲಿ ಏತಕ್ಕೆ ಕರೆಂಟ್ ಇಲ್ಲವೆಂದು ಕೇಳುತ್ತಾರೆ. ಬೆಂಗಳೂರು ಅಭಿವೃದ್ಧಿಗೆ ಹೊಂದಿಕೊಂಡಿರುವ ಸಚಿವರು ಹೇಳುತ್ತಾರೆ ವಾರದಲ್ಲಿ ಎರಡು ದಿನ ನೀರಿಲ್ಲದ ಸ್ಥಿತಿ ಏನಿದೆ ಇದನ್ನು ತಪ್ಪಿಸುತ್ತೇವೆ ಎಂದು. ಪುಣ್ಯ, ವಾರಕ್ಕೆ ಎರಡು ದಿನ ನೀರು ಕೊಟ್ಟರೆ ಸಾಕಾಗಿದೆ, ಇನ್ನು ಎರಡು ದಿನ ತಪ್ಪಿಸುವುದು ಎಂಥದ್ದು ? ಅನೇಕ ಕಡೆ ಮಧ್ಯೆ ರಾತ್ರಿ ಒಂದರಿಂದ ಮೂರು ಗಂಟೆಯವರೆಗೆ ಸಪ್ಲೈ ಟೈಂ ಎಂದು ಹೇಳುತ್ತಾರೆ. ನಲ್ಲಿಯಲ್ಲಿ ನೀರು ಭರುತ್ತದೆಯೋ ಇಲ್ಲವೋ ಕಣ್ಣಿನಲ್ಲಿ ಮಾತ್ರ ನೀರು ಬರುತ್ತದೆ. ನಲ್ಲಿಯಲ್ಲಿ ನೀರು ಬರುವುದಿಲ್ಲ. ನಾವು ಆ ಸಮಯದಲ್ಲಿ ವಾಲ್‌ಮ್ಯಾನ್ ಹುಡುಕಿಕೆಂಡು ಓಡಾಡಬೇಕು. ಏತಕ್ಕೆ ನೀರು ಸರಬರಾಜು ಮಂಡಳಿಯವರು ರಾತ್ರಿ 11 ರೊಳಗೆ ಮತ್ತು ಬೆಳಿಗ್ಗೆ 4 ಗಂಟೆ ಆದ ಮೇಲೆ ಸಪ್ಲೈ ಕೊಡಬಾರದು ? ನಮ್ಮ ಇಂಜಿನಿಯರ್ ಹೇಳುತ್ತಾರೆ ರಾತ್ರಿ ನೀರು ಬಂದಿರುತ್ತದೆ, ಹಿಡಿದುಕೊಂಡಿರುವುದಿಲ್ಲ, ಎಲ್ಲಾ ಮಲಗಿರುತ್ತಾರೆ ಎಂದು. ರಾತ್ರಿ ಮಲಗದೆ ಹಗಲು ಮಲಗಬೇಕೆ ? ಇದು ಬಹಳ ವಿಚಿತ್ರ. ರಾತ್ರಿ ಒಂದು ಗಂಟೆಗೆ ಮಲಗಿರುತ್ತಾರೆಂದು ಇಂಜಿನಿಯರ್ ಕೊಡುವ ಉತ್ತರ. ಈ ಸಂದರ್ಭದಲ್ಲಿ ನಾನು ಕೇಳುತ್ತೇನೆ, ನೀವು ಕೊಡುವ ನೀರನ್ನು ಉಪಯೋಗಿಸುವ ಸಮಯದಲ್ಲಿ ಏತಕ್ಕೆ ಕೊಡಬಾರದು ? ಉಪಯುಕ್ತ ಪ್ರಮಾಣದಲ್ಲಿ, ಉಪಯುಕ್ತ ಒತ್ತಡದಲ್ಲಿ ಏತಕ್ಕೆ ಕೊಡಬಾರದು ? ನಾನು 8-10 ದಿನಗಳಿಂದ ಹೇಳುತ್ತಾ ಬಂದಿದ್ದೇನೆ. ದಯವಿಟ್ಟು ಮನೆ ಕಟ್ಟುವಾಗ ಸಂಪುಗಳ ಗಾತ್ರವನ್ನು ನಿಗದಿಪಡಿಸಿ ಎಂದು. ಸ್ವಿಮಿಂಗ್ ಪೂಲ್‌ಗಿಂತ ದೊಡ್ಡ ಸಂಪು ತೊಡುತ್ತಾರೆ. ಅದನ್ನು ನೋಡಿದರೆ ಗಾಬರಿ ಆಗುತ್ತದೆ. ಅದರ ನಿಯಂತ್ರಣವನ್ನು ನಗರಪಾಲಿಕೆಯವರು ಮಾಡುವುದಿಲ್ಲ, ಜಲ ಮಂಡಲಿಯವರು ಮಾಡುವುದಿಲ್ಲ. ಕೆಳಗಡೆ ಮನೆ ಇದ್ದರೆ ಸಂಪು ತುಂಬಿದ ಮೇಲೆ ಮೇಲುಗಡೆ ಮನೆಯವರಿಗೆ ನೀರು ಬರುವುದು. ಇಂಥ ಪರಿಸ್ಥಿತಿ ನಮ್ಮ ಬೆಂಗಳೂರು ನಗರದಲ್ಲಿ. ಇದರ ಬಗ್ಗೆ ಜಲ ಮಂಡಲಿ ಯೋಚನೆ ಮಾಡಿದೆಯೇ ? ಇದೆಲ್ಲಾ ನೀವು ನೋಡುವಾಗ ಇದಕ್ಕೆ ಪರಿಹಾರ ಹುಡುಕಬೇಕಾಗಿತ್ತು. ಇದು ಹೊಸದಾಗಿ ಬಂದಿರುವ ಸಮಸ್ಯೆ ಅಲ್ಲ; ದಿಡೀರನೆ ಬಂದಿರತಕ್ಕ ಸಮಸ್ಯೆ ಅಲ್ಲ. ಡಿಸೆಂಬರ್ 27-28ರಲ್ಲಿ ಇದೇ ಸದನದಲ್ಲಿ ನಂಜೇಗೌಡರು, ಪ್ರಮೀಳಾ ನೇಸರ್ಗಿಯವರು ಮತ್ತು ನಾನು ಇದೇ ರೀತಿ ಒಂದು ನಿರ್ಣಯವನ್ನು ಕಳುಹಿಸಿದ್ದೆವು. ಅವತ್ತು ಮುಖ್ಯ ಮಂತ್ರಿಗಳು ಹೇಳಿದರು, ಇಲ್ಲಿ ಚರ್ಚೆ ಮಾಡುವುದು ಬೇಡ, ನಾನು ಸಂಬಂಧಪಟ್ಟ ಶಾಸಕರ ಕ್ಷೇತ್ರಕ್ಕೆ ಏನು ಸಮಸ್ಯೆ ಇದೆ ಅದನ್ನು ಪರಿಹಾರ ಮಾಡುತ್ತೇನೆ. ಇದುವರೆಗೆ ಜಲ ಮಂಡಲಿಯವರು ಬಂದಿಲ್ಲ. ಜನವರಿ ಆದ ಮೇಲೆ ಫೆಬ್ರವರಿ ಬರುತ್ತದೆ, ಫೆಬ್ರವರಿ ಆದ ಮೇಲೆ ಮಾರ್ಚ್ ಬರುತ್ತದೆ, ಮಾರ್ಚ್ ಆದ ಮೇಲೆ ಎಪ್ರಿಲ್ ಬರುತ್ತದೆ ಎಂಬುದು ಗೊತ್ತಿದ್ದು ಏನು ಕ್ರಮ ತೆಗೆದುಕೊಂಡರು ಅವರು ? ಅವರಿಗೆ ಗೊತ್ತಿರಲಿಲ್ಲವೇ,

ನೀರಿನ ಸಮಸ್ಯೆ ಬರುತ್ತದೆ ಓಲ್ಟೇಜ್ ಕಡಿಮೆ ಆಗುತ್ತದೆ ಎಂದು. ಹಿಂದೆ ಇಡೀ ಬೆಂಗಳೂರು ನಗರಕ್ಕೆ ಆಲ್ಟರ್‌ನೇಟ್ ಡೇಸ್ ನೀರು ಸರಬರಾಜು ಮಾಡುತ್ತೇವೆಂದು ಮಾಡಿದರು. ಇವತ್ತು ಏನಾಗಿದೆ ಎಂದರೆ ಈ ದೇಶದಲ್ಲಿ ಎರಡು ರಾಷ್ಟ್ರಗಳು ಅಂದ ಹಾಗೆ ಒಂದು ಇಂಡಿಯ ಇನ್ನೊಂದು ಭಾರತ ಎಂದು ನಂಜೇಗೌಡರು ಹೇಳಿದ ಹಾಗೆ ಇವತ್ತು ಶನಿವಾರ, ಮಂಗಳವಾರ ಸೇರಿ ಪ್ರತಿ ದಿನ ನೀರು ಬರುವ ಬೆಂಗಳೂರಿಗೆ ವಾರಕ್ಕೆ ಒಂದು ದಿನ ನೀರು ಬಾರದೆ ಬೆಂದ ಕಾಡೂರು ಆಗಿದೆ. ಏತಕ್ಕೆ ಈ ತಾರತಮ್ಯ ? ನಾನು ಸ್ಪೆಸಿಫಿಕ್ ಆಗಿ ಬೆಂಗಳೂರಿನ ಉತ್ತರ ಭಾಗಕ್ಕೆ ಸೇರಿದ ಸೂಪರಿಂಟೆಂಡಿಂಗ್ ಇಂಜಿನಿಯರ್ ಅವರನ್ನು ಕೇಳಿದೆ, ಬಸವನಗುಡಿಗೆ ಏತಕ್ಕೆ ಬರುತ್ತದೆ, ಇಲ್ಲಿ ಏತಕ್ಕೆ ಬರುವುದಿಲ್ಲ ಎಂದು. ಕಳೆದ ವರ್ಷ ತಿಪ್ಪಗೊಂಡನಹಳ್ಳಿಯಲ್ಲಿ ಒಂದೇ ಅಡೀ ನೀರು ಬಂದಿತ್ತು. ಅದನ್ನು ಜೂನ್ ವರೆಗೆ ಎಳೆಯುವುದು ಕಷ್ಟ ಎಂದು ಗೊತ್ತು. ಆದರೂ ಕೂಡ ಬೇರೆ ವ್ಯವಸ್ಥೆ ಏಕೆ ಮಾಡಿಲ್ಲ ? ಇದಕ್ಕೆ ಪರಿಹಾರ ಏನು ಎಂಬುದು ನನ್ನ ಪ್ರಶ್ನೆ. ಇವತ್ತು ಬೆಳಿಗ್ಗೆ ಹೇಳುತ್ತಾರೆ, ಓಲ್ಟೇಜ್ ಇಲ್ಲ, ಅಡ್ಜಸ್ಟ್ ಮಾಡಿಕೊಳ್ಳಿ, ಲಾರಿಯಲ್ಲಿ ನೀರು ಕಳುಹಿಸುತ್ತೇವೆ ಎಂದು. ಲಾರಿಯಲ್ಲಿ ನೀರು ಕೊಟ್ಟು ವಿಶ್ವಾಸದಿಂದ ಜೀವನ ಮಾಡುವ ಜನರ ನಡುವೆ ಜಗಳ ತಂದೊಡ್ಡುತ್ತಾರೆ ಜಲ ಮಂಡಲಿಯವರು. ಈ ಸಂದರ್ಭದಲ್ಲಿ ನಾನು ಹೇಳುವುದು, ಈಗಾಗಲೇ ಛೇರ್ಮನ್ನರ ಬಗ್ಗೆ ಹೇಳುತ್ತಾ ಹೇಳಿದೆ, ಛೇರ್ಮನ್ ರನ್ನು ಹೇಗೂ ನೇಮಕ ಮಾಡುತ್ತಾರೆ, ಕಳೆದ ವರ್ಷ ಜನವರಿಯಲ್ಲಿ ನೇಮಕ ಮಾಡಿದಿರದ, ಅವರು ಬಂದರು ಅವರಿಗೆ ಏನೋ ಜ್ಞಾನೋದಯವಾಯಿತು, ಇದುವರೆಗೆ ಯಾರ್‍ಯಾರು ಅನಧಿಕೃತ ಕನೆಕ್ಷನ್ ತೆಗೆದುಕೊಂಡಿದ್ದಾರೆ ಅವರದನ್ನೆಲ್ಲಾ ರೆಗ್ಯುಲರೈಸ್ ಮಾಡುತ್ತೇವೆಂದು ಸ್ಟೇಟ್‌ಮೆಂಟ್ ಕೊಟ್ಟರು. 15 ದಿನಗಳಲ್ಲಿ ಬೆಂಗಳೂರು ನಗರದಲ್ಲಿ 70-80 ಅನ ಆಥರೈಸ್ಡ್ ಕನೆಕ್ಷನ್ ಆಯಿತು. ಅದನ್ನು ನಿಯಂತ್ರಿಸುವುದಕ್ಕೆ ಆಗಲಿಲ್ಲ. ಯಾರು ಯಾರು ಅನ್ ಅಥರೈಸ್ಡ್ ಕನೆಕ್ಷನ್ ತೆಗೆದುಕೊಂಡಿದ್ದಾರೆ ಅವರಿಗೆ ನೀರು ಹೋಯಿತು. ಯಾರು ಟ್ಯಾಕ್ಸ್ ಕಟ್ಟುತ್ತಾರೆ ಅವರಿಗೆ ನೀರು ಬರುವುದಿಲ್ಲ. ಈ ರೀತಿ ಪರಿಸ್ಥಿತಿ ತಂದೊಡ್ಡಿದ್ದಾರೆ. ಬೋರ್‌ವೆಲ್ ರಿಪೇರಿ ಬಗ್ಗೆ ವಾರ್‌ಫುಟಿಂಗ್ ಮೇಲೆ ರಿಪೇರಿ ಮಾಡಿಸಿ ಎಂದು ಎಷ್ಟು ಹೇಳಿದರೂ ಇವತ್ತಿಗೂ ಬೋರ್‌ವೆಲ್ ರಿಪೇರಿ ಆಗಿಲ್ಲ. ಬೋರ್‌ವೆಲ್ ರಿಪೇರಿ ಮಾಡುವುದಕ್ಕೆ ಬೇಕಾದ ಉಪಕರಣಗಳನ್ನು ತೆಗೆದುಕೊಂಡು ಬರುತ್ತಾರೆ, ಅಷ್ಟರಲ್ಲಿ ಮಕ್ಕಳು ಕಲ್ಲು ಹಾಕಿ ಮುಚ್ಚಿರುತ್ತಾರೆ. ಬೋರ್‌ವೆಲ್ ರಿಪೇರಿ ಮಾಡಿಸದಷ್ಟು ಬಡತನ ಬಂದಿದೆಯೇ ಈ ಜಲ ಮಂಡಳಿಗೆ ? ದುರ್ಭಿಕ್ಷದಲ್ಲಿ ಅಧಿಕ ಮಾಸ ಅಂದ ಹಾಗೆ ಆಗಿದೆ. ಮಿನಿ ವಾಟರ್ ಸ್ಕೀಂ ಏನಿದೆ ಅದರ ಎದುರು ಎಲೆಕ್ಟ್ರಿಸಿಟಿ ಬೋರ್ಡ್ ಕಟ್ಟಿ. ಮಿನಿ ವಾಟರ್ ಸ್ಕೀಂ ಫ್ಯೂಸ್ ಕಿತ್ತುಕೊಂಡು ಹೋಗಿ ಬೆಂಗಳೂರು ಜನರಿಗೆ ನೀರು ಕೊಡದ ಪರಿಸ್ಥಿತಿ ಬಂದಿದೆ. ಬೇಸಿಗೆ ಮುಗಿಯುವವರೆಗೆ ಕೆ.ಇ.ಬಿ. ಅವರು ಮಿನಿ ವಾಟರ್ ಸ್ಕೀಂ ಕನೆಕ್ಷನ್, ಫ್ಯೂಸ್ ತೆಗೆಯದೆ ನೀರು ಬರುವುದಕ್ಕೆ ಈ ಸಭೆಯು ತೀರ್ಮಾನ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. 21ನೇ ತಾರೀಖು ಮಾನ್ಯ ರಾಮಲಿಂಗ ರೆಡ್ಡಿಯವರು ಮಾನ್ಯ ಮುಖ್ಯ ಮಂತ್ರಿಗಳಿಗೆ ನೇರವಾಗಿ ಪ್ರಶ್ನೆ ಕೇಳಿದ್ದಾರೆ. ನಗರಸಭಾ ಚುನಾವಣೆಯಲ್ಲಿ ಓಟು ಹಾಕುವ ಜನರು ಎಲ್ಲೆಲ್ಲಿ ಇದ್ದಾರೆ ಅವರಿಗೆಲ್ಲಾ ಜಲ ಮಂಡಲಿಯವರು ನೀರು ಕೊಡಬೇಕು. ಗಣೇಶ ಬ್ಲಾಕ್ ಎಂದು ಇದೆ, ದಾಸರಹಳ್ಳಿ

ಎಂದು ಇದೆ ಇಲ್ಲೆಲ್ಲ ಅವರು ಕಂದಾಯ ಕಟ್ಟುತ್ತಿರುವ ಸಂದರ್ಭದಲ್ಲಿ ಅವರಿಗೆ ನೀರು ಬರುತ್ತಿಲ್ಲ. ಜಲ ಮಂಡಲಿಯ ಅಧಿಕಾರಿಗಳು ಹೇಳುತ್ತಾರೆ ನಾವು ನೀರು ಕೊಡುವುದಕ್ಕಾಗುವುದಿಲ್ಲ ಎಂದು. ಏತಕ್ಕೆ ಈ ತಾರತಮ್ಯ ? ದೂರದಲ್ಲಿರುವ ಯಾವುದೋ ಸ್ಥಳಗಳಿಗೆ ನೀರು ಕೊಡುತ್ತಾರೆ, ಉದ್ದಿಮೆಗಳಿಗೆ ಕೊಡುತ್ತಾರೆ, ಫೈವ್ ಸ್ಟಾರ್ ಹೋಟೆಲುಗಳಿಗೆ ಕೊಡುತ್ತಾರೆ, ಜನ ಸಾಮಾನ್ಯರಿಗೆ ನೀರು ಕೊಡುವುದಕ್ಕೆ ಏನಾಗಿದೆ ? ಇದೆಲ್ಲದರ ಹಿನ್ನಲೆಯಲ್ಲಿ ಈ ಸಭೆಯಲ್ಲಿ ನಾನು ಕೋರಿಕೊಳ್ಳುವುದೇನೆಂದರೆ ಬೆಂಗಳೂರು ಜನ ಬೆಂದಿದ್ದಾರೆ. ಬಜೆಟ್ ಬಂದ ಕೂಡಲೇ ಇನ್ನೂ ಹೆಚ್ಚು ಗಾಬರಿಯಾಗಿದ್ದಾರೆ. ಈ ಹಿನ್ನಲೆಯಲ್ಲಿ ಸೌಲಭ್ಯ ಕೊಡದಿದ್ದರೆ ಆ ಜನರ ಆಕ್ರೋಶ ಎದುರಿಸುವುದಕ್ಕಾಗುವುದಿಲ್ಲ. ಪ್ರಾಯಶ: ನಾವು ಅದಕ್ಕೆ ಮುಂಚೂಣಿಯಲ್ಲಿದ್ದು ದಿಕ್ಕು ತೋರಿಸಬೇಕಾಗುತ್ತದೆಂದು ಹೇಳಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ರಾಮಲಿಂಗ ರೆಡ್ಡಿ (ಜಯನಗರ) :- ಮಾನ್ಯ ಅಧ್ಯಕ್ಷರೇ, ಒಂದು ಬೆಂಗಳೂರು ನಗರದ ಕುಡಿಯುವ ನೀರಿನ ಸಮಸ್ಯೆಯ ಬಗ್ಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ. ಸುಮಾರು 15-20 ವರ್ಷಗಳ ಹಿಂದೆ ಈ ವಿಚಾರದಲ್ಲಿ ಯಾವಾಗ ಹೋರಾಟವನ್ನು ನಾನು ವಿದ್ಯಾರ್ಥಿ ದೆಸೆಯಲ್ಲಿದ್ದಾಗಲೇ ಪ್ರಾರಂಭ ಮಾಡಿದೆ. ಅಂದಿನಿಂದ ನೀರನ ಸಮಸ್ಯೆ ಬೆಂಗಳೂರು ಸಿಟಿಯಲ್ಲಿ ಇಷ್ಟೊಂದು ತೀವ್ರವಾಗಿ ಇರಲಿಲ್ಲ ಎನ್ನುವುದು ನನ್ನ ಭಾವನೆ. ಇದನ್ನು ನಮ್ಮ ಸ್ನೇಹಿತರೂ ಒಪ್ಪಿಕೊಳ್ಳುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ಈ ವಿಚಾರದಲ್ಲಿ ಮಾನ್ಯ ರೋಷನ್ ಬೇಗ್ ರವರಿಗೆ 8-10 ದಿವಸಗಳ ಹಿಂದೆಯೇ ಫೋನ್ ಮಾಡಿ ತಿಳಿಸಿದೆ. ಅವರೂ ಈ ನೀರಿನ ಸಮಸ್ಯೆ ಬಗ್ಗೆ ಚರ್ಚೆ ಮಾಡೋಣ ಎಂದು ಹೇಳಿದರು. ಅದು ಆದ ಮೇಲೆ ಮಾರನೆಯ ದಿವಸ ಮೀಟಿಂಗ್ ಕರೆದಿದ್ದರು. ಅಲ್ಲಿಗೆ ಬೆಂಗಳೂರು ನಗರ ನೀರು ಸರಬರಾಜು ಹಾಗೂ ಒಳ ಚರಂಡಿ ಮಂಡಲಿಯ ಅಧಿಕಾರಿಗಳೂ ಬಂದಿದ್ದರು. ಅಲ್ಲಿ ಬೆಂಗಳೂರು ನಗರದ ನಾಗರೀಕರಿಗೆ ನೀರನ್ನು ಕೊಡಬೇಕು ಎಂದು ಕೇಳಿದಾಗ ಅವರು ಹೇಳಿದರು, ನಮಗೆ ಓಲ್ಟೇಜ್ ಪ್ರಾಬ್ಲಂನಿಂದ ನೀರು ಬರುತ್ತಿಲ್ಲ, ಇದರಿಂದ ತೊಂದರೆಯಾಗಿದೆ, ನಮ್ಮದೇ ಸ್ವಂತ ಜನರೇಟರನ್ನು ಹಾಕಿಕೊಳ್ಳೋಣ ಎಂದರೆ 40-50 ಲಕ್ಷ ಜನರು ಕಾವೇರಿ ನೀರನ್ನೇ ನಂಬಿಕೊಂಡಿರತಕ್ಕ ಜನ ಇದ್ದಾರೆ. ಪ್ರತಿ ವರ್ಷವೂ ಇದು ಆಗುತ್ತಿರುತ್ತದೆ. ಮಳೆ ಚೆನ್ನಾಗಿ ಆಗದಿದ್ದ ಪಕ್ಷದಲ್ಲಿ ಸಾಮಾನ್ಯವಾಗಿ ಈ ತೊಂದರೆ ಬರುತ್ತದೆ. ಬೆಂಗಳೂರು ನಗರದಲ್ಲಿ ಬಿ.ಡಿ.ಎ.ಮತ್ತು ಕಾರ್ಪೊರೇಷನ್ ವ್ಯಾಪ್ತಿಯಲ್ಲಿ ಬರತಕ್ಕ ಪ್ರದೇಶಗಳಲ್ಲಿರತಕ್ಕ ಜನರಿಗೆ ವಾಟರ್ ಸಪ್ಲೈ ತೊಂದರೆ ಇಲ್ಲ. ಆದರೆ ಸ್ಲಮ್‌ಗಳು ಏನು ಇದೆ ಅವುಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಈ ಸಮಸ್ಯೆ ಇದೆ. ನನ್ನ ಕ್ಷೇತ್ರದಲ್ಲಿ ಸೋಮೇಶ್ವರ ನಗರ ಎಂದು ಇದೆ. 6-7 ವರ್ಷಗಳಾಗಿವೆ ಆ ಪ್ರದೇಶವನ್ನು ಕಾರ್ಪೊರೇಷನ್‌ಗೆ ಸೇರಿಸಿಕೊಂಡು. ಆದರೆ ಈಗಲೂ ಅಲ್ಲಿ ಕೊಳಾಯಿಗಳನ್ನು ಹಾಕಿಲ್ಲ. ಆ ಪ್ರದೇಶದಲ್ಲಿ 1985 ರಲ್ಲಿ ನಗರ ಸಭೆಗೆ ಸೇರಿಸಿಕೊಂಡು ರೆಗ್ಯುಲರೈಸ್ ಮಾಡಿದ್ದಾರೆ. 10 ವರ್ಷವಾಯಿತು, 10 ವರ್ಷವಾದರೂ ವಾಟರ್ ಸಪ್ಲೈ ಲೈನ್ ಬಂದಿಲ್ಲ. ಒಂದೋ ಎರಡೋ ಕೊಳವೆ ಬಾವಿಗಳನ್ನಾದರೂ ಬೇಗನೆ ಹಾಕಿ. ನಾವು

ಅಧಿಕಾರದಲ್ಲಿರುವಾಗ ಆ ಪ್ರದೇಶಕ್ಕೆ ನೀರನ್ನು ಕೊಡಬೇಕೆಂದು ಬಹಳ ಪ್ರಯತ್ನ ಮಾಡಿದೆವು. ಕಾವೇರಿ 3ನೇ ಹಂತವನ್ನು ಬೇಗ ಮುಗಿಸಬೇಕೆಂದು ಅದಕ್ಕೆ ಬೇಕಾದ ಹಣವನ್ನು ಕೊಟ್ಟು ಮುಗಿಸಿದ್ದೇವೆ. ಅದು ಮುಗಿಯಿತು. ಅದನ್ನು ಮುಗಿಸಿ 4ನೇ ಹಂತದ ಯೋಜನೆಗೆ ಫೌಂಡೇಷನ್ ಸ್ಟೋನ್ ಕೂಡ ಹಾಕಿದ್ದೇವೆ. ಅದಕ್ಕೆ ಯಾವ ರೀತಿ ಸರ್ಕಾರ ಹಣವನ್ನು ಒದಗಿಸುತ್ತದೆಂಬುದನ್ನು ತಿಳಿಸಬೇಕು. ಬೆಂಗಳೂರಿನಲ್ಲಿ ಅಂದರೆ ಈ ಸಿಟಿಯಲ್ಲಿ ಜನರು ಸೇರುತ್ತಿರುವುದನ್ನು ನೋಡಿದರೆ 40-50 ಲಕ್ಷ ಜನಗಳು ಇರತಕ್ಕಂತಹ ನಗರವಾಗಿದೆ. ಪ್ರಪಂಚದಲ್ಲಿ ಇಷ್ಟೊಂದು ಫಾಸ್ಟ್ ಗ್ರೋಯಿಂಗ್ ಸಿಗಿ ಬೇರೊಂದು ಇಲ್ಲ. ಇದೇ ರೀತಿ ಬೆಳೆಯುತ್ತಾ ಹೋದರೆ ಕಾವೇರಿ ನದಿಯನ್ನೇ ಬೆಂಗಳೂರಿಗೆ ತೆಗೆದುಕೊಂಡು ಬಂದರೂ ಇದು ಆಗುವುದಿಲ್ಲ. ಅಂತಹ ಒಂದು ಪರಿಸ್ಥಿತಿ ನಿರ್ಮಾಣವಾಗಿದೆ. ಇರತಕ್ಕ ಬಾವಿಗಳಲ್ಲಿ ನೀರು ಇಲ್ಲದೇ ಇರುವುದರಿಂದ ಹೊಸದಾಗಿ ಕೊಳವೆ ಬಾವಿಗಳನ್ನು ಕಳೆದ 3-4 ವರ್ಷಗಳಿಂದ ಹಾಕಿಲ್ಲ. 4 ವರ್ಷಗಳಿಂದಲೂ ಬೆಂಗಳೂರು ನೀರು ಸರಬರಾಜು ಹಾಗೂ ಒಳಚರಂಡಿ ಮಂಡಲಿಯವರು ಹೊಸದಾಗಿ ಕೊಳವೆ ಬಾವಿಗಳನ್ನು ಹಾಕಿಲ್ಲ. ಬೇಸಿಗೆ ಬಂದ ಕಾಲದಲ್ಲಿ ಕುಡಿಯುವ ನೀರನ ಸಮಸ್ಯೆ ಬರುತ್ತದೆ 10-20 ಕೊಳವೆ ಬಾವಿಗಳನ್ನು ನೀವು ಹಾಕಿಸಬೇಕೆಂದು 3 ತಿಂಗಳ ಹಿಂದೆಯೇ ನಾನು ಹೇಳಿದರೂ ಯಾರೂ ಮನಸ್ಸು ಮಾಡಲಿಲ್ಲ. ಈಗಲೂ ತಡವಾಗಿಲ್ಲ. ಈಗ ತಾನೇ ಬೇಸಿಗೆ ಪ್ರಾರಂಭವಾಗಿದೆ. ಇನ್ನೂ 2-3 ತಿಂಗಳಲ್ಲಿ ಇದು ಬಹಳ ಜಾಸ್ತಿಯಾಗುತ್ತದೆ. ಈಗಲಾದರೂ ಒಂದೊಂದು ಕ್ಷೇತ್ರಕ್ಕೂ ಅವರ ಅವಶ್ಯಕತೆಯನ್ನು ನೋಡಿಕೊಂಡು 20-25 ಕೊಳವೆ ಬಾವಿಗಳನ್ನು ಕೊಡಿ. ಮತ್ತು ಮಿನಿ ವಾಟರ್ ಸಪ್ಲೈ ಸ್ಕೀಮ್ ಬಗ್ಗೆ ಹೇಳಬೇಕಾದರೆ ನಮ್ಮ ಭಾಗದಲ್ಲಿ ಈಲ್ಡ್ ಬಹಳ ಕಡಿಮೆ. 1 ಸಾವಿರ ಗ್ಯಾಲನ್ ಬಂದರೆ ಬಹಳ ಜಾಸ್ತಿ. ಅದೇ ರಾಜಾಜಿನಗರ, ಬಿನ್ನಿಪೇಟೆ ಕ್ಷೇತ್ರಗಳಲ್ಲಿ 2 ಸಾವಿರ, 3 ಸಾವಿರ, 4 ಸಾವಿರ ಗ್ಯಾಲನ್ ನೀರು ಸಿಕ್ಕುತ್ತದೆ. ಒಂದು ಸಾವಿರ ಗ್ಯಾಲನ್‌ಗಿಂತ ಕಡಿಮೆ ಇದ್ದರೆ 1 ಹೆಚ್.ಪಿ.ಮೋಟಾರನ್ನು ಹಾಕುತ್ತಾರೆ. ಇದರಿಂದ ನೀರನ್ನು ಎತ್ತುವುದಕ್ಕಾಗುವುದಿಲ್ಲ. ಆದ್ದರಿಂದ ಬೆಂಗಳೂರು ನಗರದಲ್ಲಿ ಈ ಮಿನಿ ವಾಟರ್ ಸಪ್ಲೈ ಯೋಜನೆಗಳಿಗೆ ಜಟ್ ಪಂಪನ್ನು ಅಳವಡಿಸಿದರೆ 100-200 ಗ್ಯಾಲನ್ ನೀರು ಇದ್ದರೂ ತೆಗೆಯಲು ಸಾಧ್ಯವಾಗುತ್ತದೆ. ಹೊಸದಾಗಿ ಕೊಳವೆ ಬಾವಿಗಳನ್ನು ಹಾಕಿಸುವುದಕ್ಕೆ ಪ್ರಯತ್ನ ಮಾಡಬೇಕು. ಅಲ್ಲಿಯವರೆಗೆ ಲಾರಿಗಳಲ್ಲಾದರೂ ಕೊಡುವುದಕ್ಕೆ ವ್ಯವಸ್ಥೆ ಮಾಡಬೇಕು. ಇಲಾಖೆಯಲ್ಲಿ ಲಾರಿಗಳು ಇಲ್ಲದಿದ್ದರೆ ಬೇಕಾದಷ್ಟು ಪ್ರೈವೇಟ್ ಲಾರಿಗಳು ಇವೆ. ಅವುಗಳನ್ನು ತೆಗೆದುಕೊಂಡು ಜನರಿಗೆ ಕುಡಿಯುವ ನೀರನ್ನು ಕೊಡುವ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು. ನಮ್ಮ ಮಾವಳ್ಳಿಯಲ್ಲಿ 40-50 ವರ್ಷ ಆಯಿತು ಈ ಪೈಪ್ ಲೈನ್ ಹಾಕಿ. ಅಲ್ಲಿ 2 ಇಂಚು, 3 ಇಂಚು, 4 ಇಂಚು ಪೈಪುಗಳಿವೆ. ಈಗ 4 ಇಂಚು, 8 ಇಂಚು ಎಂದು ಹಾಕುತ್ತಾರೆ. ಅದಕ್ಕಿಂತ ಬೇರೆ ಬೇರೆ ಹಾಕುವುದಿಲ್ಲ. ಹಳೆಯ ಪೈಪು ಹಾಳಾಗಿ ನೀರು ಬರುವುದಿಲ್ಲ. ಎಲ್ಲಾ ಒಳಗಡೆ ತುಕ್ಕು ಹಿಡಿದುಕೊಂಡಿರುತ್ತದೆ. ಎಲ್ಲಾ ಗಲ್ಲಿಗಳು. ಚಿಕ್ಕಪೇಟೆ, ಚಾಮರಾಜಪೇಟೆ ಆ ಟೈಪು ಮಾವಳ್ಳಿಯಲ್ಲಿ. ಆ ಒಂದು ಪ್ರದೇಶ ಮಾತ್ರ. ಅಲ್ಲಿ ಸ್ಯಾನಿಟೇಷನ್ ಲೈನ್ ಹೋಗುತ್ತಾ ಇರುತ್ತದೆ. ಎರಡೂ ಸೇರಿಕೊಂಡು ಬಿಡುತ್ತದೆ. ಗಲೀಜು ನೀರು ನಲ್ಲಿಯಲ್ಲಿ ಬರುತ್ತಾ ಇರುತ್ತದೆ. ನಾನು ಒಂದು 15-20 ದಿವಸದಿಂದ ಅಲ್ಲೊಂದು ಅಪ್ಪಯಣ್ಣ ಗಲ್ಲಿ ಇನ್ನೊಂದು ಯಾವುದೋ ಗಲ್ಲಿ. ಆ

ಎರಡು ಗಲ್ಲಿಗಳಲ್ಲಿ ರಿಪೇರಿ ಮಾಡಿ ಎಂದು ಹೇಳುತ್ತಲೇ ಇರುತ್ತಾರೆ. ಪೈಪು ಹಳೆಯದಾಗಿದೆ. ನಾವು ಚೇಂಜ್ ಮಾಡಿಕೊಡುತ್ತೇವೆ ಎಂದು ಹೇಳುತ್ತಲೇ ಇದ್ದಾರೆ. ಇದುವರೆವಿಗೂ ಅದು ಆಗಿಲ್ಲ. ಇದು ತುಂಬಾ ದಿವಸದಿಂದ ಇರತಕ್ಕ ಸಮಸ್ಯೆ. ಅವಾಗಿನಿಂದಲೂ ಹೇಳುತ್ತಿದ್ದೇನೆ. ಅವರು ಯಾವಾಗ ಕೇಳಿದರೂ ನಮ್ಮಲ್ಲಿ ಹಣ ಇಲ್ಲ ಎಂದು ಹೇಳುತ್ತಾರೆ. ಈ ಒಂದು ಮಾವಳ್ಳಿ ಪರಿಸ್ಥಿತಿಯೋ ಚಿಕ್ಕಪೇಟೆ ಮುಂತಾದ ಸುತ್ತಮುತ್ತ ಪ್ರದೇಶಗಳಲ್ಲಿ ಯಾವಾಗಲೂ ಇದು ಇದ್ದೇ ಇರುತ್ತದೆ. ಆದ್ದರಿಂದ ಹಳೇ ಪೈಪ್‌ಗಳನ್ನು ಹಳೇ ಬೆಂಗಳೂರಿನಲ್ಲಿ ತೆಗೆದು ಹೊಸ ಪೈಪನ್ನು ಹಾಕುವಂತಹ ಕಾರ್ಯಕ್ರಮವನ್ನೂ ಕೂಡ ತಾವು ಹಾಕಿಕೊಳ್ಳಬೇಕು. ಇಲ್ಲ ಎಂದರೆ ಈ ಪ್ರಾಬ್ಲಂನ್ನು ಸಾಲ್ವ್ ಮಾಡುವುಕ್ಕಾಗುವುದಿಲ್ಲ. ಮತ್ತೆ ಮಡಿವಾಳ ತಾವರಕೆರೆ ಮತ್ತು ಸಿದ್ದುಗುಂಟೆ ಪಾಳ್ಯ ಈ ಪ್ರದೇಶದಲ್ಲಿ ಕಾರ್ಪೊರೇಷನ್‌ಗೆ ರೆಗ್ಯುಲರೈಸ್ ಆಗಿಯೇ 10 ವರ್ಷವಾಯಿತು. ಅಷ್ಟು ವರ್ಷಗಳಿಂದ ಅವರು ಟ್ಯಾಕ್ಸ್ ಕಟ್ಟಿಕೊಂಡು ಬರುತ್ತಾ ಇದ್ದಾರೆ. ಕಾರ್ಪೊರೇಷನ್‌ಗೆ ಸೇರಿದ್ದು 1964ರಲ್ಲಿ. ಅಂದರೆ ಸುಮಾರು 31 ವರ್ಷವಾಯಿತು. 31 ವರ್ಷವಾದರೂ ಅವರಿಗೆ ನಾವು ಕುಡಿಯುವ ನೀರನ್ನು ಕೊಡಲಿಲ್ಲ ಅಂದರೆ ಹೊಸದಾಗಿ ಈ ಬೆಂಗಳೂರು ಏನು ಇದೆಯೋ ಅದರ ಎರಡಷ್ಟು ಜಾಗವನ್ನು ಕಾರ್ಪೊರೇಷನ್‌ಗೆ ಸೇರಿಸಿಕೊಳ್ಳುತ್ತಿದ್ದೇವೆ. ಆ ರೀತಿ ಸೇರಿಸಿಕೊಳ್ಳುವುದರಲ್ಲಿ ಅರ್ಥ ಇಲ್ಲ. ಮೊದಲು ಹಳೇ ಬೆಂಗಳೂರು ಏನು ಇದೆ, ಅ ಹಳೇ ಬೆಂಗಳೂರಿನಲ್ಲಿ ಇರುವವರಿಗೆ ಪ್ರತಿಯೊಬ್ಬರಿಗೂ ಸ್ಯಾನಿಟರಿ ವಾಟರ್ ಸಪ್ಲೈ ವ್ಯವಸ್ಥೆ ಇಲ್ಲ. ಸ್ಯಾನಿಟರಿ ಬಗ್ಗೆ ಹಿಂದೆ ಅಸೆಂಬ್ಲಿಯಲ್ಲಿ ಎರಡು ಬಾರಿ ಮಾತನಾಡಿದ್ದೇನೆ. ಈ ಪ್ರದೇಶದಲ್ಲಿ ಸ್ಯಾನಿಟರಿ ಲೈನು ಇಲ್ಲ. ಗುಂಡಿಗಳನ್ನು ಹಾಕಿಕೊಂಡಿರುತ್ತಾರೆ. 15 ದಿವಸ 20 ದಿವಸಗಳಿಗೊಂದು ಸಾರಿಯಾದರೂ ಈ ಗುಂಡಿಗಳನ್ನು ತೆಗೆಯುತ್ತಿರಬೇಕು. ಮಳೆಗಾಲದಲ್ಲಿ ನೀರೇ ಇಂಗುವುದಿಲ್ಲ. ಅದನ್ನು ತೆಗೆದು ಆ ಸ್ಯಾನಿಟರಿ ನೀರನ್ನು ಮೋರಿಗೆ ಹುಯ್ಯುತ್ತಾರೆ. ಅದು ಪಲ್ಯೂಷನ್ ಆಗುತ್ತದೆ. ಇದರಿಂದ ನಾನಾ ಕಾಯಿಲೆಗಳು ಬರುತ್ತವೆ. ವಾಟರ್ ಸಪ್ಲೆಯನಂತೂ ನಾವು ವಾರ್‌ಫೂಟ್‌ನಲ್ಲಿ ತೆಗೆದುಕೊಳ್ಳಬೇಕು. ಸುಮ್ಮನೆ ಅವರು ಬೆಟರ್‌ಮೆಂಟ್ ಫೀಜನ್ನು ಕಟ್ಟಿದ್ದಾರೆ, ಬೆಟ್ಟರ್‌ಮೆಂಟ್ ಫೀಜನ್ನು ಕಟ್ಟಿದ್ದರೆ ಮಾತ್ರ ಕೆಲಸ ಮಾಡುತ್ತೇವೆಂದು ಹೇಳುತ್ತಾರೆ. ಆದರೂ ವರ್ಷಗಟ್ಟಲೆ ತಳ್ಳುತ್ತಾರೆ. ಯಾವ ಕೆಲಸ ಕಾರ್ಯಗಳೂ ಆಗುವುದಿಲ್ಲ. ಹಿಂದೆ ಶ್ರೀಮಾನ್ ವೀರಪ್ಪ ಮೊಯಿಲಿಯವರು ಮುಖ್ಯ ಮಂತ್ರಿಗಳಾಗಿದ್ದಾಗ ದೇವರ-ಜೀವನ ಹಳ್ಳಿ ಆ ಪ್ರದೇಶಗಳಿಗೆ ಭೇಟಿ ಕೊಟ್ಟು, ಅವರು ಏನು ಮಾಡಿದರು ಅಂದರೆ ಬೆಟರ್‌ಮೆಂಟ್ ಫೀ ಮತ್ತೊಂದು ಯಾವುದನ್ನೂ ಕೇಳಲಿಲ್ಲ. ಈ ಒಂದು ಬಡಾವಣೆಯಲ್ಲಿ ವಾಟರ್ ಸಪ್ಲೈ ಆಗಿಲ್ಲ, ಸ್ಯಾನಿಟರಿ ಲೈನ್ ಆಗಿಲ್ಲ. ಎಸ್ಟಿಮೇಟ್ ಮಾಡಿ, ನಾವು ಸರ್ಕಾರದಿಂದ ಹಣ ಕೊಡುತ್ತೇವೆ ಎಂದು ಅವರು ನೇರವಾಗಿ ಹೇಳಿಬಿಟ್ಟರು. ಸರ್ಕಾರದಿಂದ ಹಣವನ್ನೂ ಕಟ್ಟಿದರು. ಈಗ ಅಲ್ಲಿ ಕೆಲಸ ಕೂಡ ನಡೆಯುತ್ತಿದೆ. ಆ ರೀತಿ ಬೆಂಗಳೂರು ನಗರದಲ್ಲಿ ಎಲೆಲ್ಲಿ ವಾಟರ್ ಸಪ್ಲೈ, ಸ್ಯಾನಿಟರಿ ವ್ಯವಸ್ಥೆ ಇಲ್ಲವೋ ಆ ಪ್ರದೇಶಗಳಿಗೆ ಮಾನ್ಯ ಮುಖ್ಯ ಮಂತ್ರಿಗಳೇ ಖುದ್ದಾಗಿ ಆ ಎಲ್ಲಾ ಎಸ್ಟಿಮೇಟನ್ನು ತರಿಸಿಕೊಂಡು ಮಾಡಬೇಕಾಗುತ್ತದೆ. ಕಾರ್ಪೊರೇಷನ್‌ನವರನ್ನು ನಂಬಿದರೆ 100 ವರ್ಷವಾದರೂ ವಾಟರ್ ಸಪ್ಲೈ ಪ್ರಾಬ್ಲಂ ಸಾಲ್ವ್ ಆಗುವುದಿಲ್ಲ. ಮುಖ್ಯ ಮಂತ್ರಿಗಳೇ ಸರ್ಕಾರದಿಂದ

ನೇರವಾಗಿ ಹಣವನ್ನು ಬಿಡುಗಡೆ ಮಾಡಿ. ಇಲ್ಲ ಅಂದರೆ ಕಾರ್ಪೊರೇಷನ್‌ಗೆ ಏನು ಆಕ್ಟ್ರಾಯಿ ಕಾಂಪನ್‌ಸೇಷನ್ ಕೊಡುತ್ತೇವೆಯೋ ಆ ಹಣದಲ್ಲಿ ಮುರುದುಕೊಂಡು ಆ ಕೆಲಸಗಳನ್ನು ಬೆಂಗಳೂರು ನಗರ ನೀರು ಸರಬರಾಜು ಹಾಗೂ ಒಳಚರಂಡಿಯವರ ಮೂಲಕ ಮಾಡಿಸಿದರೆ ಈ ಕುಡಿಯುವ ನೀರಿನ ಸಮಸ್ಯೆ ಬೆಂಗಳೂರು ನಗರದಲ್ಲಿ ಪರಿಹಾರವಾಗುತ್ತದೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಶ್ರೀಮಾನ್ ಘೋಷಾಲ್‌ರವರ ಬಗ್ಗೆ ನನಗೇನೂ ಬೇಜಾರು ಏನೂ ಇಲ್ಲ. ಟೆಕ್ನಿಕಲ್ ಆಗಿ ಒಬ್ಬರು ಅಲ್ಲಿ ಅಧ್ಯಕ್ಷರಾಗಿರಬೇಕು. ಅಲ್ಲಿರತಕ್ಕ ಚೀಫ್ ಇಂಜಿನೀಯರ್ ಒಬ್ಬರನ್ನು ಅಲ್ಲಿಗೆ ಹಾಕಿದರೆ ಅವಾಗ ಅಲ್ಲಿ ಸಮಸ್ಯೆ ಪರಿಹಾರವಾಗುತ್ತದೆ. ಈ ವಿಚಾರದಲ್ಲಿ ಮಾತನಾಡಲು ತಾವು ನನಗೆ ಅವಕಾಶ ಮಾಡಿಕೊಟ್ಟಿದ್ದೀರಿ. ಬೋರ್‌ವೆಲ್‌ಗಳನ್ನು ಆದಷ್ಟು ಬೇಗ ಪ್ರಾರಂಭ ಮಾಡುತ್ತೀರಿ ಎಂದು ಮಾನ್ಯ ಮುಖ್ಯ ಮಂತ್ರಿಗಳಲ್ಲಿ ವಿಶ್ವಾಸ ಇಟ್ಟು ನಾನು ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೂ ಕೃತಜ್ಞತೆಗಳನ್ನು ಅರ್ಪಿಸುತ್ತಾ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀಮತಿ ಪ್ರಮೀಳಾ ಎಸ್. ನೇಸರ್ಗಿ (ಚಾಮರಾಜಪೇಟೆ) :- ಸನ್ಮಾನ್ಯ ಸಭಾಧ್ಯಕ್ಷರೇ, ಜಾಸ್ತಿ ಮಾತನಾಡುವುದಕ್ಕೆ ಹೋಗುವುದಿಲ್ಲ. ನೀರು ಪ್ರತಿಯೊಬ್ಬರಿಗೂ ಬೇಕಾದದ್ದು. ಒಂದು ಸಾರಿ ಮಹಾತ್ಮ ಗಾಂಧೀಜಿಯವರು ನದಿ ಆಚೆ-ಕಡೆ ಮಕ್ಕಳು ಆಟ ಆಡುತ್ತಿದ್ದನ್ನು ನೋಡಿದರು. ಆ ಮಕ್ಕಳು ಬೊಗಸೆಯಲ್ಲಿ ನೀರನ್ನು ಎತ್ತಿಕೊಂಡು ಹೋಗಿ ಮರಳ ಮೇಲೆ ಚೆಲ್ಲುತ್ತಿದ್ದರು ಅದನ್ನು ನೋಡಿ ಮಹಾತ್ಮ ಗಾಂಧೀಜಿಯವರು ಆ ಮಕ್ಕಳನ್ನು ಕರೆದು ಹೇಳಿದರು. ನೀರಿನ ಪ್ರಾಮುಖ್ಯತೆ ಎಷ್ಟು ಇದೆ, ಅದನ್ನು ವ್ಯರ್ಥ ಮಾಡುವುದು ಒಳ್ಳೆಯದಲ್ಲ ಎಂದು ಹೇಳಿದರು. ಈ ರೀತಿ ಮಹಾತ್ಮ ಗಾಂಧೀಜಿಯವರು ಹೇಳಿದ್ದನ್ನು ನಾನು ಓದಿದ್ದೇನೆ. ಅಂದರೆ ನೀರಿನ ಮಹತ್ವ ಇಷ್ಟು ಇದೆ ? ಅದು ವ್ಯರ್ಥ ಆಗಬಾರದು ಎಂದು ಶ್ರೀ ಮಹಾತ್ಮ ಗಾಂಧಿಯವರು ಏನು ಹೇಳಿದರು, ಆ ವಿಷಯವನ್ನು ಇವತ್ತಿನ ದಿವಸ ಪ್ರತಿಯೊಬ್ಬರೂ ನೆನಸಿಕೊಳ್ಳಬೇಕಾಗಿದೆ. ಒಂದು ಹನಿ ನೀರೂ ಕೂಡ ವ್ಯರ್ಥ ಆಗದ ಹಾಗೆ ವಾಟರ್ ಬೋರ್ಡ್‌ನವರಾಗಲಿ, ಜಲ ಮಂಡಲಿಯವರಾಗಲಿ ಅದರ ಮೇನ್‌ಟನೆನ್ಸ್ ವ್ಯರ್ಥ ಆಗದ ಹಾಗೆ ನೋಡಿಕೊಳ್ಳಬೇಕಾದ ಅವಶ್ಯಕತೆ ಇವತ್ತು ಬೆಂಗಳೂರು ನಗರದ ನಾಗರೀಕರಿಗೆ ಬಂದಿದೆ ಎಂದು ಹೇಳಿದರೆ ತಪ್ಪಾಗಲಾರದು. ನನ್ನ ಚಾಮರಾಜಪೇಟೆ ಕ್ಷೇತ್ರದಲ್ಲಿ ಮೂರನೇ ಒಂದು ಭಾಗ ಜನರು ಅಲ್ಪಸಂಖ್ಯಾತರು, ಮೂರನೆಯ ಒಂದು ಭಾಗ ಗುಡಿಸಲುವಾಸಿಗಳು, ಮತ್ತು ಮೂರನೆಯ ಒಂದು ಭಾಗದಲ್ಲಿ ಮಧ್ಯಮ ವರ್ಗದ ಜನರು ಇದ್ದಾರೆ. ಈ ಜನಗಳಿಗೆ ಅವತ್ತಿನಿಂದ ಈವತ್ತಿನವರೆಗೂ ನೀರು ಸಮರ್ಪಕವಾಗಿ ಬಂದಿಲ್ಲ. ಚುನಾವಣೆಯಾದ ಹದಿನೈದು ದಿವಸದಲ್ಲಿ ಎಲ್ಲಾ ಮಹಿಳೆಯರು ಬಸಪ್ಪ ಪಾರ್ಕ್‌ನ ಜಲಮಂಡಲಿಯ ಅಧ್ಯಕ್ಷರ ಹತ್ತಿರ ಹೋಗಿ ನೀರು ಬರದಿರುವ ಸಂದರ್ಭದಲ್ಲಿ ಅಲ್ಲಿ ಘೇರಾವ್ ಮಾಡತಕ್ಕ ಪರಿಸ್ಥಿತಿ ಒದಗಿಬಂತು. ಅಧ್ಯಕ್ಷರು ಕೆಳಗೆ ಇಳಿದು ಬಂದು ನಮ್ಮೆಲ್ಲರನ್ನೂ ಮೇಲಕ್ಕೆ ಕರೆದುಕೊಂಡು ಹೋದರು. ನಾವು ಅವರನ್ನು ಏಕೆ ನೀರಿನ ತೊಂದರೆಯಾಗುತ್ತಿದೆ ಎಂದು ಕೇಳಿದೆವು ಅವರು ಇದರಲ್ಲಿ ನಮ್ಮದೇನು ತಪ್ಪಿಲ್ಲ,

ತಾವು ದಯಮಾಡಿ ಕೆ.ಇ.ಬಿ.ಯ ಅಧ್ಯಕ್ಷರ ಹತ್ತಿರ ಹೋಗಿ ಎಂದು ಹೇಳಿದರು. ಎಲ್ಲಾ ಮಹಿಳೆಯರನ್ನು ಕರೆದುಕೊಂಡು ವಿದ್ಯುಚ್ಛಕ್ತಿ ಮಂಡಳಿಯ ಅಧ್ಯಕ್ಷರ ಹತ್ತಿರ ಹೋದೆವು. ಆಗ ಕೆ.ಇ.ಬಿ.ಯ ಅಧ್ಯಕ್ಷರು ನಾವೇನೂ ಮಾಡಲು ಆಗುವುದಿಲ್ಲ, ಕಾರ್ಪೊರೇಷನ್‌ರವರು ಕೊಡಬೇಕಾದ ವಿದ್ಯುತ್‌ನ ಹಣವನ್ನು ಕೊಟ್ಟಿಲ್ಲವೆಂದು ಹೇಳಿದರು. ಆನಂತರ ಸನ್ಮಾನ್ಯ ಗೃಹ ಮಂತ್ರಿಗಳು ಒಂದು ಸಭೆಯನ್ನು ಕರೆದರು, ಆ ಸಭೆಯಲ್ಲಿ ಅವರು ಈ ರೀತಿ ಕಾರ್ಪೊರೇಷನ್‌ನವರು ಕೆ.ಇ.ಬಿ.ಗೆ ಕೊಡಬೇಕಾಗಿದ್ದ ಹಣವನ್ನು ಕೊಟ್ಟಿಲ್ಲವಂತೆ ಎಂದು ಕೇಳಿದೆವು, ಆಗ ಅಲ್ಲಿಗೆ ಬಂದಿದ್ದ ಕಾರ್ಪೊರೇಷನ್‌ನ ಅಧಿಕಾರಿಗಳು ಏನು ಹೇಳಿದರೆಂದರೆ ನಮ್ಮದೇನೂ ಇದರಲ್ಲಿ ತಪ್ಪಿಲ್ಲ, ನಾವೇನೋ ಹಣವನ್ನು ಕಟ್ಟಲು ತಯಾರಾಗಿದ್ದೇವೆ, ಆದರೆ ನಮಗೆ ಸರ್ಕಾರದಿಂದ ಬರಬೇಕಾಗಿರುವ ಹಣವು ಬಂದಿಲ್ಲ, ಆದ್ದರಿಂದ ನಾವು ಕಟ್ಟಿಲ್ಲವೆಂದು ಹೇಳಿದರು. ನಾನು ಏಕೆ ಇದನ್ನು ಹೇಳುತ್ತಿದ್ದೇನೆಂದರೆ, ಇಂದು ಇದರ ಬಗ್ಗೆ ಒಬ್ಬರಿಂದ ಒಬ್ಬರು ತಪ್ಪಿಸಿಕೊಂಡು, ಜಾರಿಕೊಂಡು ಹೋಗತಕ್ಕ ಸಂದರ್ಭದಲ್ಲಿ ಬೆಂಗಳೂರಿನಲ್ಲಿರುವ ನಾಗರೀಕರಿಗೆ ಕುಡಿಯುವುದಕ್ಕೆ ನೀರಿಲ್ಲದೆ ವಿಲಿವಿಲಿ ಒದ್ದಾಡುವ ಪರಿಸ್ಥಿತಿ ಒದಗಿ ಬಂದಿದೆ. ಸನ್ಮಾನ್ಯ ಅಧ್ಯಕ್ಷರೇ, ಚಾಮರಾಜಪೇಟೆ ಕ್ಷೇತ್ರದ ಒಂದು ಭಾಗದಲ್ಲಿ ಬಸವನಗುಡಿ ಕ್ಷೇತ್ರವಿದೆ. ಶ್ರೀಮಾನ್ ನಂಜೇಗೌಡರು ಬಸವನಗುಡಿ ಕ್ಷೇತ್ರದವರು ನಮ್ಮ ಮನೆಗೆ ನೀರು ಬರುತ್ತದೆಂದು ಹೇಳಿದರು. ಅದು ನಿನ್ನೆ. ಬಸವನಗುಡಿ ಕ್ಷೇತ್ರಕ್ಕೆ ಎತೇಚ್ಛವಾಗಿ ನೀರು ಬರುತ್ತಿದೆ. ಕೆಲವು ಕಡೆ ಬರುತ್ತಿದೆ. ಇನ್ನು ಸೋಮಣ್ಣನವರ ಕ್ಷೇತ್ರವಾದ ಬಿನ್ನಿಪೇಟೆ ಕ್ಷೇತ್ರದಲ್ಲಿ ಯತೇಚ್ಛವಾಗಿ ನೀರು ಬರುತ್ತಿದೆ.

ಶ್ರೀ ವಿ.ಸೋಮಣ್ಣ :- ಅವರು ಹೇಳುತ್ತಿರತಕ್ಕದ್ದು ಸತ್ಯಕ್ಕೆ ದೂರವಾದ ಮಾತು. ಅಧ್ಯಕ್ಷರೇ, ಈ ಸಭೆಯ ಮೂಲಕ ತಮ್ಮ ಮೂಲಕ ವಿನಂತಿ ಮಾಡುವುದೇನೆಂದರೆ ಅವರು ಹಿರಿಯ ಸದಸ್ಯರಾಗಿದ್ದಾರೆ, ವಾಟಾಳ್ ನಾಗರಾಜ್‌ರವರು ಬಿನ್ನಿಪೇಟೆ ಕ್ಷೇತ್ರವನ್ನು ಪ್ರತಿನಿಧಿಸಿದ್ದರು, ತಾವು ಅನುಮತಿಯನ್ನು ಕೊಟ್ಟರೆ ಒಂದೇ ಒಂದು ಮಾತನ್ನು ಹೇಳುತ್ತೇನೆ. ನನ್ನ ಕ್ಷೇತ್ರದಲ್ಲಿ ನೀರು ಬರುತ್ತಿದೆಯೋ ಇಲ್ಲವೋ ಎನ್ನುವ ಬಗ್ಗೆ ಮಾನ್ಯ ಸದಸ್ಯೆಯರು ನಾಳೆ ದಿನ ಅಲ್ಲಿಗೆ ಬಂದು ಕೇಳಿದರೆ ತಿಳಿಯುತ್ತದೆ. ನನ್ನ ಕ್ಷೇತ್ರಕ್ಕೆ ನೀರು ಬರಬೇಕಾದರೆ ಚಾಮರಾಜಪೇಟೆ, ಬಸವನಗುಡಿ ಕ್ಷೇತ್ರದಿಂದಲೇ ಬರಬೇಕು, ಅವರ ಕ್ಷೇತ್ರದಿಂದ ಮತ್ತು ನಂಜೇಗೌಡರ ಕ್ಷೇತ್ರದಿಂದಲೇ ನಮ್ಮ ಕ್ಷೇತ್ರಕ್ಕೆ ನೀರು ಬರಬೇಕು. ದಯಮಾಡಿ ಸತ್ಯಕ್ಕೆ ದೂರವಾದ ಮಾತನ್ನು ಹೇಳಬೇಡಿ. ಬಡಜನರು ನನ್ನ ಕ್ಷೇತ್ರದಲ್ಲಿ ತುಂಬಿ ತುಳುಕುತ್ತಿದ್ದಾರೋ ಅಥವಾ ಅವರ ಕ್ಷೇತ್ರದಲ್ಲಿದ್ದಾರೋ ಎನ್ನುವುದು ಈಗಾಗಲೇ ಎಲ್ಲರಿಗೂ ಗೊತ್ತಿದೆ.

ಶ್ರೀಮತಿ ಪ್ರಮೀಳಾ ಎಸ್.ನೇಸರ್ಗಿ :- ಅಧ್ಯಕ್ಷರೇ, ನಮ್ಮ ಕ್ಷೇತ್ರವಾದ ಮೇಲೆ ಸಂಪಂಗಿರಾಮನಗರ ಇರತಕ್ಕದ್ದು. ನೀವು ಹೇಳುವ ಪ್ರಶ್ನೆಯನ್ನು ಹೇಳುವುದಕ್ಕೋಸ್ಕರ ಸ್ವಲ್ಪ ಪ್ರಿಲ್ಯೂಡ್ ಎಂದು ಹೇಳುತ್ತಾರಲ್ಲಾ ಆ ರೀತಿಯಲ್ಲಿ ಹೇಳುತ್ತಿದ್ದೇನೆ. ಏಕೆಂದರೆ ಶಿವಾಜಿನಗರ ಕ್ಷೇತ್ರ ಚಾಮರಾಜಪೇಟೆ ಕ್ಷೇತ್ರವಾದ ಮೇಲೆ ಬರತಕ್ಕದ್ದು. ನಾನು ಜಲಮಂಡಳಿಯ ಅಧ್ಯಕ್ಷರಲ್ಲಿ ಸಂಪಂಗಿರಾಮನಗರಕ್ಕೆ ನೀರು

ಬರುತ್ತದೆ ಆದರೆ ಸುಧಾಮನಗರದಲ್ಲಿ ನೀರು ಬರುತ್ತಿರಲಿಲ್ಲ ಕಾರಣವೇನೆಂದು ಕೇಳಿದೆವು. ಅವರು ಆಗ ಅಲ್ಲಿನ ಅಧಿಕಾರಿಗಳ ಮುಖವನ್ನು ನೋಡಿದರು; ಅವರು ಉತ್ತರವನ್ನು ಕೊಡತಕ್ಕ ಪರಿಸ್ಥಿತಿಯಲ್ಲಿ ಇರಲಿಲ್ಲ, ಕಾರಣ ತಮಗೆ ತಾನೇ ಗೊತ್ತಾಗುತ್ತದೆ, ತಮಗೂ ಸಹ ಅರ್ಥವಾಗುತ್ತದೆ, ಸಂಪಂಗಿರಾಮನಗರದಲ್ಲಿ ನೀರು ಏಕೆ ಬರುತ್ತದೆ ? ಸುಧಾಮನಗರದಲ್ಲಿ ನೀರ್ಯಾಕೇ ಬರುವುದಿಲ್ಲವೆಂದು ಕೇಳಿದಾಗ ಅವರು ಹೇಳಿದರು, ಇದಕ್ಕೆ ಕಾವೇರಿ ಸ್ಟೇಜ್‌ನಿಂದ ನೀರು ಬರಬೇಕು ಅದರಲ್ಲಿ ಕಷ್ಟವಾಗುತ್ತಿದೆ, ತೊರೆಕಾಡನಹಳ್ಳಿಯಿಂದ ನೀರು ಬರುತ್ತಿಲ್ಲ ಎಂದು ಹೇಳಿದರು. ಸಂಪಂಗಿರಾಮನಗರಕ್ಕೂ ತೊರೆಕಾಡನಹಳ್ಳಿಯಿಂದ ನೀರು ಬರಬೇಕು, ಸಂಪಂಗಿರಾಮನಗರಕ್ಕೂ ನಮ್ಮ ಕ್ಷೇತ್ರವಾದ ಚಾಮರಾಜಪೇಟೆ ಮುಖಾಂತರ ಹೋಗಬೇಕು. ಆದರೆ ಚಾಮರಾಜಪೇಟೆಯಲ್ಲಿ ನೀರು ಬರುವುದಿಲ್ಲ ಆದರೆ ಸಂಪಂಗಿರಾಮನಗರದಲ್ಲಿ ನೀರು ಬರುತ್ತದಲ್ಲ ಎಂದು ಕೇಳಿದಾಗ ಅವರು ಅದಕ್ಕೆ ಉತ್ತರವಿರಲಿಲ್ಲ, ಅವರು ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳನ್ನು ಕರೆಯುತ್ತೇನೆ, ಮಾತನಾಡುತ್ತೇನೆ ಎಂದು ಮಾತ್ರ ಹೇಳಿದರು; ಆದರೆ ಪರಿಸ್ಥಿತಿ ಇಲ್ಲಿಯವರೆಗೂ ಸುಧಾರಿಸಿಲ್ಲ, ನಮ್ಮ ಚಾಮರಾಜಪೇಟೆ ಕ್ಷೇತ್ರದ ಜನರಿಗೆ ಮಾತ್ರ ಇವತ್ತೂ ನೀರು ಸರಿಯಾಗಿ ಬರುತ್ತಿಲ್ಲ. ಸನ್ಮಾನ್ಯ ಅಧ್ಯಕ್ಷರೆ, ತಮಗೆ ಆಶ್ಚರ್ಯವಾಗಬಹುದು, ಕುಂಬಾರ್‌ಗುಂಡಿ ಎನ್ನತಕ್ಕ ಕ್ಷೇತ್ರವಿದೆ, ನಾನು ಅಲ್ಲಿಗೆ ಹೋಗಿ ನೋಡಿದೆ, ಅಲ್ಲಿ ಮನೆಗಳಿಗೆ ನೀರಿನ ನಲ್ಲಿಗಳನ್ನು ಹಾಕಿ ಎರಡು ವರ್ಷಗಳಾಗಿವೆ, ಆದರೆ ನೀರಿನ ಸಂಪರ್ಕವನ್ನು ಕೊಟ್ಟಿಲ್ಲ, ಕಲಾಸಿಪಾಳ್ಯದ ಕುಂಬಾರ್‌ಗುಂಡಿಯಲ್ಲಿ ಹರಿಜನರು ವಾಸ ಮಾಡತಕ್ಕ ಸ್ಥಳದಲ್ಲಿ ಇವತ್ತು ನೀರಿನ ಸಂಪರ್ಕವನ್ನು ಕೊಟ್ಟಿಲ್ಲ, ಆದರೆ ಟ್ಯಾಪ್‌ಗಳನ್ನು ಹಾಕಿದ್ದಾರೆ. ಅದೇ ರೀತಿ 38ನೇ ವಿಭಾಗದಲ್ಲಿ ಅಲ್ಪಸಂಖ್ಯಾತರು ಇರತಕ್ಕ ಜಾಗದಲ್ಲಿ ಮಹಿಳೆಯರನ್ನು ನಾನು ಹೋಗಿ ಕೇಳಿದಾಗ ಅವರು ಹೇಳಿದರು ನಾವು 5 ವರ್ಷದಿಂದ ಮಾರ್ಥಸ್ ಆಸ್ಪತ್ರೆಗೆ ಹೋಗಿ ನೀರನ್ನು ಹಿಡಿದುಕೊಂಡು ಬರುತ್ತಿದ್ದೇವೆ, ನಮಗೆ ಬೆನ್ನು ಬಾಗಿ ಹೋಗಿದೆ, ಬೇರೆ ಕೆಲಸವನ್ನು ಮಾಡುವುಕ್ಕಾಗುತ್ತಿಲ್ಲ; ಈ ದೇಶದಲ್ಲಿ ಕುಡಿಯುವುದಕ್ಕೆ ನೀರಿಲ್ಲ. ಆದರೆ ಬೀರ್ ಅಂಗಡಿಗಳು ಪಕ್ಕಪಕ್ಕದಲ್ಲಿ ಬೇಕಾದಷ್ಟು ಬರುತ್ತಿವೆ, ನಮಗೇನೂ ಬೇಕಿಲ್ಲ, ಅನ್ನವನ್ನು ಕೊಡದಿದ್ದರೂ ಚಿಂತೆ ಇಲ್ಲ ಆದರೆ ನೀರನ್ನು ಕೊಡಿಸಿ ಎಂದು ಹೇಳಿದರು. ಆಗ ನಾನು ಸಂಬಂಧಪಟ್ಟ ಇಂಜಿನಿಯರನ್ನು ಕೇಳಿದೆ. ಅವರು ಅದಕ್ಕೆ ಒಪ್ಪಿಕೊಂಡರು 5 ವರ್ಷದಿಂದ ನೀರು ಬರುತ್ತಿಲ್ಲವೆಂದು. ಆದರೆ ಕಾರಣ ಮಾತ್ರ ಹೇಳಲಿಲ್ಲ, ಹಣವಿಲ್ಲವೆನ್ನತಕ್ಕ ಮಾತನ್ನು ಹೇಳಿದರು. ಇವತ್ತಿನವರೆಗೂ ಅಲ್ಲಿ ನೀರಿನ ಸಂಪರ್ಕವನ್ನು ಕೊಟ್ಟಿಲ್ಲ. ಅದೇ ರೀತಿ, ಚಾಮರಾಜಪೇಟೆಯ ಮೊದಲ ಮೇನ್ ರೋಡ್‌ನಲ್ಲಿ ಮಹಮಡನ್ ಬ್ಲಾಕ್ ಎಂದು ಇದೆ, ಅಲ್ಲಿ ಹೆಚ್ಚಾಗಿ ಅಲ್ಪ ಸಂಖ್ಯಾತರಿರುವ ಜಾಗ, ಅಲ್ಲಿಗೆ ನೀರೆ ಹತ್ತುವುದಿಲ್ಲ; ಚಾಮರಾಜಪೇಟೆಯಲ್ಲಿ ಒಂದು ದೊಡ್ಡ ನೀರಿನ ಟ್ಯಾಂಕನ್ನು ಕಟ್ಟಿದ್ದಾರೆ, ಅದು ವ್ಯರ್ಥವಾಗಿ ಉಪಯೋಗವಾಗುತ್ತಿದೆ. 5 ವರ್ಷಗಳಾಗಿದೆ ಆದರೆ ಆ ಟ್ಯಾಂಕ್‌ನಲ್ಲಿ ಇಲ್ಲಿಯವರೆಗೆ ನೀರು ತುಂಬುತ್ತಿಲ್ಲ. ಏಕೆ ಎಂದು ಗೊತ್ತಿಲ್ಲ. ಟ್ಯಾಂಕ್ ಇದೆ ಆದರೆ ನೀರನ್ನು ತುಂಬುತ್ತಿಲ್ಲ. ಇಂತಹ ಪರಿಸ್ಥಿತಿ ಒದಗಿಬಂದಿದೆ. ಇದಕ್ಕಿಂತ ಹೆಚ್ಚಾಗಿ ಚಾಮರಾಜಪೇಟೆ ಕ್ಷೇತ್ರದ ಮಹಿಳೆಯರ ಕಷ್ಟ ಸುಖವನ್ನು ಮಾನ್ಯ ಮುಖ್ಯ ಮಂತ್ರಿಗಳಿಗೆ ಈ ಸಂದರ್ಭ ಬಿಟ್ಟರೆ ಬೇರೆ ಸಮಯದಲ್ಲಿ ಕೇಳುವುದಕ್ಕಾಗುವುದಿಲ್ಲ.

ಸುಧಾಮನಗರಕ್ಕೆ ಹೋಗಿ ಕೇಳಿದರೆ ಜನರು ಹೇಳುತ್ತಾರೆ, ರಾತ್ರಿ ಒಂದು ಗಂಟೆಯಿಂದ ನಾಲ್ಕು ಗಂಟೆಯೊಳಗೆ ನೀರನ್ನು ಬಿಡುತ್ತಾರೆ, ಕಳೆದ ಒಂದು ತಿಂಗಳಿಂದ ಅದೂ ಸಹ ಇಲ್ಲವೆಂದು ಹೇಳಿದರು. ನಾನು ಅಧಿಕಾರಿಗಳನ್ನು ಸಂಪಂಗಿರಾಮನಗರದಲ್ಲಿ ಬೆಳಿಗ್ಗೆಯಿಂದ ಹನ್ನೆರಡು ಗಂಟೆಯವರೆಗೆ ನೀರನ್ನು ಬಿಡುತ್ತೀರಲ್ಲಾ ಆದರೆ ಸುಧಾಮನಗರಕ್ಕೆ ಏಕೆ ಬಿಡುವುದಿಲ್ಲವೆಂದು ಕೇಳಿದೆ. ಅದಕ್ಕೆ ಅವರು ಇದರ ಬಗ್ಗೆ ಮೇಲ್ಪಟ್ಟ ಅಧಿಕಾರಿಗಳನ್ನು ಕೇಳಿ ಎಂದು ಹೇಳಿದರು. ಮಹಿಳೆಯರು ರಾತ್ರಿ ಹನ್ನೆರಡು ಗಂಟೆಗೆ ಮಕ್ಕಳಿಗೆ ಅಡುಗೆಯನ್ನು ಮಾಡಿ, ಊಟಕ್ಕೆ ಬಡಿಸಿ, ಮಲಗಿಸಿ ಅನಂತರ ನೀರಿಗಾಗಿ ಕ್ಯೂನಲ್ಲಿ ನಿಂತುಕೊಳ್ಳಬೇಕು, ಹನ್ನೆರಡು ಗಂಟೆಗೆ ಹೋಗಿ ಕ್ಯೂನಲ್ಲಿ ನಿಂತುಕೊಂಡು ಎರಡರಿಂದ ನಾಲ್ಕು ಗಂಟೆಯಲ್ಲಿ ನೀರನ್ನು ಹಿಡಿದುಕೊಂಡು ಬಂದು ಅನಂತರ ಸೀಮೆ ಎಣ್ಣೆಯನ್ನು ಕ್ಯೂನಲ್ಲಿ ನಿಂತುಕೊಂಡು ತರಲು ಹೋಗಬೇಕು. ಎಂಟು ಗಂಟೆಗೆ ಮನೆಗೆ ಬರಬೇಕು, ಶಾಲೆಗೆ ಮಕ್ಕಳನ್ನು ಕಳುಹಿಸಬೇಕು ಇದು ಮಹಿಳೆಯರಿಗಾಗಿರುವ ಪರಿಸ್ಥಿತಿ. ಚಾಸರಾಜಪೇಟೆಯ ಮಹಿಳೆಯರೇನು ಮಾಡಿದ್ದಾರೆ, ಅವರಿಗೆ ರಾತ್ರಿಯಲ್ಲಿ ನೀರನ್ನು ಹಿಡಿಯುವಂಥ ಶಿಕ್ಷೆಯನ್ನೇಕೆ ಕೊಟ್ಟಿದ್ದೀರೆಂದು ನಾನು ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಕೇಳುತ್ತೇನೆ. ಅಲ್ಲಿರುವವರು ಏನು ಮಾಡಿದ್ದಾರೆ ?

ಅಧ್ಯಕ್ಷರು :- ನೀವು ರಾಜ್ಯಾದ್ಯಂತ ಪರಿಚಯವಿರತಕ್ಕವರು; ನೀವು ಬರೀ ಚಾಮರಾಜಪೇಟೆಗೆ ಬಂದರೆ ಹೇಗೆ ? ಇಡೀ ರಾಜ್ಯದ ಹೆಣ್ಣು ಮಕ್ಕಳು ಕ್ಯೂನಲ್ಲಿ ನಿಂತು ನೀರನ್ನು ಹಿಡಿಯುತ್ತಿದ್ದಾರೆ.

ಶ್ರೀಮತಿ ಪ್ರಮೀಳಾ ಎಸ್.ನೇಸರ್ಗಿ :- ಇಡೀ ರಾಜ್ಯದ ಬಗ್ಗೆ ಮಾತನಾಡಬೇಕಾದರೆ ಒಂದು ದಿವಸ ಬೇಕಾಗುತ್ತದೆ. ನಾನು ಇಡೀ ರಾಜ್ಯದ ನೀರಿನ ಪರಿಸ್ಥಿತಿಯೇನಾಗಿದೆ ಎನ್ನುವ ಬಗ್ಗೆ ಮಾತನಾಡಲು ಸಿದ್ಧಳಾಗಿದ್ದೇನೆ. ಆದರೆ ಈ ಸಂದರ್ಭದಲ್ಲಿ ನಮ್ಮ ಕ್ಷೇತ್ರದಲ್ಲೇನಾಗಿದೆ ಎಂದು ಹೇಳುವುದು ನನ್ನ ಕರ್ತವ್ಯ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ :- ಅಧ್ಯಕ್ಷರೇ, ನಾನೇನು ತಿಳಿದುಕೊಂಡಿದ್ದೆ ಎಂದರೆ ತಾವು ಹೇಳಿದಂತೆ ಇಡೀ ಕರ್ನಾಟಕದಲ್ಲಿರತಕ್ಕ ಮಹಿಳೆಯರು, ಹಳ್ಳಿಗಳಲ್ಲೂ ಸಹ ನೀರನ್ನು ತರತಕ್ಕವರು ಹೆಚ್ಚಾಗಿ ಹೆಣ್ಣು ಮಕ್ಕಳೇ; ಗಂಡಸರು ಎಲ್ಲೋ 5 ಪರ್ಸೆಂಟ್‌ನಷ್ಟು ತರುತ್ತಾರೆ. ಅಲ್ಲೂ ಸಹ ಹೆಣ್ಣುಮಕ್ಕಳ ಸಮಸ್ಯೆಯೆ ಇದೆ. ಆದ್ದರಿಂದ ನಮ್ಮೆಲ್ಲರ ಸಮಸ್ಯೆಯನ್ನು ಮಾನ್ಯ ಸದಸ್ಯಣಿಯೊಬ್ಬರೇ ಮಾತನಾಡುತ್ತಾರೆಂದು ನಾನು ತಿಳಿದುಕೊಂಡಿದ್ದೆ. ಆದರೆ ಅವರು ಅದನ್ನು ಬಿಟ್ಟು ಬಸವನಗುಡಿಗೆ ಹೋದರು, ಚಾಮರಾಜಪೇಟೆಗೆ ಬಂದರು ಅನಂತರ ಬಿನ್ನಿಪೇಟೆಗೆ ಹೋದರು; ಇದರಲ್ಲೇನು ಗುಟ್ಟು ಇದೆ. ಅದರ ಬಗ್ಗೆ ಮಾನ್ಯ ನಂಜೇಗೌಡರನ್ನು ಕೇಳಿಕೊಂಡರೆ ಒಳ್ಳೆಯದು. ಏಕೆಂದರೆ ನಂಜೇಗೌಡರ ಕ್ಷೇತ್ರದಲ್ಲಿ ನೀರು ಬರುತ್ತದೆ; ಅವರ ಕ್ಷೇತ್ರಕ್ಕೆ ನೀರು ಬರುವುದಿಲ್ಲವೆಂದರೆ ಈ ಗುಟ್ಟನ್ನು ನಂಜೇಗೌಡರ ಹತ್ತಿರ ಕೇಳಿಕೊಂಡರೆ ಸೂಕ್ತ.

ಶ್ರೀಮತಿ ಪ್ರಮೀಳಾ ಎಸ್.ನೇಸರ್ಗಿ :- ಸನ್ಮಾನ್ಯ ಖಾರ್ಗೆಯವರಿಗಿ ದಯಮಾಡಿ

ತಿಳಿಸುವುದಾದರೆ ಇವತ್ತಿನ ದಿವಸ ವಿಷಯ ಇರತಕ್ಕದ್ದು ಬೆಂಗಳೂರಿನ ನೀರಿನ ಸಮಸ್ಯೆ. ಬಿನ್ನಿಪೇಟೆ ಬೆಂಗಳೂರಿನಲ್ಲಿ ಬರುತ್ತದೆ, ಬಸವನಗುಡಿ, ಜಯನಗರ, ಬೆಂಗಳೂರಿನಲ್ಲಿ ಬರುತ್ತದೆ, ಸುರೇಶ್ ಕುಮಾರ್‌ರವರು ರಾಜಾಜಿನಗರದ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ, ಮುನಿಯಪ್ಪನವರು ಗಾಂಧಿನಗರದ ಬಗ್ಗೆ ಈಗಾಗಲೇ ಮಾತನಾಡಲು ಸಿದ್ಧರಾಗಿದ್ದಾರೆ. ಆದ್ದರಿಂದ ನಾನು ಬೆಂಗಳೂರಿನ ಬಗ್ಗೆ ಮಾತನಾಡುತ್ತಿದ್ದೇನೆ. ಇದೇ ಕರ್ನಾಟಕದ ಬಗ್ಗೆ ಮಾತನಾಡಬೇಕೆಂದರೆ ಬೀದರ್, ಗುಲ್ಬರ್ಗಾ, ಹೈದ್ರಾಬಾದ್ ಕರ್ನಾಟಕದಲ್ಲಿ ಏನಾಗಿದೆ ಎನ್ನುವ ಬಗ್ಗೆ ಸಹ ಮಾತನಾಡಲು ಸಿದ್ಧಳಾಗಿದ್ದೇನೆ. ಅದರ ಬಗ್ಗೆ ಮಾತನಾಡಬೇಕು ಎಂದರೆ ಒಂದು ದಿವಸವೂ ಸಹ ಸಾಕಾಗುವುದಿಲ್ಲ. ಆದರೆ ವಿಷಯವನ್ನರಿತು, ಬೆಂಗಳೂರಿನ ಬಗ್ಗೆ ಮಾತನಾಡಬೇಕಾಗಿರುವ ಸಂದರ್ಭದಲ್ಲಿ....

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ :- ನಾವು ನಮ್ಮ ಕಡೆಯದೆಲ್ಲ ಕೇಸನ್ನು ಇವರಿಗೆ ಕೊಟ್ಟು ಹಾಳಾಗಿದ್ದೇವೆ, ತಾವು ಮಾತನಾಡಿ.

ಶ್ರೀಮತಿ ಪ್ರಮೀಳಾ ಎಸ್.ನೇಸರ್ಗಿ :- ತಾವು ಆ ಮಾತನ್ನು ಹೇಳಬಾರದು. ನನ್ನ ಕೈಯಲ್ಲಿ ನೀವು ಕೇಸನ್ನು ಕೊಟ್ಟು ಹಾಳಾಗಿದೆ ಎಂದು ತಾವು ಹೇಳಬಾರದು. ತಾವು ಆ ಮಾತನ್ನು ಹೇಳುವುದಾದರೆ ನಾನು ಅದನ್ನು ಚಾಲೆಂಜ್ ಆಗಿ ತೆಗೆದುಕೊಳ್ಳುತ್ತೇನೆ. ನಿಮ್ಮ ಕ್ಷೇತ್ರದಿಂದ ಬಂದಿರತಕ್ಕ ಒಂದು ಕೇಸನ್ನು ಸಹ ನಾನು ಸೋತಿಲ್ಲ, ಸೋಲಲು ಸಾಧ್ಯವಿಲ್ಲ; ಗೆದ್ದೇ ಬರುತ್ತೇನೆ ಎನ್ನತಕ್ಕ ಮಾತನ್ನು ಹೇಳುತ್ತೇನೆ. ಇದನ್ನೇ ಕೊಟ್ಟು ನೋಡಿ. ಇಡೀ ಕರ್ನಾಟಕದ ನೀರಿನ ಸಮಸ್ಯೆಯ ಬಗ್ಗೆ ಕೊಟ್ಟು ನೋಡಿ. ಸಮಸ್ಯೆಯನ್ನು ನಿವಾರಿಸುತ್ತೇವೋ ಇಲ್ಲವೋ ಎಂಬುದನ್ನು ನೋಡುವಿರುವಂತೆ. ತಾವು ವೈಯಕ್ತಿಕ ವಿಷಯವನ್ನು ಹೇಳುವುದಕ್ಕೆ ಹೋಗಬೇಡಿ.

ಶ್ರೀ ವಿ.ಸೋಮಣ್ಣ :- ಅಧ್ಯಕ್ಷರೇ, ತಾವೇನೋ ಮಾತನಾಡಲು ಅವಕಾಶ ಕೊಟ್ಟರೆ ಇವರೇಕೆ ಈ ರೀತಿ ಮಾತನಾಡುತ್ತಾರೆ.

ಶ್ರೀಮತಿ ಪ್ರಮೀಳಾ ಎಸ್.ನೇಸರ್ಗಿ :- ನೀರಿನ ಸಂದರ್ಭದಲ್ಲಿ ಸಹ ಇಡೀ ಕರ್ನಾಟಕದಲ್ಲಿ ನೀರನ್ನು ಯಾವ ರೀತಿಯಲ್ಲಿ ಸರಬರಾಜು ಮಾಡಬೇಕು ಎಂಬುದನ್ನು ನಮಗೆ ಕೊಟ್ಟು ನೋಡಿ, ನಾವು ಅದನ್ನು ಮಾಡದಿದ್ದರೆ ಆಗ ತಾವು ಹೇಳಿ. ಅದನ್ನು ಮಾಡಲು ಶಕ್ತಿ ಮತ್ತು ಯುಕ್ತಿ ಎರಡೂ ಇದೆ. ಇವತ್ತು ಬೇರೆ ಕ್ಷೇತ್ರದಲ್ಲಿ ಎಷ್ಟು ಚೆನ್ನಾಗಿ ಕೆಲಸವನ್ನು ಮಾಡುತ್ತಿದ್ದಾರೆಂಬ ಬಗ್ಗೆ ನಾನು ಹೇಳಬಲ್ಲೆ. ನಿಮ್ಮ 5 ವರ್ಷದಲ್ಲಿ ನೀರಿನ ಇಂಥ ಸ್ಥಿತಿಯಾಗಿದೆ ಎಂದು ದು:ಖದಿಂದ ಹೇಳಬೇಕಾಗುತ್ತದೆ. ನೀವು ಮಾಡಿರುವ ಪರಿಣಾಮ ಇವತ್ತೇನಾಗಿದೆ ಎಂಬುದನ್ನು ನೋಡಿ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ :- ನಾವು ಮೂರನೆಯ ಹಂತದ ಕೆಲಸವನ್ನಾದರೂ ಮಾಡಿದ್ದೇವೆಲ್ಲ, ನೀವು ಅದನ್ನು ಸಹ ಮಾಡಿಲ್ಲ.

ಶ್ರೀಮತಿ ಪ್ರಮೀಳಾ ಎಸ್. ನೇಸರ್ಗಿ :- ನೀವು 5 ವರ್ಷಗಳಲ್ಲಿ ಏನು ಮಾಡಿದ್ದೀರಿ ಎಂಬುದನ್ನು ನೋಡಬೇಕಾಗಿದೆ. ಆದ್ದರಿಂದ ಇವತ್ತು ಈ ಪರಿಸ್ಥಿತಿ ಬಂದಿದೆ. ಬೆಂಗಳೂರು ನಾಗರೀಕರಿಗೆ ಎಂಥ ಅನ್ಯಾಯವಾಗಿದೆ ಎಂಬುದನ್ನು ಬಂದು ನೋಡಿ.

ಅಧ್ಯಕ್ಷರು :- ಮಾನ್ಯ ವಾಟಾಳ್ ನಾಗರಾಜ್‌ರವರು ಇದರ ಬಗ್ಗೆ ಏನೂ ಮಾತನಾಡುವುದಿಲ್ಲವೇ ?

ಶ್ರೀ ವಾಟಾಳ್ ನಾಗರಾಜ್ :- ನಮ್ಮ ಸದಸ್ಯಣಿಯರು ಮಾತಿನ ಭರದಲ್ಲಿ ನಿಮ್ಮ ಸರ್ಕಾರವಿದ್ದಾಗ ಬಹಳ ಅನ್ಯಾಯವಾಗಿತ್ತು ಎಂದರು. ಅಂದರೆ ಇವರು ಈಗ ಪಕ್ಕಾ ಜನತಾ ದಳದ ಪರವಾಗಿ ಮಾತನಾಡಿಬಿಟ್ಟರಲ್ಲಾ; ಮಾನ್ಯ ಖರ್ಗೆಯವರನ್ನು ಕುರಿತು ನಿಮ್ಮ ಸರ್ಕಾರವಿದ್ದಾಗ ಈ ರೀತಿಯಾಯಿತು ಎಂದು ಅವರು ಹೇಳಿದ್ದಾರೆ, ಅಂದರೆ ಈಗ ಅಧಿಕಾರಕ್ಕೆ ಬಂದರು ಸರ್ಕಾರ ಯಾವುದು ಜನತಾ ದಳ ಸರ್ಕಾರ, ಅಂದರೆ ನಿಮ್ಮ ಪರವಾಗಿ ಮಾತನಾಡಿದರು; ನೀವು ಚೆನ್ನಾಗಿ ಕೆಲಸ ಮಾಡುತ್ತೀರೆಂದು ಆಯಿತು.

ಶ್ರೀಮತಿ ಪ್ರಮೀಳಾ ಎಸ್. ನೇಸರ್ಗಿ :- ಸತ್ಯವನ್ನು ಹೇಳುವುದರಲ್ಲಿ ತಪ್ಪೇನಿದೆ ? ಆ ಸರ್ಕಾರ ಇದ್ದಾಗ ಪರಿಸ್ಥಿತಿ ಅಧೋಗತಿಗೆ ಹೋಗಿತ್ತು. ಆದರೆ ಈಗ ಸುಧಾರಣೆ ಮಾಡಿ ಎನ್ನುವುದಕ್ಕೋಸ್ಕರ ಹೇಳುತ್ತಿದ್ದೇನೆ. ಈಗ ಹೊಸದಾಗಿ ಸರ್ಕಾರ ಬಂದಿದೆ, ಜನಗಳ ಬಗ್ಗೆ ಕಳಕಳಿ ಇದೆ. ಏನಾದರೂ ಕೆಲಸ ಮಾಡಬಹುದು ಎನ್ನತಕ್ಕ ಆಶಾಭಾವನೆಯನ್ನಿಟ್ಟುಕೊಂಡು ಮಾತನಾಡುತ್ತಿದ್ದೇನೆ, ಕೆಲಸವಾಗುತ್ತದೋ ಅಥವಾ ಇಲ್ಲವೋ ಎಂಬ ಬಗ್ಗೆ ಮುಂದೆ ನೋಡಬೇಕಷ್ಟೆ, ಇನ್ನು ಮೂರು ತಿಂಗಳು ಕಾಲ ಕಾದು ನೋಡಬೇಕಾಗುತ್ತದೆ, ಕೇವಲ ಮೂರು ತಿಂಗಳಿನಲ್ಲಿ ಆಕಾಶವನ್ನು ಕೆಳಗೆ ಇಳಿಸು ಎಂದರೆ ಯಾರ ಕೈಯಿಂದಲೂ ಸಾಧ್ಯವಾಗುವುದಿಲ್ಲ, ಆದರೆ ಇರತಕ್ಕ ಪರಿಸ್ಥಿತಿಯನ್ನು ಅವರ ಗಮನಕ್ಕೆ ತಂದರೆ ಏನಾದರೂ ಮಾಡಬಹುದು ಎಂಬ ದೃಷ್ಟಿಯಿಂದ ಹೇಳುತ್ತಿದ್ದೇನೆ.

ಅಧ್ಯಕ್ಷರು :- ಮೊದಲು ನೀವು ಇಲ್ಲಿದ್ದಿರೆಂಬುದು ಇಲ್ಲಿ ಯಾರಿಗೂ ನೆನಪು ಇಲ್ಲ, ಅವರಿಗೆ ಎಷ್ಟು ಅಸಮಾಧಾನ ನಿಮ್ಮ ಬಗ್ಗೆ ನೋಡಿ? ನೀವೆಲ್ಲರೂ ಮೊದಲು ಒಟ್ಟಿಗೆ ಇದ್ದರಲ್ಲವೇ ?

ಶ್ರೀ ಸಿದ್ಧರಾಮಯ್ಯ :- ಮಾನ್ಯ ಖರ್ಗೆಯವರಿಗೆ ಅವರು ನಮ್ಮ ಜೊತೆ ಮೊದಲು ಇದ್ದರು ಎಂಬುದೇ ಜ್ಞಾಪಕ ಇಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ಅವರು ನಿಮ್ಮ ಪಕ್ಷದಲ್ಲಿದ್ದವರು, ಕೆಲವು ದಿವಸ ನಮ್ಮ ಪಕ್ಷದಲ್ಲಿದ್ದರು. ಆದರೆ ತಾವು ಬರೇ ನಮ್ಮ ಪಕ್ಷದಲ್ಲಿದ್ದರು ಎಂಬುದನ್ನು ನೆನಪು ಮಾಡಿಕೊಂಡು ಹೇಳಿದರೆ ಹೇಗೆ ? ಎಲ್ಲಾ ಪಕ್ಷದಲ್ಲಿದ್ದು ಕೊನೆಗೆ ಬಿ. ಜೆ. ಪಿ. ಗೆ ಬಂದಿದ್ದಾರೆ.

ಶ್ರೀ ಸಿದ್ಧರಾಮಯ್ಯ :- ನಾವು ಜನಪರವಾಗಿ, ಜನರ ಪರವಾಗಿ ಸಮಸ್ಯೆಗಳನ್ನು ಸ್ಪಂದಿಸುತ್ತೇವೆಂದು ಭರವಸೆಯನ್ನಿಟ್ಟುಕೊಂಡು ಮಾತನಾಡಿದರೆ ತಮಗೇಕೆ ಬೇಜಾರು ?

ಶ್ರೀ ವಾಟಾಳ್ ನಾಗರಾಜ್ :- ಈ ಸರ್ಕಾರದವರಿಂದ ನೀರು ಸರಿಯಾಗಿ ವ್ಯವಸ್ಥೆ ಇಲ್ಲ ಎಂದು ಹೇಳಿ ಅರ್ಧ ಗಂಟೆ ಚರ್ಚೆಗೆ ಈ ವಿಷಯವನ್ನು ತಂದಿದ್ದೀರಿ. ಆದರೆ ನೀವು ಮಾತನಾಡುತ್ತಾ ಮಾತನಾಡುತ್ತಾ ನಿಮ್ಮ ಸರ್ಕಾರ ನೀರಿನ ಬಗ್ಗೆ ಅನ್ಯಾಯ ಮಾಡಿದ್ದಾರೆ ಸರಿಯಾದ ವ್ಯವಸ್ಥೆ ಇರಲಿಲ್ಲ ಎಂದು ಹೇಳಿದ ಮೇಲೆ ಈ ಸರ್ಕಾರ ನೀರು ಕೊಡುತ್ತದೆ ಎಂದು ಅರ್ಥ ತಂದು ಬಿಟ್ಟ ನೀವು ಏಕೆ ಅವರಿಗೆ ಬೆಲೆ ಕೊಡುತ್ತಿದ್ದೀರಿ ? ಒಳ್ಳೆ ಪರಿಸ್ಥಿತಿಯಾಯಿತಲ್ಲಾ. ನಿಮ್ಮ ಸರ್ಕಾರದಲ್ಲಿ ನೀರೇ ಇಲ್ಲ ಎಂದು ಹೇಳಿ ದಯವಿಟ್ಟು ಅವರಿಗೆ.

ಅಧ್ಯಕ್ಷರು :- ಅವರು ನೀರು ಬಗ್ಗೆ ಮಾತನಾಡಬೇಕಾದರೆ ಇವರು ನಿಮ್ಮ ಕಡೆ ಕೊಟ್ಟ ಕೇಸು ಎಲ್ಲಾ ಹೋಯಿತು ಅಂದರೆ ಅವರು ಸಿಟ್ಟಿಗಾಗಿ ಹೇಳುತ್ತಾರೆ. ಹೇಳದೇ ಇರುತ್ತಾರೋ ?

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ :- ನಾವು ಹೇಳುವುದು ಬೇಡ. ಉದಾಸಿಯವರು ಆ ವಿಚಾರ ಹೇಳಿದರು.

(ಗೊಂದಲ)

ಅಧ್ಯಕ್ಷರು :- ನೀವೂ ಕೇಸಿನ ವಿಚಾರ ಎತ್ತದೆ ಇದ್ದಿದ್ದರೆ ಅವರು ನಿಮ್ಮ ಸರ್ಕಾರದ ಬಗ್ಗೆ ಮಾತನಾಡುತ್ತಿರಲಿಲ್ಲ.

ಶ್ರೀಮತಿ ಪ್ರಮೀಳಾ ಎಸ್.ನೇಸರ್ಗಿ :- ಕೇಸು ವಿಚಾರ ಎತ್ತದೆ ಇದ್ದಿದ್ದರೆ ಸುಮ್ಮನೆ ಇರುತ್ತಿದ್ದೆವು.

ಅಧ್ಯಕ್ಷರು :- ನೀವು ಕೇಸ್ ವಿಷಯ ಎತ್ತಿದ್ದರಿಂದ ಅವರು ನಿಮ್ಮ ಸರ್ಕಾರದ ವಿಷಯ ಎತ್ತಿದ್ದರು.

ಶ್ರೀಮತಿ ಪ್ರಮೀಳಾ ಎಸ್.ನೇಸರ್ಗಿ :- ಹೌದು. ಎತ್ತಬೇಕಾಯಿತು.

ಅಧ್ಯಕ್ಷರು :- ತಾವು ಹೇಳಿದಂತೆ ಸರಿ ಇದೆ.

ಶ್ರೀಮತಿ ಪ್ರಮೀಳಾ ಎಸ್.ನೇಸರ್ಗಿ :- ಮಾನ್ಯ ಸಭಾಧ್ಯಕ್ಷರೇ, ಈ ಸಂದರ್ಭದಲ್ಲಿ ನಾನು ಸನ್ಮಾನ್ಯ ಮುಖ್ಯ ಮಂತ್ರಿಗಳಿಗೆ ಕೆಲವು ಸಲಹೆಗಳನ್ನು ಕೊಡಲಿಚ್ಛಿಸುತ್ತೇನೆ. ಈಗಾಗಲೇ ಬೋರ್‌ವೆಲ್‌ಗಳ ಬಗ್ಗೆ ನಮ್ಮ ಸದಸ್ಯರು ಮಾತನಾಡಿದರು. ನಾನಾದರೂ ಹೇಳುವುದು ಇಷ್ಟೆ, ಬೋರ್‌ವೆಲ್‌ಗಳನ್ನು ಯದ್ವಾತದ್ವಾ ತೆಗೆಯುವುದರಿಂದ

ಬೆಂಗಳೂರಿನ ವಾಟರ್ ಟೇಬಲ್ ಈಗಾಗಲೇ ಕಡಿಮೆ ಹೋಗಿದೆ. ಏನು ಪರಿಸ್ಥಿತಿ ಉಂಟಾಗುತ್ತದೆ ಎನ್ನುವುದರ ಬಗ್ಗೆ ಅವರು ಟೆಕ್ನಿಕಲ್ ಒಪೀನಿಯನ್ ತೆಗೆದುಕೊಳ್ಳಬೇಕಾಗಿದೆ. ಏತಕ್ಕೆಂದರೆ ಎಲ್ಲಿ ಬೇಕಾದ ಕಡೆ ಬೋರ್‌ವೆಲ್‌ಗಳನ್ನು ತೆಗೆದು ಬಿಟ್ಟು ಬೆಂಗಳೂರಿನ ನಾಗರೀಕರಿಗೆ ಈಗಿರತಕ್ಕಂತಹ ಬೋರ್‌ವೆಲ್‌ಗಳಲ್ಲಿ ನೀರು ಬರುವುದೂ ಕೂಡ ಕಡಿಮೆ ಆಗಬಹುದು. ಆ ಪರಿಸ್ಥಿತಿ ಅವರಿಗಿ ಒದಗಿ ಬರಬಾರದು. ಆ ಕಾರಣದಿಂದ ಎಕ್ಸ್‌ಪರ್ಟ್‌ಗಳಿಂದ ವಾಟರ್ ಲೆವಲ್ ಆಗಿದೆ, ಏನಾಗಿದೆ ಎಂಬುದನ್ನು ತಿಳಿದುಕೊಳ್ಳಲು ಕ್ರಮ ಕೈಗೊಳ್ಳಬೇಕು. ಎಲ್ಲಿ ಬೋರ್‌ವೆಲ್‌ಗಳು ಕೆಟ್ಟು ಹೋಗಿವೆ ಅದನ್ನು ತಕ್ಷಣ ರಿಪೇರಿ ಮಾಡುವುದಕ್ಕೆ ಅವರು ವ್ಯವಸ್ಥೆ ಮಾಡಬೇಕು. ಸನ್ಮಾನ್ಯ ಅಧ್ಯಕ್ಷರೇ, ಮತ್ತೊಂದು ಮುಖ್ಯವಾದ ವಿಷಯ ಏನೆಂದರೆ ಈ ನೀರು ಸರಬರಾಜಿನ ಸಂದರ್ಭದಲ್ಲಿ ವಾಟರ್ ಮತ್ತು ಸ್ಯೂವರೇಜ್ ಎರಡೂ ಕನೆಕ್ಷನ್ ಒಟ್ಟಿಗೆ ಇಟ್ಟುಕೊಂಡು ಈ ವಾಟರ್ ಕನೆಕ್ಷನ್ ಎಷ್ಟೋ ಕಡೆ ಸ್ಯೂವರೇಜ್‌ಗಳು ಒಡೆದು ಹೋಗಿ ಇವತ್ತು ನೀರು ಇದರ ಜೊತೆಗೆ ಮಿಕ್ಸ್ ಆಗಿ ಬರತಕ್ಕಂಥ ವಿಷಯವನ್ನು ಸನ್ಮಾನ್ಯ ನಂಜೇಗೌಡರು ಈಗಾಗಲೇ ಪ್ರಸ್ತಾಪ ಮಾಡಿದ್ದಾರೆ. ನಾನಾದರೂ ಹೇಳುವುದು ಇಷ್ಟೇ ಮಾನ್ಯ ಸಭಾಧ್ಯಕ್ಷರೇ, ಇವತ್ತಿನ ದಿವಸ 39ನೇ ಡಿವಿಷನ್ ಎಸ್.ಪಿ.ರೋಡ್‌ನಲ್ಲಿ ಏನಾಗಿದೆ ಎಂಬುದನ್ನು ಹೇಳುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಗಮನಿಸಬೇಕು. ಇವತ್ತು ಬೆಂಗಳೂರಿನಲ್ಲಿ ಈ ಸ್ಯೂವರೇಜ್‌ಗಳು ಒಡೆದು ಹೋಗಿ ಮನೆಗಳಲ್ಲಿ ಇರತಕ್ಕಂತಹ ಬಾವಿಗಳ ಒಳಗಡೆ ಇವತ್ತು ಸ್ಯೂವರೇಜ್ ವಾಟರ್ ಹೋಗಿದೆ. ಮೂರು ದಿವಸದಿಂದ ಈ ಕಂಪ್ಲೇಟನ್ನು ಆಗಲೇ ನಾನು ಕಳುಹಿಸಿಕೊಟ್ಟಿದ್ದೇನೆ. ಇದುವರೆಗೂ ಕೂಡ ರಿಪೇರಿ ಆಗಿಲ್ಲ. ಕುಡಿಯುವ ನೀರು ನಲ್ಲಿಯಲ್ಲಿ ಬರುವುದಿಲ್ಲ. ಬಾವಿಗಳಲ್ಲಿ ನೀರನ್ನು ಎಳೆದುಕೊಳ್ಳೋಣ ಎಂದು ಹೇಳಿದರೆ ಈ ಸ್ಯೂವರೇಜ್ ವಾಟರ್ ಹೋಗಿ ಬಾವಿಯಲ್ಲಿ ಸೇರಿದೆ. ಈ ಪರಿಸ್ಥಿತಿ ಬೆಂಗಳೂರಿನ ನಾಗರೀಕರಿಗೆ ಒದಗಿ ಬಂದಿದೆ. ಇದನ್ನು ಸರಿಪಡಿಸಬೇಕಾದುದು ಅತಿ ಅವಶ್ಯಕವಾದುದು. ಏಕೆಂದರೆ ಆರೋಗ್ಯದ ಮೇಲೆ ಕೂಡ ಇದು ದುಷ್ಪರಿಣಾಮ ಬೀರುತ್ತದೆ ಮತ್ತು ಬೆಂಗಳೂರಿನ ನಾಗರೀಕರಿಗೆ ಬೇಸಿಗೆಯಲ್ಲಿ ಪ್ಲೇಗ್ ಅಥವಾ ಕಾಲರಾ ಇದು ಹೆಚ್ಚು ಬರತಕ್ಕಂತಹ ಸಂದರ್ಭ. ನೀರಿನ ಅಭಾವ ಉಂಟಾದಾಗ ಸಂಕ್ರಾಮಿಕ ರೋಗಗಳು ಹಬ್ಬದ ಹಾಗೆ ನೋಡಿಕೊಳ್ಳಬೇಕಾದುದು ಪ್ರತಿಯೊಬ್ಬರ ಕರ್ತವ್ಯ. ಆ ಕಾರಣ ಇದರ ಬಗ್ಗೆ ಸೂಕ್ತವಾಗಿ ತಕ್ಷಣ ಕೆಲಸವನ್ನು ಹಮ್ಮಿಕೊಳ್ಳಬೇಕಾದುದು ಅಗತ್ಯ. ಒಂದೇ ಒಂದು ಕೊನೆ ಮಾತು. ಇವತ್ತು ಕಾರ್ಪೊರೇಷನ್‌ನಲ್ಲಿ ಒಂದು ಟ್ಯಾಕ್ಸನ್ನು ಹಾಕಿದ್ದಾರೆ. ಮನೆ ಯಾರಾದರೂ ಬೆಂಗಳೂರಿನಲ್ಲಿ ಕಟ್ಟಬೇಕು ಎಂದು ಹೇಳಿದರೆ ಕಾವೇರಿ ಫೇಸಿಗೆ ದುಡ್ಡು ಕಟ್ಟಬೇಕು ಎಂದು ಹೇಳಿ ಲಕ್ಷಾಂತರ ರೂಪಾಯಿಗಳನ್ನು ವಸೂಲಿ ಮಾಡಲು ವ್ಯವಸ್ಥೆ ಮಾಡಿದ್ದಾರೆ. ಅದರ ಬಗ್ಗೆ ಈಗಾಗಲೇ ಕೋರ್ಟ್‌ನಲ್ಲಿ ಕೇಸನ್ನು ಹಾಕಿದ್ದಾರೆ. ಅದನ್ನು ಸನ್ಮಾನ್ಯ ಮಂತ್ರಿಗಳು ನೋಡಬೇಕು. ಏಕೆ ಎಂದು ಕೇಳಿದೆವು ನಾವು, ಕೇಳಿದಾಗ ಅವರು ಹೇಳಿದರು ವಾಟರ್ ಬೋರ್ಡ್‌ಗೆ ನಾವು ದುಡ್ಡು ಕಟ್ಟಬೇಕು ಎಂದು. ಸನ್ಮಾನ್ಯ ಮಂತ್ರಿಗಳೇ, ಇವತ್ತು ಬೆಂಗಳೂರಿನ ನಾಗರೀಕರಿಂದ ಕಾರ್ಪೊರೇಷನ್‌ನವರು ವಾಟರ್ ಟ್ಯಾಕ್ಸನ್ನು ಕಲೆಕ್ಟ್ ಮಾಡುತ್ತಿದ್ದಾರೆ. ಪ್ರತಿಯೊಬ್ಬರ ಹತ್ತಿರ ಅವರು ಕಲೆಕ್ಟ್ ಮಾಡಿ ಅವರು ಆಗಲೇ ಕಟ್ಟುತ್ತಾ ಇದ್ದಾರೆ. ಇಂತಹದ್ದರಲ್ಲಿ

ಡಬಲ್ ಟ್ಯಾಕ್ಸ್ ಹಾಕಿದ ಹಾಗೆ ಆಗುತ್ತದೆ. ಕಾರ್ಪೊರೇಷನ್‌ನವರು ನಮ್ಮ ಹತ್ತಿರ ಟ್ಯಾಕ್ಸ್ ತೆಗೆದುಕೊಳ್ಳುವುದನ್ನು ಕಡಿಮೆ ಮಾಡಬೇಕು. ಅಥವಾ ಈ ಟ್ಯಾಕ್ಸ್‌ಅನ್ನು ತೆಗೆದು ಹಾಕಬೇಕು. ಬೆಂಗಳೂರು ನಾಗರೀಕರ ಮೇಲೆ ಈ ನೀರಿನ ನೆಪದಲ್ಲಿ ಎರಡೂ ಕಡೆ ಟ್ಯಾಕ್ಸ್ ಹಾಕುತ್ತಾ ಇದ್ದಾರೆ. ಮಾರ್ವಾಡಿ ಕೆಲಸವನ್ನು ಬೆಂಗಳೂರು ಕಾರ್ಪೊರೇಷನ್‌ರವರು ಮಾಡುವುದಕ್ಕೆ ಹಾಕುತ್ತಾ ಇದ್ದಾರೆ. ಏಕೆಂದು ಕೇಳಿದರೆ ಬಡ್ಡಿ ಕೊಡಲಿಕ್ಕೆ ಬೇರೆ ಎಂದು ಹೇಳುತ್ತಾರೆ. ತೆಗೆದುಕೊಂಡು ಅವರಿಗೆ ಬಡ್ಡಿ ಕೊಡುತ್ತೇವೆ ಎಂದು ಹೇಳುತ್ತಿದ್ದಾರೆ. ಇದು ನಿಜವಾಗಿಯೂ ಕೂಡ ಮಾರ್ವಾಡಿ ಕೆಲಸ ಮಾಡತಕ್ಕಂತಹದ್ದು ಕಾರ್ಪೊರೇಷನ್‌ಗೆ ಯೋಗ್ಯತೆ ತರತಕ್ಕಂತಹ ವಿಷಯ ಅಲ್ಲ. ಇದರ ಬಗ್ಗೆಯೂ ಕೂಡ ಸೂಕ್ತ ಕ್ರಮವನ್ನು ತೆಗೆದುಕೊಂಡು ಬೆಂಗಳೂರಿನ ನಾಗರೀಕರ ಮೇಲೆ ಬಂದಿರತಕ್ಕಂತಹ ಈ ಹೊಣೆಯನ್ನು ತೆಗೆದುಹಾಕತಕ್ಕಂತಹ ಜವಾಬ್ದಾರಿ ಪ್ರತಿಯೊಬ್ಬರಿಗೂ ಇದೆ, ಆ ಕೆಲಸವನ್ನು ಕೂಡ ತಾವು ಮಾಡಬೇಕು ಎಂದು ಈ ಸಂಧರ್ಭದಲ್ಲಿ ನಾನು ಕೇಳಿಕೊಳ್ಳುತ್ತಾ ಇದ್ದೇನೆ. ನೀರಿನ ಸರಬರಾಜು ಸುಗಮವಾಗಿ ಆಗಲಿ; ಯುಗಾದಿ ಹಬ್ಬ ಬರುತ್ತದೆ. ಮಹಿಳೆಯರು ಮೊನ್ನೆ ಹೋಳಿ ಹಬ್ಬದ ದಿವಸ ಸ್ನಾನ ಮಾಡಿಕೊಳ್ಳಲಿಕ್ಕೆ ನೀರು ಇರಲಿಲ್ಲ; ಮುಖ್ಯ ಮಂತ್ರಿಗಳೇ, ದಯವಿಟ್ಟು.....

ಶ್ರೀ ಹೆಚ್.ಡಿ.ದೇವೇಗೌಡ :- ನಿಮ್ಮ ಮನೆಗೆ ನೀರು ಬರುತ್ತಿದೆಯಲ್ಲಾ ?

ಶ್ರೀಮತಿ ಪ್ರಮೀಳಾ ಎಸ್.ನೇಸರ್ಗಿ :- ನಮ್ಮ ಮನೆಗೆ ನಾನು ಬೋರ್‌ವೆಲ್ ಹಾಕಿಸಿಕೊಂಡು ಬಿಟ್ಟಿದ್ದೇನೆ. ಇದರ ಬಗ್ಗೆ ನಂಬಿಕೆಯೇ ಇಲ್ಲದೆ ಹೋಗಿ ಬೋರ್‌ವೆಲ್ ಹಾಕಿಸಿಕೊಂಡು ಅದರಿಂದ ನೀರು ತೆಗೆದುಕೊಳ್ಳುತ್ತಾ ಇದ್ದೇನೆ. ಕಾರ್ಪೊರೇಷನ್ ನೀರಿನ ಬಗ್ಗೆ ನನಗೆ ಅವಲಂಬಿಸುವುದಕ್ಕೆ ಇಷ್ಟ ಇಲ್ಲ. ಏಕೆಂದರೆ ಅದು ಯಾವತ್ತು ಬರುತ್ತದೆಯೋ ಯಾವಾಗ ಹೋಗುತ್ತದೆಯೋ ನನಗೆ ಗೊತ್ತಿಲ್ಲ. ಯುಗಾದಿ ಹಬ್ಬ ಬರತಕ್ಕಂತಹ ಈ ಸಂದರ್ಭದಲ್ಲಿ ಎಲ್ಲರೂ ಕೂಡ ಸ್ನಾನ ಮಾಡಿ ಒಳ್ಳೆಯ ಶುಭ್ರವಾದ ಬಟ್ಟೆಯನ್ನು ಹಾಕಿಕೊಂಡು ಅವತ್ತಿನ ದಿವಸ ವರ್ಷ ಪೂರ್ತಿ ಚೆನ್ನಾಗಿ ಇರಬೇಕು ಎಂದು ಎಲ್ಲರೂ ಕೂಡ ಆಚರಿಸತಕ್ಕಂತಹ ಹಬ್ಬ. ಆ ಹಬ್ಬದ ದಿವಸವಾದರೂ ನೀರು ಬರದೇ ಇದ್ದರೆ ಕಷ್ಟವಾಗುತ್ತದೆ. ಆದ್ದರಿಂದ ದಯವಿಟ್ಟು ವಾಟರ್ ಬೋರ್ಡ್ ಚೇರ್‌ಮನ್ ಎಲ್ಲರೂ ಬಂದು ಅವರ ಕಿವಿ ಹಿಂಡಿ ಸರಿಯಾದ ಕೆಲಸವನ್ನು ತಾವು ಮಾಡಬೇಕೆಂದು ಹೇಳಿ ಈ ಸಂದರ್ಭದಲ್ಲಿ ನಾನು ಕೇಳಿಕೊಂಡು ನನ್ನ ಎರಡು ಮಾತುಗಳನ್ನು ಮುಗಿಸುತ್ತಿದ್ದೇನೆ. ನಮಸ್ಕಾರ.

ಶ್ರೀ ಬಿ.ಮುನಿಯಪ್ಪ:(ಗಾಂಧಿನಗರ ಕ್ಷೇತ್ರ) :- ಅಧ್ಯಕ್ಷರೇ, ಜರೂರು ವಿಷಯದ ಬಗ್ಗೆ ಅಲ್ಪಕಾಲಾವಧಿ ಚರ್ಚೆ ಎಂದು ಬೆಂಗಳೂರಿನ ಸಮಸ್ಯೆ ಬಗ್ಗೆ ದೀರ್ಘಾವಧಿ ಚರ್ಚೆಯನ್ನು ನಾವು ಮಾಡುತ್ತಿದ್ದೇವೆ. ನೀರಿನ ಸಮಸ್ಯೆ ಆಗುತ್ತಾ ಇದೆ. ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿ ಏನು ಇದೆ ಬೆಂಗಳೂರನ್ನು ಕಟ್ಟಿದಂತಹ ಕೆಂಪೇಗೌಡರು ಗಡಿಯಾಗಿ ಕಟ್ಟಿದಂತಹ ಗೋಪುರಗಳನ್ನು ಮೀರಿ ಇವತ್ತು ಗಡಿ ಎಲ್ಲೋ ಹೋಗಿ ಬೆಂಗಳೂರು ಬಹಳ ಬೃಹದಾಕಾರವಾಗಿ ಈ ಭಾರತ ದೇಶದ 25

ರಾಜ್ಯಗಳಲ್ಲಿ ಯಾವ ರಾಜ್ಯದ ರಾಜಧಾನಿಯು ಕೂಡ ಬೆಳೆಯದ ರೀತಿಯಲ್ಲಿ ವೇಗವಾಗಿ ಬೆಳೆಯುತ್ತಾ ಇರತಕ್ಕಂತಹ ಈ ಬೆಂಗಳೂರು ನಗರ 41 ಲಕ್ಷ ಜನಸಂಖ್ಯೆಯನ್ನು ಇವತ್ತು ಹೊಂದಿದೆ ಎಂದು ಅಂಕಿ ಅಂಶಗಳು ಹೇಳುತ್ತವೆ. ಬೆಂಗಳೂರಿಗೆ ಬಂಧುಗಳ ಮನೆಗೆ, ವ್ಯಾಪಾರಕ್ಕೆ, ಪ್ರವಾಸಕ್ಕೆ ಹೊರ ಜಿಲ್ಲೆಗಳಿಂದ, ಹೊರ ರಾಜ್ಯಗಳಿಂದ, ಹೊರ ರಾಷ್ಟ್ರಗಳಿಂದ ಬರತಕ್ಕಂತಹ ಜನಸಂಖ್ಯೆ ಒಂದು 5 ರಿಂದ 10 ಲಕ್ಷ ಜನ ಬರುತ್ತಾರೆಂದು ಒಂದು ಅಂದಾಜು ಮಾಡಲ್ಪಡುತ್ತದೆ. ಈ ರೀತಿ 50 ಲಕ್ಷ ಜನ ಈ ಬೆಂಗಳೂರು ನಗರಕ್ಕೆ ಬಂದು ದಿನನಿತ್ಯ ಇಲ್ಲಿನ ನೀರನ್ನು ಕುಡಿಯುವಂಥ ವ್ಯವಸ್ಥೆ ಇದೆ. ಕಾವೇರಿ ಮೊದಲನೆಯ ಹಂತ, 2ನೇ ಹಂತ, 3ನೇ ಹಂತ ಹೋಗಿ ಇವತ್ತು 4ನೇ ಹಂತಕ್ಕೆ ಬಂದಿದ್ದೇವೆ. ಒಂದು ಕಾಲದಲ್ಲಿ ಹಳೇ ಬೆಂಗಳೂರು ಜನರು ಹೆಸರಘಟ್ಟವನ್ನು ಮತ್ತು ತಿಪ್ಪಗೊಂಡನಹಳ್ಳಿಯನ್ನು ಅವಲಂಬಿಸಿ ಇಲ್ಲಿ ಜನ ಜೀವನ ಮಾಡುತ್ತಾ ಇದ್ದರು. ಇವತ್ತು ಆ ಪರಿಸ್ಥಿತಿ ಬದಲಾವಣೆಯಾಗಿ ಹೆಸರುಘಟ್ಟದಲ್ಲೂ ನೀರು ಇಲ್ಲ ಮತ್ತು ತಿಪ್ಪಗೊಂಡನಹಳ್ಳಿಯಲ್ಲೂ ನೀರು ಇಲ್ಲ, ಇದಾದ ಮೇಲೆ ಹಳೇ ಬೆಂಗಳೂರು ನಗರದಲ್ಲಿ ಕುರುಬರ ಪೇಟೆ, ಗೌಡನ ಪೇಟೆ, ತಿಗಳರ ಪೇಟೆ ಎಂಬ ಪೇಟೆಗಳು ಇತ್ತು. ಕರಗಕ್ಕೆ ಕಬ್ಬನ್‌ಪೇಟೆ, ಈ ರೀತಿ ಪೇಟೆಗಳು ಜಾತಿ ಹೆಸರಿನ ಮೇಲೆ ಇದ್ದವು. ಪ್ರತಿಯೊಂದು ಮನೆಯ ಮುಂದುಗಡೆ ಮನುಷ್ಯನಿಗೆ ಅಲ್ಲ, ದನಕರುಗಳಿಗೆ ನೀರನ್ನು ಕುಡಿಯುವುದಕ್ಕೆ ತೊಟ್ಟಿಗಳನ್ನು ಕಟ್ಟುತ್ತಿದ್ದರು. ಇವತ್ತು ಯಾರ ಮನೆಯಲ್ಲಾದರೂ ಬೇಕಾದರೆ ಊಟ ಹಾಕುತ್ತೇವೆಂದು ಹೇಳುತ್ತಾರೆ; ಆದರೆ ಬೆಂಗಳೂರಿನಲ್ಲಿ ಒಂದು ಗ್ಲಾಸ್ ನೀರು ಕೊಡುವುದಕ್ಕೆ ಆಗುತ್ತಾ ಇಲ್ಲ. ಈ ಕಾವೇರಿ 4ನೇ ಹಂತಕ್ಕೆ ಬಂದರೂ ಕೂಡ ಇವತ್ತು ಆಗುತ್ತಾ ಇಲ್ಲ. ದಿನನಿತ್ಯ ಏನು ಮಳೆ ಬಂದರೆ ಅಣಬೆ ಬರುತ್ತದೆ ಎಂದು ಹೇಳುತ್ತಿದ್ದಾರಲ್ಲಾ ಆ ರೀತಿ ದಿನನಿತ್ಯ ಅಪಾರ್ಟ್‌ಮೆಂಟ್‌ಗಳು ಬೆಂಗಳೂರಿನಲ್ಲಿ ಹೆಚ್ಚು ಆಗುತ್ತಾ ಇವೆ. ಅದನ್ನು ತಡೆಹಿಡಿಯುವಂಥ ಕೆಲಸಗಳು ಆಗಬೇಕು. ಕೈಗಾರಕೆ ಏನು ಇವತ್ತು ಅಭಿವೃದ್ಧಿ ಮಾಡುತ್ತೇವೆಂದು ಹೇಳಿ ಇವತ್ತು ಬೆಂಗಳೂರು ಮಹಾನಗರದಲ್ಲಿ ಹೆಚ್ಚು ಹೆಚ್ಚು ಕೈಗಾರಿಕೆಗಳು ಬಂದು ಆ ನೀರಿನ ಸಮಸ್ಯೆ ಕೂಡ ಒಂದು ಕಡೆ ಉದ್ಭವ ಆಗುವುದಕ್ಕೆ ಕಾರಣವಾಗಿದೆ. ಇವತ್ತು ಬೆಂಗಳೂರಿನಲ್ಲಿ, ನನಗಿಂತ ಮುಂಚೆ ಮಾತನಾಡಿದಂತಹ ಮಾನ್ಯ ಸದಸ್ಯರಾದ ಶ್ರೀ ಸುರೇಶ್‌ಕುಮಾರ್ ರವರು ಮತ್ತು ಶ್ರೀಮತಿ ಪ್ರಮೀಳಾರವರು ಹಾಗೂ ಮುಂದೆ ಮಾತನಾಡುವವರು ಹೇಳುತ್ತಾರೆ, ಈ ಜಲಮಂಡಳಿಯ ಬಗ್ಗೆ. ಇವತ್ತು ಬೆಂಗಳೂರು ಮಹಾ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರತಕ್ಕಂತಹ ನೀರಿನ ಸಮಸ್ಯೆಯನ್ನು ಬಗೆಹರಿಸಲು ಇವತ್ತು ನಗರಪಾಲಿಕೆಯಿಂದ ಎಷ್ಟೋ ನೂರಾರು ಬೋರ್‌ವೆಲ್‌ಗಳನ್ನು ಹಾಕಿದ್ದೇವೆ ಮತ್ತು ಜಲಮಂಡಳಿಯವರೂ ಹಾಕಿದ್ದಾರೆ. ಇದು ಸಾಲದು ಎಂದು ಎಷ್ಟೋ ಜನ ಖಾಸಗಿಯಾಗಿ ಇರತಕ್ಕಂತಹವರು ಜನರು ನೀರಿಗೆ ತೊಂದರೆ ಪಡುತ್ತಾರೆಂದು ಬೋರ್‌ವೆಲ್‌ಗಳನ್ನು ಹಾಕಿಸಿಕೊಟ್ಟಿದ್ದಾರೆ. ಅದು ಸಾವಿರ ಗ್ಯಾಲನ್‌ಗಿಂತ ಮೇಲಿರುವ ನೀರಿಗೆ ಒಂದು ಮೋಟಾರನ್ನು ಅಳವಡಿಸಿ ವಿದ್ಯುಚ್ಛಕ್ತಿಯನ್ನು ಮಾಡಬಹುದು ಎಂದು ಕೆಲವು ಕಡೆ ಮಾಡಿದ್ದಾರೆ. ಉದಾಹರಣೆಗೆ ನನ್ನ ಗಾಂಧಿನಗರ ಕ್ಷೇತ್ರದಲ್ಲಿ ಶೇಷಾದ್ರಿಪುರ ವಿಭಾಗದಲ್ಲಿ ರಸಾಲ್ ಎಂಬ ಒಂದು ಬಡಾವಣೆ ಇದೆ. ವಿ.ವಿ. ಗಿರಿ ಕಾಲೋನಿ ಎಂದು ಇದೆ. ಒಡೆಯಾರ್ ನಗರ ಎಂದು

ಇದೆ. ಅಲ್ಲಿ ಯಾವುದೋ ಒಂದು ಸಂಘ ಒಂದು ಶಾಲೆ ನಡೆಸುವಂಥ ದೀನಸಂಘ ಎಂದು, ಅವರು ಮೂರು ಬೋರ್‌ವೆಲ್‌ಗಳನ್ನು ಹಾಕಿ ಅದಕ್ಕೆ ಟ್ಯಾಂಕ್ ಕಟ್ಟಿ ವಿದ್ಯುತ್ತನ್ನು ಅಳವಡಿಸಿದ್ದಾರೆ. ಅದರ 2 ತಿಂಗಳಿನ ವಿದ್ಯುತ್ ಬಿಲ್ ಕಟ್ಟಿಲ್ಲ ಲ್ಲಿಎಂದು ಹೇಳಿಬಿಟ್ಟು ವಿದ್ಯುತ್ ಮಂಡಳಿಯವರು ಇದನ್ನು ಡಿಸ್‌ಕನೆಕ್ಟ್ ಮಾಡಿದ್ದಾರೆ. ಜಲಮಂಡಳಿಯ ಅಧಿಕಾರಿಗಳು, ಜೂನಿಯರ್ ಇಂಜಿನಿಯರ್ ರಿಂದ ಹಿಡಿದು ಚೀಫ್ ಇಂಜಿನಿಯರ್‌ರವರೆಗೂ ಎಲ್ಲರ ಬಳಿ ಮಾತನಾಡಿದೆ. ಆ ವಿದ್ಯುತ್ ಬಿಲ್ಲನ್ನು ಕಟ್ಟುವಂಥ ಕೆಲಸ ನಿಮ್ಮದು. ಬೆಂಗಳೂರಿನ ನಾಗರೀಕರಿಗೆ ನೀರು ಒದಗಿಸಿಕೊಡುವಂತಹ ಕೆಲಸ ನಿಮ್ಮದು ಎಂದು ಹೇಳಿದರೆ ಅವರು ಸರ್ಕಾರ ಕಟ್ಟಲಿ, ನಾವು ಕಟ್ಟುವುದಕ್ಕೆ ತಯಾರಿಲ್ಲ ಎಂದು ಜಲಮಂಡಳಿಯ ಅಧಿಕಾರಿಗಳು ಹೇಳುತ್ತಿದ್ದಾರೆ. ಇವತ್ತು ಯಾರೋ ಖಾಸಗಿಯವರು ಬೆಂಗಳೂರು ಜನರಿಗೆ ತೊಂದರೆ ಆಗಿದೆಯೆಂದು ಬೋರ್‌ವೆಲ್ ಹಾಕಿಕೊಟ್ಟರೂ ಕೂಡ ಜಲಮಂಡಳಿಯ ಅಧಿಕಾರಿಗಳು ವಿದ್ಯುಚ್ಛಕ್ತಿ ಬಿಲ್ಲನ್ನು ಕಟ್ಟುವುದಿಲ್ಲ. ನಾನು ಅಲ್ಲಿ ಜನರನ್ನು ಕೇಳಿದೆ, ಇಲ್ಲಿ ಮುಂಚೆ ಯಾವ ರೀತಿ ಬಿಲ್ಲುಗಳನ್ನು ಕಟ್ಟುತ್ತಾ ಇದ್ದರು ಎಂದು. ಮುಂಚೆ ಇದ್ದಂಥ ಶಾಸಕರು ಅವರು ಯಾರ ಹತ್ತಿರವೋ ಹೇಳಿ ಇದನ್ನು ಕಟ್ಟುತ್ತಾ ಇದ್ದರು ಎಂದು ಹೇಳಿದರು. ಅಂತಹ ಕೆಲಸ ನನ್ನಿಂದ ಖಂಡಿತ ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ಜಲಮಂಡಳಿಯ ಅಧಿಕಾರಿಗಳಿಗೆ ತಮ್ಮ ಮುಖಾಂತರ ನಾನು ಮುಖ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ಆ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಎಲ್ಲೇ ಬರಲಿ ಅದು ನಗರಪಾಲಿಕೆ ಬೋರ್‌ವೆಲ್ ಹಾಕಿರಲಿ, ಅಥವಾ ಜಲಮಂಡಳಿ ಹಾಕಿರಲಿ, ಅಥವಾ ಯಾರೇ ಹಾಕಿದ್ದರೂ ಕೂಡ ಸಾರ್ವಜನಿಕರು ಉಪಯೋಗಿಸುವಂತಹ ಬೋರ್‌ವೆಲ್‌ಗಳಿಗೆ ಆ ಎಲೆಕ್ಟ್ರಿಕ್ ಬಿಲ್ಲನ್ನು ಕಟ್ಟುವಂತಹ ಜವಾಬ್ದಾರಿಯನ್ನು ಜಲಮಂಡಳಿ ಅಧಿಕಾರಿಗಳಿಗೆ ಬಿಟ್ಟುಕೊಡಬೇಕು. ಇವತ್ತು ನನಗೆ ಮುಂಚೆ ಮಾತನಾಡಿದಂತಹ ಮಾನ್ಯ ಶ್ರೀ ರಾಮಲಿಂಗರೆಡ್ಡಿ ಮತ್ತು ಶ್ರೀ ಸುರೇಶ್ ಕುಮಾರ್‌ರವರು ಹೇಳಿದರು. ಒಂದಾನೊಂದು ಕಾಲದಲ್ಲಿ ಬೆಂಗಳೂರು ಜಲಮಂಡಳಿಯಲ್ಲಿ ಒಬ್ಬರು ಚೇರ್‌ಮನ್ ಇದ್ದರು. ಪುಟ್ಟಕೆಂಪಣ್ಣ ಎಂದು. ಅವರು ಜೂನಿಯರ್ ಇಂಜಿನಿಯರ್‌ನಿಂದ ಮೇಲೆ ಬಂದು ಚೇರ್‌ಮನ್ ಆದವರು. ಅವರು ಬೆಂಗಳೂರಿನಲ್ಲಿ ಯಾವುದೇ ಸಮಸ್ಯೆ ಹೇಳಿದರೂ ಕೂಡ ಆಳವಾಗಿ ತಿಳಿದುಕೊಂಡಿದ್ದರು. ಹಲವಾರು ಕಡೆ ಚೇರ್‌ಮನ್‌ಗಿರಿ ಆಗಿರತಕ್ಕಂಥ ಐ.ಎ.ಎಸ್. ಅಧಿಕಾರಿಗಳನ್ನು ಹಾಕಿರುವುದರಿಂದ, ಅವರನ್ನು ಆಫೀಸ್‌ನಲ್ಲಿ ನೋಡುವುದೇ ಕಷ್ಟ. ಅವರ ಹತ್ತಿರ ಮಾತನಾಡುವುದೇ ಕಷ್ಟ, ಅಂತಹ ಪರಿಸ್ಥಿತಿ ಇದೆ. ನಾನು ತಮ್ಮ ಮೂಲಕ ಮಾನ್ಯ ಮುಖ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ಬೆಂಗಳೂರಿನಲ್ಲಿ ಎಲ್ಲೆಲ್ಲಿ ಕೊಳವೆ ಬಾವಿಗಳು ಇವೆ, ಎಲ್ಲೆಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಇದೆ, ಅದನ್ನು ಆಳವಾಗಿ ಅಭ್ಯಾಸ ಮಾಡಿದಂಥ ಅಧಿಕಾರಿಯನ್ನು ಜಲಮಂಡಳಿಯ ಅಧ್ಯಕ್ಷರನ್ನಾಗಿ ಮಾಡಬೇಕು. ಐ.ಎ.ಎಸ್. ಅಧಿಕಾರಿಗಳನ್ನು ತಂದು ಹಾಕುವಾಗ ಅವರಿಗೆ ಹಲವಾರು ಇಲಾಖೆಗಳನ್ನು ನೋಡಬೇಕಾಗಿರುವಾಗ ಅವರು ಇಷ್ಟು ದೊಡ್ಡ ನಗರದಲ್ಲಿ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸತಕ್ಕಂಥ ಮನಸ್ಸು ಮತ್ತು ತಾಳ್ಮೆ ಖಂಡಿತವಾಗಿಯೂ ಇರುವುದಕ್ಕೆ ಸಾಧ್ಯವಿಲ್ಲ. ಅಂತಹ ಪರಿಸ್ಥಿತಿ ಇವತ್ತು ಇದೆ. ಸ್ಥಳೀಯವಾಗಿ ಬೆಂಗಳೂರು ನಗರ ಪಾಲಿಕೆಯ ಸಭೆಯಲ್ಲಿ ನಾನು ತಿಳಿಸಿದ್ದೆ. ನನಗಿಂತ ಮುಂಚೆ ಮಾತನಾಡಿದ

ಹಿರಿಯರಾದ ನಂಜೇಗೌಡರೂ ಕೂಡ ಹೇಳಿದರು, ಬೆಂಗಳೂರು ನಗರದಲ್ಲಿ ಎಷ್ಟೋ ಕಡೆ ಏನು ನೀರು ಸೋರಿಹೋಗುತ್ತದೆ, ಅದು ಸೋರಿ ಹೋಗುವುದನ್ನು ತಡೆದರೆ 25 ಪರ್ಸೆಂಟ್ ಜನರ ನೀರಿನ ಸಮಸ್ಯೆಯನ್ನು ಬಗೆಹರಿಸಬಹುದು ಎಂದು. ಇವತ್ತು ಏನಾದರೂ ಅವಶ್ಯಕತೆ ಇದ್ದರೆ ಪೋಲೀಸರಿಗೆ ತಿಳಿಸಲು 100 ನಂಬರಿಗೆ ಫೋನ್ ಮಾಡುತ್ತೇವೆ. ಆಮೇಲೆ ಅಂಬುಲೆನ್ಸ್‌ಗೆ ಫೋನ್ ಮಾಡುತ್ತೇವೆ, ಅದಕ್ಕೊಂದು ನಂಬರ್ ಇರುತ್ತದೆ. ಅದೇ ರೀತಿ ಮಾನ್ಯ ತ್ಯಾಗರಾಜ್ ಅವರು ಅಧ್ಯಕ್ಷರಾಗಿದ್ದಾಗ ನಾನು ಒಂದು ಸಲಹೆಯನ್ನು ಕೊಟ್ಟಿದ್ದೆ; ಜಲಮಂಡಳಿಗೂ ಕೂಡ ಯಾವುದಾದರೂ ಒಂದು ನಂಬರನ್ನು ಕೊಡಬೇಕು ಎಂದು. ಬೆಂಗಳೂರು ನಗರದಲ್ಲಿ ಯಾವನೋ ಒಬ್ಬ ನಾಗರೀಕ ರಸ್ತೆಯಲ್ಲಿ ಹೋಗುವಾಗ 150ನೇ ನಂಬರ್ ಎಂದು ಇಟ್ಟುಕೊಳ್ಳೋಣ, ಆ ನಂಬರಿಗೆ ಆತ ಫೋನ್ ಮಾಡಿ ಇಂತಹ ಕಡೆ ನೀರು ಲೀಕ್ ಆಗುತ್ತಿದೆ ಎಂದು ಹೇಳಿದರೆ ತಕ್ಷಣ ಜಲಮಂಡಳಿಯವರು ಬಂದು ಅದನ್ನು ರಿಪೇರಿ ಮಾಡಿ ನೀರು ಸೋರಿ ಹೋಗುವುದನ್ನು ತಡೆದರೆ ಎಷ್ಟೋ ಸಹಾಯವಾಗುತ್ತದೆ. ಅಂತಹ ಕೆಲಸವನ್ನು ಮಾಡಬೇಕೆಂದು ನಾನು ಹೇಳುತ್ತೇನೆ. ಬೆಂಗಳೂರು ನಗರದಲ್ಲಿ ಈ ಬೋರ್‌ವೆಲ್‌ಗಳು ಏನಿವೆ, ಹಿಂದೆ 15-20 ಅಡಿ ತೋಡಿದರೆ ಸಾಕಿತ್ತು, ನೀರು ಸಿಗುತ್ತಿತ್ತು. ಈಗ 200-300 ಅಡಿ ಹೋದರೂ ಕೂಡ ಬಾವಿಯಲ್ಲಿ ನೀರಿನ ಮಟ್ಟ ಇಳಿದುಕೊಂಡು ಬಿಟ್ಟು ಬಹಳ ಕಡೆ ಬಾವಿಯಲ್ಲಿ ನೀರೆ ಇಲ್ಲ. ಇವತ್ತು ಬೋರ್‌ವೆಲ್‌ಗಳ ರಿಪೇರಿ ಮಾಡುವಂಥ ವ್ಯವಸ್ಥೆ ಏನಿದೆ, ಅದು ಏನೂ ಸಾಲದು. ಇಷ್ಟೊಂದು ದೊಡ್ಡದಾದ ಬೆಂಗಳೂರು ನಗರಕ್ಕೆ ನಾಲ್ಕೈದು ಮೆಟಡಾರ್ ವ್ಯಾನ್‌ಗಳನ್ನು ಇಟ್ಟುಕೊಂಡಿದ್ದಾರೆ. ಈ ನಾಲ್ಕೈದು ವ್ಯಾನ್‌ಗಳಲ್ಲಿ ಬೆಂಗಳೂರು ನಗರ ಪೂರ್ತಿ ಇರತಕ್ಕಂಥ ಬೋರ್‌ವೆಲ್‌ಗಳನ್ನು ಖಂಡಿತವಾಗಿಯೂ ರಿಪೇರಿ ಮಾಡುವುದಕ್ಕೆ ಸಾಧ್ಯವಿಲ್ಲ. ನಾನು ತಮ್ಮ ಮೂಲಕ ಮಾನ್ಯ ಮುಖ್ಯ ಮಂತ್ರಿಗಳನ್ನು ಕೇಳಿಕೊಳ್ಳುವುದು ಏನೆಂದರೆ, ಒಂದೊಂದು ಶಾಸನ ಸಭಾ ಕ್ಷೇತ್ರಕ್ಕೆ ಒಂದೊಂದು ಬೋರ್‌ವೆಲ್‌ಗಳನ್ನು ರಿಪೇರಿ ಮಾಡಿಕೊಡುವ ವ್ಯವಸ್ಥೆಯನ್ನು ಮಾಡಿಕೊಟ್ಟರೆ ಒಳ್ಳೆಯದು. ಇವತ್ತು ಬೆಂಗಳೂರು ನಗರದಲ್ಲಿ ವಾಟರ್ ಸಪ್ಲೈ ಬೋರ್ಡ್‌ನವರು ನೀರನ್ನು ಕೊಡುವಾಗ ಎಷ್ಟೋ ಕಡೆ ತೊಂದರೆಯಾಗುವುದನ್ನು ತಪ್ಪಿಸಲು ಈ ಬೋರ್‌ವೆಲ್‌ಗಳ ಮೂಲಕ ನೀರನ್ನು ಒದಗಿಸಬಹುದು. ಒಂದೊಂದು ಶಾಸನಸಭಾ ಕ್ಷೇತ್ರದಲ್ಲಿ ರಿಪೇರಿ ಮಾಡುವಂಥ 12 ಅಸೆಂಬ್ಲಿ ಕ್ಷೇತ್ರಗಳಿಗೆ 12 ಬೋರ್‌ವೆಲ್‌ಗಳನ್ನು ರಿಪೇರಿ ಮಾಡುವಂಥ ಘಟಕಗಳನ್ನು ತೆರೆಯಬೇಕೆಂದು ಈ ಸಂದರ್ಭದಲ್ಲಿ ನಾನು ಹೇಳುತ್ತೇನೆ. ಆಮೇಲೆ ಇಲ್ಲಿ ಕೆಲಸ ಮಾಡುವಂಥ ಸ್ಟಾಫ್ ಏನಿದೆ, ಅದು ಬಹಳ ಕಡಿಮೆ ಇದೆ. ಎಷ್ಟೋ ಸಲ ತೊಂದರೆ ಉಂಟಾದಾಗ, ನಾವು ಕರೆದಾಗಲೂ ಕೂಡ ಜಲಮಂಡಳಿಯಲ್ಲಿರತಕ್ಕಂಥ ಕೆಳಮಟ್ಟದ ಅಧಿಕಾರಿಗಳು ಬಂದು ಸಹಾಯ ಮಾಡುತ್ತಾರೆ. ಆದರೆ ಅಲ್ಲಿರತಕ್ಕಂಥ ಸ್ಟಾಫ್ ಸಾಕಾಗುತ್ತಿಲ್ಲ. ಆದ್ದರಿಂದ ಇವರ ಸ್ಟಾಫನ್ನು ಜಾಸ್ತಿ ಮಾಡಬೇಕೆಂದು ಹೇಳುತ್ತಾ, ಈಗೇನು ಬೋರ್‌ವೆಲ್‌ಗಳನ್ನು ಹೊಸದಾಗಿ ಹಾಕುವ ಆದೇಶವನ್ನು ನೀಡಿದಾರೆ, ಅವುಗಳನ್ನು ಬೆಂಗಳೂರು ನಗರದಲ್ಲಿ ಕೊಡುವಾಗ ಎಲ್ಲೆಲ್ಲಿ ತೊಂದರೆ ಇದೆ, ಅಂತಹ ಕಡೆ ಮಾತ್ರ ಬೋರ್‌ವೆಲ್‌ಗಳನ್ನು ಹಾಕಬೇಕು. ಏನೋ ಶಾಸಕರು ಹೇಳುತ್ತಾರೆ, ನಗರಪಾಲಿಕೆಯ ಸದಸ್ಯರು ಹೇಳುತ್ತಾರೆ ಎಂದು ಬೋರ್‌ವೆಲನ್ನು ಹಾಕುವಾಗ ಪಕ್ಕದಲ್ಲಿ 100-200 ಅಡಿ ಗ್ಯಾಪ್ ಇರುವಂತೆ ನೋಡಿಕೊಳ್ಳಬೇಕಾಗುತ್ತದೆ. ಅಂತಹ

ಒಂದು ಪರಿಸ್ಥಿತಿಯನ್ನು ಜಾರಿಗೆ ತರಬೇಕೆಂದು ಹೇಳಿ ತಮ್ಮ ಮೂಲಕ ಮಾನ್ಯ ಮುಖ್ಯ ಮಂತ್ರಿಗಳನ್ನು ನಾನು ಕೇಳಿಕೊಳ್ಳುವುದೇನೆಂದರೆ, ಹೊಸದಾಗಿ ಬೋರ್ ವೆಲ್ ಗಳನ್ನು ಹಾಕುವುದರ ಜೊತೆಗೆ 6 ತಿಂಗಳು ಒಂದು ವರ್ಷದ ಹಿಂದೆ ರಿಪೇರಿಯಾಗಿರುವಂಥ ಬೋರ್‌ವೆಲ್ ಗಳೂ ಕೂಡ ಸರಿಯಾಗಿ ಕೆಲಸ ಮಾಡುತ್ತಿಲ್ಲ. ನಾನು ಕಳೆದ ಹದಿನೈದು ದಿವಸಗಳಿಗೆ ಮುಂಚೆ ಓಕಳಿಪುರ ಎನ್ನುವಂಥ ಬಡಾವಣೆಯಲ್ಲಿ ಹೋಗಿದ್ದೆ. ಅಲ್ಲಿ ಕಳೆದ ಒಂದು ವರ್ಷದಿಂದ ಬೋರ್ ವೆಲ್ ರಿಪೇರಿಯಾಗಲಿಲ್ಲ. ಈ ರೀತಿಯ ಪರಿಸ್ಥಿತಿ ಬೆಂಗಳೂರು ನಗರದಲ್ಲಿ ಇದೆಯೆನ್ನುವುದನ್ನು ತಮ್ಮ ಮುಖಾಂತರ ಮಾನ್ಯ ಮುಖ್ಯ ಮಂತ್ರಿಗಳ ಗಮನಕ್ಕೆ ತಂದು, ನನಗಿಂತ ಮುಂಚೆ ಮಾತನಾಡಿದ ಮಾನ್ಯ ನಂಜೇಗೌಡರು ಹೇಳಿದ ರೀತಿಯಲ್ಲಿ ನಾವು ನಗರ ಪಾಲಿಕೆಯ ಸದಸ್ಯರಾಗಿ ಕೆಲಸ ಮಾಡಿದಂಥ ಸಂದರ್ಭದಲ್ಲಿ ಇಷ್ಟು ಕಷ್ಟ ಕಾಣಲಿಲ್ಲ. ಆದರೆ ಶಾಸಕರಾದ ಮೇಲೆ ಜನರು ಯಾವ ಸಂದರ್ಭದಲ್ಲಿ ಫೋನ್ ಮಾಡಿ ಬಯ್ಯುತ್ತಾರೋ ಎಂದು ಹೇಳುವಂತಾಗಿದೆ, ಎಷ್ಟೋ ಸಲ ಫೋನ್ ಬಂದರೆ ಯಾರೋ ಕುಡಿಯುವ ನೀರಿನ ಸಲುವಾಗಿ ಬಯ್ಯುತ್ತಾರೆ ಎಂದು ತಿಳಿದುಕೊಂಡು ಜೀವನ ಮಾಡುವಂಥ ಪರಿಸ್ಥಿತಿ ಇದೆ. ಈ ಪರಿಸ್ಥಿತಿಯನ್ನು ಬಗೆಹರಿಸುವ ರೀತಿಯಲ್ಲಿ ಸರ್ಕಾರ ಆದಷ್ಟು ಬೇಗ ಇದಕ್ಕೆ ಪರಿಹಾರವನ್ನು ಕಂಡುಹಿಡಿಯಲು ಕೆಲಸ ಮಾಡಬೇಕೆಂದು ತಮ್ಮ ಮುಖಾಂತರ ಮಾನ್ಯ ಮುಖ್ಯ ಮಂತ್ರಿಗಳಿಗೆ ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎನ್.ರಾಜಣ್ಣ (ಭಾರತಿ ನಗರ ಕ್ಷೇತ್ರ) :- ಮಾನ್ಯ ಅಧ್ಯಕ್ಷರೇ, ಬೆಂಗಳೂರು ನಗರದಲ್ಲಿ ನೀರಿನ ಅಭಾವದ ಬಗ್ಗೆ ನಾವು ಎಂ.ಎಲ್.ಎ. ಆದಮೇಲೆ ಹಿಂದೆ ಮಾಡಿದ ಪಾಪವನ್ನು ಈಗ ಅನುಭವಿಸುತ್ತಿದ್ದೇವೆ. ಕಾವೇರಿ ನೀರಿನ ಮೊದಲನೇ, ಎರಡನೇ ಸ್ಟೇಜ್ ವರ್ಕಿಂಗ್ ಇದೆ. ಆದರೆ, ಮೂರನೇ ಸ್ಟೇಜ್ ವರ್ಕ್ ಆಗುತ್ತಿಲ್ಲ. ಫಸ್ಟ್ ಸ್ಟೇಜ್‌ನಲ್ಲಿ ಬಸವನಗುಡಿ ಬರಬಹುದು, ಶಿವಾಜಿನಗರ ಸ್ವಲ್ಪ ಭಾಗ ಬರಬಹುದು. ಆದರೆ ನಮ್ಮ ಭಾರತಿನಗರ, ಜಯಮಹಲ್, ಶಾಂತಿನಗರ ಇಲ್ಲಿಗೆ ನೀರು ಬರುತ್ತಲೇ ಇಲ್ಲ. ಇದು ಇವತ್ತೇ ಆದಂಥ ಕಾರಣ ಅಲ್ಲ. ಹಿಂದಿನಿಂದ ಆದಂಥ ಕಾರಣ. ಈ ಅಭಾವ ನಾಲ್ಕು ರೀತಿಯಿಂದ ಕಾಣುತ್ತಿರುವ ಅಭಾವ. ಮೊದಲನೆಯದು ಪ್ರಕೃತಿ ಅಭಾವ, ಎರಡನೆಯದು ಬಜೆಟ್ ಅಭಾವ ಮತ್ತು ಮೂರನೆಯದು ವಾಟರ್ ಮ್ಯಾನೇಜ್‌ಮೆಂಟ್. ಇದನ್ನು ಇವತ್ತು ಟ್ಯೂನ್ ಆಫ್ ಮಾಡಬೇಕಾಗಿದೆ. ಇದಕ್ಕೆ ಅನುಭವಸ್ಥ ಅಧಿಕಾರಿಗಳ ಸಹಾಯ ಬೇಕಾಗಿದೆ. ಮತ್ತೊಂದು ಕಾರಣ ಬಹಳ ಮುಖ್ಯವಾದುದು, ಅದೇನೆಂದರೆ ಲೀಕೇಜ್. ಈ ಲೀಕೇಜ್ ಬಗ್ಗೆ ನಾವು ಮಾತನಾಡುತ್ತಿದ್ದೇವೆ. ನೂರು ವರ್ಷಗಳ ಹಿಂದೆ ಬ್ರಿಟೀಷರು ಹಾಕಿದ ಬೋಲ್ಟ್-ನೆಟ್‌ಗಳನ್ನು ಇವತ್ತಿಗೂ ಕೂಡ ಬದಲಾವಣೆ ಮಾಡಬೇಕಾಗಿಲ್ಲ. ಆದರೆ ನಾವು 20-25 ವರ್ಷಗಳಲ್ಲಿ ಹಾಕಿರುವ ಪೈಪ್ ಲೈನ್‌ಗಳಲ್ಲಿ ಇವತ್ತು ಹಾಕಿಬಿಟ್ಟರೆ ನಾಳೆ ಲೀಕ್ ಆಗುತ್ತಿದೆ. ಮಾನ್ಯ ನಂಜೇಗೌಡರು ಹೇಳಿದ್ದು ನೂರಕ್ಕೆ ನೂರರಷ್ಟು ನಿಜ. ಇದರ ಬಗ್ಗೆ ಕಾಮಗಾರಿ ಕೆಲಸ ಆಗುವಾಗ ಶುದ್ಧವಾಗಿ, ಶ್ರದ್ಧೆಯಿಂದ ಆಗುತ್ತಿಲ್ಲ. ವಾಟರ್ ಲೀಕೇಜ್ ಆಗುವುದಕ್ಕೆ ಇದು ಮುಖ್ಯವಾದ ಕಾರಣ. ಇದರ ಬಗ್ಗೆ ನಾವು ಎಚ್ಚರಿಕೆಯನ್ನು ವಹಿಸಿ ಈ ವಾಟರ್ ಲೀಕೇಜನ್ನು ಮೊದಲು ನಿಲ್ಲಿಸಬೇಕು. ಎರಡನೆಯದು ಈ ಹೈಗ್ರೌಂಡ್ ರಿಸರ್ವಾಯರ್ ಎಂದು ಇದೆ. ನಗರದ ಪೂರ್ವ ಭಾಗಕ್ಕೆ ನೀರು ಬರಬೇಕಾದರೆ ಅದು ಮೊದಲು ಹೈಗ್ರೌಂಡ್‌ಗೆ ಬಂದು ಅಲ್ಲಿಂದ

ಕೆಂಪೇಗೌಡ ಟವರ್‌ಗೆ ಹೋಗಿ ಮುನಿರೆಡ್ಡಿಪಾಳ್ಯಕ್ಕೆ ಬಂದು, ಅಲ್ಲಿಂದ ಮಿಚಲಿಬೆಟ್ಟ ವಾಟರ್ ಟ್ಯಾಂಕ್‌ನಿಂದ ಮುಂದೆ ಪೂರ್ವ ಭಾಗದ ಪ್ರದೇಶಗಳಿಗೆ ಬರಬೇಕು. ಇದು ನಗರದ ಪೂರ್ವ ಭಾಗದ ಪ್ರದೇಶಗಳಿಗೆ ಬರುವುದರೊಳಗೆ ಏನಾಗಿದೆ ಎಂದರೆ, ಅಲ್ಲಿ ಒಂದು ಸಮಸ್ಯೆಯಾಗಿದೆ. ಕಳೆದ ಒಂದೆರಡು ತಿಂಗಳಿಂದ ಈ ನೀರು ನಮಗೆ ಬರುವುದನ್ನು ಕಡಿಮೆ ಮಾಡಿದಾರೆ. ಇದಕ್ಕೆ ಕಾರಣ ಅಧಿಕಾರಿಗಳಿಗೆ ಮಾತ್ರ ಗೊತ್ತು. ವಿ.ಐ.ಪಿ.ಗಳು, ಮತ್ತು ಮುಖ್ಯ ಮಂತ್ರಿಗಳು ಇರುವ ಕಡೆ ಮಾತ್ರ ನೀರು ಹೋಗುತ್ತಿದೆ, ನಮಗೆ ಬಹಳ ತೊಂದರೆಯಾಗಿದೆ.

ಶ್ರೀ ಆರ್.ವಿ.ದೇಶಪಾಂಡೆ :- ಬಹಳ ಮಂತ್ರಿಗಳಿಗೆ ಇನ್ನೂ ಮನೆಯನ್ನು ಕೊಟ್ಟಿಲ್ಲ.

ಶ್ರೀ ಎನ್.ರಾಜಣ್ಣ :- ನಾನು ಹೇಳುವುದು ಆ ಕಡೆಗೆ ನೀರು ಹೋಗುತ್ತಿದೆ. ಮಾನ್ಯ ನಂಜೇಗೌಡರು ಹೇಳಿದ ಹಾಗೆ ಸಾಕಷ್ಟು ನೀರು ಅಲ್ಲಿ ಸಿಗುತ್ತದೆ. ಬಸವನಗುಡಿಗೆ ಸಿಗುತ್ತಿದೆ, ಪ್ಯಾಲೆಸ್ ಆರ್ಚರ್ಡ್‌ಗೆ ಸಿಗುತ್ತಿದೆ. ಆದರೆ ಪೂರ್ವ ಭಾಗಕ್ಕೆ ಇಲ್ಲ. ನಮ್ಮ ಭಾರತಿನಗರ, ಜಯಮಹಲ್ ಪಾರ್ಕ್, ಅಮೇಲೆ ಶಾಂತಿನಗರ ಆ ಕಡೆಗೆ ನೀರು ಬರುತ್ತಿಲ್ಲ. ಉದಾಹರಣೆಗೆ ಹೇಳುವುದಾದರೆ ಶಿವಾಜಿನಗರಕ್ಕೆ ಫಸ್ಟ್ ಸ್ಟೇಜ್‌ನಿಂದ ನೀರು ಬರುತ್ತದೆ. ಅಲ್ಲಿಂದ ನನ್ನ ಕ್ಷೇತ್ರದ ಮೂರು ವಿಭಾಗಕ್ಕೆ ನೀರು ಬರುತ್ತದೆ. ಇನ್ನು ನಾಲ್ಕು ವಿಭಾಗಗಳಿಗೆ ನೀರು ಬರುತ್ತಿಲ್ಲ. ಮೊದಲು ಸಾತನೂರಿನಿಂದ ಬರತಕ್ಕಂಥ ನೀರು ಡೈರೆಕ್ಟ್ ಆಗಿ ನಮ್ಮ ಮಿಚಲಿಬೆಟ್ಟಕ್ಕೆ ಬರುತ್ತಾ ಇತ್ತು. ಮಾನ್ಯ ಅಧ್ಯಕ್ಷರೇ, ಬಿ.ಡಬ್ಲ್ಯೂ.ಎಸ್.ಎಸ್.ಬಿ.ಅಧಿಕಾರಿಗಳಿಗೆ ಆದೇಶವನ್ನು ಕೊಟ್ಟು, ಹೈಗ್ರೌಂಡ್ ರಿಸರ್ವಾಯರನ್ನು ರಿಪೇರಿ ಮಾಡಿಸಿ ನಮಗೆ ನೇರವಾಗಿ ಮಿಚಲಿಬೆಟ್ಟಕ್ಕೆ ನೀರು ಬರುವ ಹಾಗೆ ಮಾಡಬೇಕಾಗಿ ನಾನು ಕೇಳಿಕೊಳ್ಳುತ್ತಿದ್ದೇನೆ. ಹಿಂದೆ ಹಾಕಿದ ಬೋರ್‌ವೆಲ್‌ಗಳನ್ನು ರಿಪೇರಿ ಮಾಡುವ ಪರಿಸ್ಥಿತಿಯಲ್ಲಿ ಇಲ್ಲ. ರಿಪೇರಿ ಮಾಡಿ ಹೋಗುತ್ತಾರೆ, ಮಾರನೆಯ ದಿವಸವೇ ಮತ್ತೆ ಕೆಟ್ಟು ಹೋಗುತ್ತದೆ. ಇವುಗಳಿಗೆ ಜೋಡಿಸುವ ಪೈಪ್‌ಗಳ ಗುಣಮಟ್ಟ ಚೆನ್ನಾಗಿ ಇಲ್ಲ. ಒಳ್ಳೆಯ ಗುಣಮಟ್ಟದ ಪೈಪ್‌ಗಳನ್ನು ಹಾಕಿ ಅದನ್ನು ರಿಪೇರಿ ಮಾಡಿದರೆ ಮಾತ್ರ ಅವುಗಳಿಂದ ಜನರು ನೀರನ್ನು ತೆಗೆದುಕೊಂಡು ಹೋಗುವುದಕ್ಕೆ ಅನುಕೂಲವಾಗುತ್ತದೆ. ಇದು ಹೇಗಿದೆ ಎಂದರೆ ನೀವು ಮ್ಯೂಸಿಕ್ ಅನ್ನು ಬೇರೆ ಎಲ್ಲಿಯೂ ನೋಡುವುದು ಬೇಡ. ಮ್ಯೂಸಿಕ್ ಬೇಕಾದರೆ ಸಿನೆಮಾ, ಟಿ.ವಿ.ಯಲ್ಲಿ ನೋಡುವುದು ಬೇಕಾಗಿಲ್ಲ. ಈ ವಾಟರ್ ಟ್ಯಾಂಕರ್‌ಗಳು ಬಂದಾಗ ಜನರು ಒಬ್ಬರಿಗೊಬ್ಬರು ಹೊಡೆದಾಡಿಕೊಂಡು, ರಕ್ತ ಬರಿಸಿಕೊಂಡು ಪೋಲೀಸ್ ಸ್ಟೇಷನ್‌ಗೆ ಹೋಗಿ ಬರುವುದನ್ನು ನೋಡಿ ನೋಡಿ ನಮಗೆ ಸಾಕಾಗಿದೆ. ನಾವು ನಮ್ಮ ದುರಾದೃಷ್ಟಕ್ಕೆ ಇದನ್ನು ಕಣ್ಣಾರೆ ನೋಡುತ್ತಿದ್ದೇವೆ. ಆದ್ದರಿಂದ ನಮಗೆ ಸರಿಯಾಗಿ ನೀರನ್ನು ಕೊಡುವುದಕ್ಕೆ ತಕ್ಕ ವ್ಯವಸ್ಥೆಯನ್ನು ಕೂಡಲೇ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು :- ರಾಜಣ್ಣನವರೇ, ನೀವು ಈಗ ನಗರಸಭಾ ಸದಸ್ಯರಲ್ಲ, ನೀವು ಈಗ ವಿಧಾನಸಭಾ ಸದಸ್ಯರು.

ಶ್ರೀ ಎನ್.ರಾಜಣ್ಣ:- ಮೇಯರ್ ಅವರಿಗೆ ಹೇಳಿ ಅಭ್ಯಾಸವಾಗಿತ್ತು.

ಅಧ್ಯಕ್ಷರು :- ಅದನ್ನು ನೀವು ಈಗ ಬದಲಾಯಿಸಿಕೊಳ್ಳಬೇಕು. ಈಗ ನೀವು ವಿಧಾನಸಭಾ ಸದಸ್ಯರು, ಕಾರ್ಪೊರೇಟರ್ ಅಲ್ಲ.

ಶ್ರೀ ಎನ್.ರಾಜಣ್ಣ:- ಇನ್ನು ಈ ಮೀಟರ್‌ಗಳ ಬಗ್ಗೆ ಸಾರ್ವಜನಿಕರದ್ದು ಬಹಳ ದೂರು ಇವೆ. ಈ ನೀರು ಮೀಟರ್ ಮೂಲಕ ಬರುವುದಿಲ್ಲವಾದರೂ ಕೂಡ ಗಾಳಿಯಿಂದ ಮೀಟರ್ ರನ್ ಆಗಿ ಅದು ಒಂದು ಸಮಸ್ಯೆ ಇದೆ. ಇದರ ಬಗ್ಗೆ ಸಾರ್ವಜನಿಕರ ದೂರುಗಳು ಜಾಸ್ತಿ ಇವೆ. ಅವನ್ನು ಸೆಟ್‌ರೈಟ್ ಮಾಡಬೇಕು. ಆಮೇಲೆ ಈ ಮಲ್ಟಿಸ್ಟೋರೇಜ್ ಬಿಲ್ಡಿಂಗ್‌ಗಳ ಹಾವಳಿ ಜಾಸ್ತಿಯಾಗಿದೆ. ಮಾನ್ಯ ಸ್ನೇಹಿತರಾದ ಶ್ರೀ ಸುರೇಶ್‌ಕುಮಾರ್ ಅವರು ಹೇಳಿದ ಹಾಗೆ, ಒಂದು ಬಂಗ್ಲೆಯಲ್ಲಿ ಒಂದು ಫ್ಯಾಮಿಲಿ ಇರುವ ಕಡೆ 40-50 ಮರಗಳು ಇರುತ್ತವೆ. ಇವತ್ತು 50 ಮರಗಳನ್ನು ಕಡಿದು ಹಾಕಿ 40 ಫ್ಯಾಮಿಲಿಗಳು ಬರುತ್ತಿವೆ. ಅವರು ಈ 40 ಫ್ಯಾಮಿಲಿಗಳಿಗೆ ಟ್ಯಾಂಕನ್ನು ಕಟ್ಟುವುದಿಲ್ಲ. ಸ್ವಿಮ್ಮಿಂಗ್‌ಪೂಲ್‌ಗಳನ್ನು ಕಟ್ಟಿಬಿಡುತ್ತಾರೆ. ಇದಕ್ಕೆ ಪ್ರತ್ಯೇಕ ಕನೆಕ್ಷನ್ ಅನ್ನು ತೆಗೆದುಕೊಳ್ಳುತ್ತಾರೆ, ಅದು ಹೇಗೆ ತೆಗೆದುಕೊಳ್ಳುತ್ತಾರೋ ಇದಕ್ಕೆ ಯಾರ ಇನ್‌ಫ್ಲೂಯೆನ್ಸ್ ಇದೆಯೋ ಗೊತ್ತಿಲ್ಲ. ಇವರು ಮಾತ್ರ ಕನೆಕ್ಷನ್ ತೆಗೆದುಕೊಂಡುಬಿಡುತ್ತಾರೆ. ನೀರು ಎಂಟು ದಿವಸ ಬರದಿದ್ದರೂ ಕೂಡ ಈ ಫ್ಲಾಟ್‌ಗಳಲ್ಲಿ ಇರತಕ್ಕಂಥವರಿಗೆ ನೀರು ಇರುತ್ತದೆ. ಮತ್ತೆ ನೀರು ಬಂದಾಗ ಅದು ಈ ಸ್ವಿಮ್ಮಿಂಗ್‌ಪೂಲ್‌ಗಳಿಗೆ ಹೋಗಿಬಿಡುತ್ತದೆ. ಇಲ್ಲಿ ಬಡವರು ಮಾತ್ರ ತೊಂದರೆಯನ್ನು ಅನುಭವಿಸುತ್ತಲೇ ಇದ್ದಾರೆ. ಬಡವರಿಗೆ ನೀರು ಸಿಗುವುದಿಲ್ಲ. ಯಾರು ಶ್ರೀಮಂತರಾಗಿರುತ್ತಾರೆ ಅವರಿಗೆ ನೀರು ಸಿಗುತ್ತದೆ, ಬಡವರಿಗೆ ಮಾತ್ರ ನೀರು ಬರುವುದಿಲ್ಲ. ನನ್ನ ಕ್ಷೇತ್ರದಲ್ಲಿ ಭಾರತಿನಗರದ ಬಗ್ಗೆ ತಮಗೆಲ್ಲರಿಗೂ ಗೊತ್ತಿದೆ. ಅವರಲ್ಲಿ ಸ್ಲಮ್‌ಗಳಲ್ಲಿ ಇರತಕ್ಕಂಥವರು, ಮಧ್ಯಮ ವರ್ಗದವರು, ಬಡವರಾಗಿರತಕ್ಕಂಥ ಜನ ಇದ್ದಾರೆ. ನೀರು ಇಲ್ಲದೆ ಅವರು ಇವತ್ತು ತೊಂದರೆಯನ್ನು ಅನುಭವಿಸುತ್ತಿದ್ದಾರೆ. ದಯಮಾಡಿ ನಾನು ಮಾನ್ಯ ಹಿರಿಯ ಮುಖಂಡರು ಮತ್ತು ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತಿದ್ದೇನೆ. ನಮ್ಮ ಬಗ್ಗೆ ಸ್ವಲ್ಪ ಕರುಣೆ ತೋರಿಸಿ, ಆದಿಷ್ಟು ನೀರು ಕೊಡಬೇಕು. ಒಂದು ಪರಿಸ್ಥಿತಿಯಲ್ಲಿ ರಾತ್ರಿಯಲ್ಲಿ ನಿದ್ದೆ ಹೋಗುತ್ತಾ ಇಲ್ಲ. ನಾನೇ ವಾಲ್ವ್‌ಮ್ಯಾನ್ ಆಗಿಬಿಟ್ಟಿದ್ದೇನೆ. ವಾಟರ್ ಟ್ಯಾಂಕ್ ಹತ್ತಿರ ಹೋಗಿ ಕುಳಿತುಕೊಳ್ಳುವುದು, ಬೆಳಿಗ್ಗೆ 5 ಗಂಟೆಗೆ ಹೋಗಿ ಫೋನ್ ಮಾಡಿ, ಲಾರಿಯಲ್ಲಿ ನೀರನ್ನು ತರಿಸಿಕೊಂಡು, ಎಲ್ಲೆಲ್ಲಿ ಯಾವ ಯಾವ ಏರಿಯಾದಲ್ಲಿ ನೀರು ಬರುವುದಿಲ್ಲ ಅವರಿಗೆ ಕೊಟ್ಟು ಅಷ್ಟೋ ಇಷ್ಟೋ ಸಮಾಧಾನ ಮಾಡುತ್ತಿದ್ದೇನೆ. ಇಲ್ಲದೇ ಇದ್ದರೆ ಜನರು ನಮಗೂ ಹೊಡೆಯುತ್ತಾರೆ, ಆ ಮಟ್ಟಕ್ಕೆ ಬಂದು ಬಿಟ್ಟಿದೆ. ನಿನ್ನೆಯಲ್ಲ, ಮೊನ್ನೆ ನನಗೆ ಫೋನ್ ಮಾಡಿ, ಏನಯ್ಯ ವೋಟ್ ಕೊಟ್ಟಿದ್ದಕ್ಕೆ, ಕುಡಿಯುವ ನೀರು ಕೊಡುವುದಿಲ್ಲವೇ, ಈ ತರಹ ಕೇಳುತ್ತಿದ್ದಾರೆ. ವೋಟು ಕೇಳುವುದಕ್ಕೆ ಕೈ ಮುಗಿದು ಬಂದಿದ್ದೆ, ಇವತ್ತು ನೀರು ಕೊಡುವುದಿಲ್ಲವೇ ಎಂದು ಕೇಳುತ್ತಾರೆ. ಈ ರೀತಿ ಬಹಳಷ್ಟಾಗಿದೆ. ನಾನು ಹೇಳಿಕೊಳ್ಳುವುದಕ್ಕಾಗುವುದಿಲ್ಲ. ಆದರೂ ಹೇಳಬೇಕು, ಹೇಳುತ್ತಿದ್ದೇನೆ. ಆ ಮಟ್ಟಕ್ಕೆ ಬಂದಿದೆ. ನಾನು ನಿಜವಾದ ಸಮಸ್ಯೆಯನ್ನು ಅರಿತಿದ್ದೇನೆ. ನಿಜವಾದ ಸಮಸ್ಯೆ ನೀರಿನ ಸಮಸ್ಯೆ ಮತ್ತು ವಿದ್ಯುತ್ ಸಮಸ್ಯೆ ಈ ಬೆಂಗಳೂರು ನಗರದಲ್ಲಿದೆ. ಕಾರಣವೇನೆಂದರೆ, 3 ಲಕ್ಷ ಇದ್ದ ಜನಸಂಖ್ಯೆ ಇವತ್ತು 50-60 ಲಕ್ಷಕ್ಕೆ ಬಂದಿದೆ. ಎರಡನೆಯದು, ಗಾಂಧಿ ಏನು ಹೇಳಿದರೋ ಅದಕ್ಕೆ

ವಿರುದ್ಧವಾಗಿ ನಾವು ಸಿಟಿಯನ್ನು ಬೆಳೆಸಿಕೊಂಡು ಬಂದಿದ್ದೇವೆ. ಆದ್ದರಿಂದ ಈ ನೀರಿನ ಅಭಾವದ ಬಗ್ಗೆ, I request our leaders to see that the problem of scarcity of water is solved as much as possible and atleast water is given on the alternative days. ಎರಡು ಗಂಟೆಗಳ ಕಾಲ ನೀರು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು :- ಈಗ ಮಾನ್ಯ ಸೋಮಣ್ಣನವರೇ, ನೀವು ಮಾತನಾಡಿ. ಹಾಲಿ ಹೇಳಿರತಕ್ಕ ವಿಷಯಗಳು ಪುನರಾವರ್ತನೆಯಾಗುವುದು ಬೇಡ. ಹೊಸದು ಏನಾದರೂ ಇದ್ದರೆ, ಈ ಸಮಸ್ಯೆಯನ್ನು ಪರಿಹಾರ ಮಾಡುವುದಕ್ಕೆ ಏನಾದರೂ ಮಾರ್ಗದರ್ಶನ ಹೇಳಬೇಕು.

ಶ್ರೀ ವಿ.ಸೋಮಣ್ಣ (ಬಿನ್ನಿಪೇಟೆ) :- ಸನ್ಮಾನ್ಯ ಅಧ್ಯಕ್ಷರೇ, ಬೆಂಗಳೂರು ನಗರದ ಬಗ್ಗೆ ಗಮನ ಹರಿಸಿ, ಏನು ನಿರ್ಣಯಕ್ಕೆ ಅವಕಾಶವನ್ನು ಕೊಟ್ಟಿದ್ದೀರಿ, ಇದಕ್ಕೆ ನಿಜವಾಗಿಯೂ ತಮ್ಮನ್ನು ಅಭಿನಂದಿಸುತ್ತೇನೆ. ಅನೇಕ ನುರಿತ ಸದಸ್ಯರುಗಳು ಮಾತನಾಡಿದ್ದಾರೆ. ನಾನು ಕೆಲವೊಂದು ವಿಷಯಗಳನ್ನು ತಮ್ಮ ಮೂಲಕ ಮತ್ತು ಈ ಸಭೆಯ ಮೂಲಕ ಸರ್ಕಾರದ ಗಮನಕ್ಕೆ ತರಲಿಚ್ಛಿಸುತ್ತೇನೆ. ನನಗೆ ಒಂದು ಬೇಕಾಗಿದೆ. ಕಾವೇರಿಯಿಂದ, ತಿಪ್ಪಗೊಂಡನಹಳ್ಳಿಯಿಂದ ಎಷ್ಟು ನೀರು ಬೆಂಗಳೂರು ನಗರಕ್ಕೆ ಸರಬರಾಜಾಗುತ್ತಿದೆ ಮತ್ತೆ ತೊರೆಕಾಡನಹಳ್ಳಿಯಿಂದ ಮೊದಲನೇ ಹಂತದಲ್ಲಿ ಎಷ್ಟು ಬರುತ್ತಾ ಇದೆ, ಎರಡನೇ ಹಂತದಲ್ಲಿ ಎಷ್ಟು ಬರುತ್ತಾ ಇದೆ, ಮೂರನೆ ಹಂತದಲ್ಲಿ ಎಷ್ಟು ಬರುತ್ತಾ ಇದೆ. ಸನ್ಮಾನ್ಯ ಅಧ್ಯಕ್ಷರೇ, ಹೋದವಾರ ಒಂದು ದೊಡ್ಡ ಗಲಾಟೆಯಿಂದ ರಸ್ತೆ ತಡೆ ಚಳುವಳಿಯಾಯಿತು. ಇದಾದ ಮೇಲೆ, ಸನ್ಮಾನ್ಯ ಮುಖ್ಯ ಮಂತ್ರಿಗಳು ಹಾಗೂ ನಮ್ಮ ನಾಯಕರಿಗೆ ಒಂದು ಪತ್ರವನ್ನು ಖಾರವಾಗಿ ಬರೆದುಕೊಟ್ಟಾಗ, ಅವರು ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳನ್ನು ಕರೆಯಿಸಿ, ಆದೇಶ ನೀಡಿದರು. ನಾಳೆಯಿಂದ ಎಲ್ಲವೂ ಸರಿ ಹೋಗುತ್ತದೆಂದು ಹೇಳಿದರು. ಕೆಲವು ಕಡೆ ಪಿ.ಡಬ್ಲ್ಯೂ.ಡಿ. ಯಿಂದ, ಮತ್ತೆ ಕೆಲವು ಕಡೆ ಖಾಸಗಿಯವರಿಂದ ಟ್ಯಾಂಕುಗಳನ್ನು ತರಿಸತಕ್ಕಂಥಾದ್ದು ಹಾಗೂ ಇದರ ಮೇಲ್ವಿಚಾರಣೆಯನ್ನು ಹೆಚ್.ಯು.ಡಿ.ಸೆಕ್ರೆಟರಿಯವರು ಮಾಡುತ್ತಾರೆಂದು ಹೇಳಿದರು. ಇಷ್ಟೆಲ್ಲಾ ಮಾಡುತ್ತೇವೆಂದು ಹೇಳಿದರೂ ಕೂಡ, ಅವರು ಹೇಳಿದ ಮೇಲೆ ಬಂದಿರತಕ್ಕಂಥಾದ್ದು, ಕೇವಲ ಒಂದೆರಡು ಟ್ಯಾಂಕರುಗಳು ಬಿಟ್ಟರೆ, ಯಾವುದೇ ಅಧಿಕಾರಿ, ಯಾವುದೇ ಸರ್ವೀಸ್ ಸ್ಟೇಷನ್‌ಗಳಿಗೆ ಬಂದಿಲ್ಲ. ಈ ತಹಲ್‌ವರೆಗೂ ಹಿರಿಯ ಅಧಿಕಾರಿಗಳು ನೋಡತಕ್ಕ ಪರಿಸ್ಥಿತಿ ಇಲ್ಲ. ಬೆಂಗಳೂರು ನಗರದಲ್ಲಿ ಇವತ್ತು ನಾವೆಲ್ಲರೂ ಬೊಬ್ಬೆ ಇಡುತ್ತಿದ್ದೇವೆ. ಅಂತಹ ಸಮಸ್ಯೆ ಈ ನೀರಿನ ಸಮಸ್ಯೆ. ನನಗೆ ತಿಳಿದ ಮಟ್ಟಿಗೆ, ವ್ಯವಸ್ಥಿತವಾಗಿ ನೀರನ್ನು ಕೊಟ್ಟರೆ ಈ ಸಮಸ್ಯೆ ಉಲ್ಬಣವಾಗುವುದಿಲ್ಲ. ಈ ಸಮಸ್ಯೆ ಉಲ್ಬಣವಾಗುವುದಕ್ಕೆ ಪ್ರಾಯಶ: ಅಧಿಕಾರಿಗಳೇ ಕಾರಣವೆಂದು ನನ್ನ ಅನಿಸಿಕೆ. ಸನ್ಮಾನ್ಯ ಅಧ್ಯಕ್ಷರೇ, ಇವತ್ತು ಏನು ಮಾಡುತ್ತಿದ್ದಾರೆ? 1985-86ರಲ್ಲಿ ತಾವೂ ಕೂಡ ಶಾಸಕರಾಗಿದ್ದೀರಿ. ಬೆಂಗಳೂರು ನಗರದಲ್ಲಿ ಮಳೆ ಇಲ್ಲದೆ, ಇಡೀ ರಾಜ್ಯದಲ್ಲಿ ಮಳೆ ಇಲ್ಲದ ಪರಿಸ್ಥಿತಿಯಲ್ಲಿ, ಹೆಸರುಘಟ್ಟ ಕೆರೆ ಬತ್ತಿ ಹೋಗಿತ್ತು, ತಿಪ್ಪಗೊಂಡನಹಳ್ಳಿ

ಕೆರೆ ಬತ್ತಿ ಹೋಗಿತ್ತು. ಮತ್ತೆ ಕಾವೇರಿ ಎರಡನೇ ಹಂತದಿಂದ ನೀರು ಬರುತ್ತಿತ್ತು. ಅವತ್ತು ಇದ್ದಂಥ ಪರಿಸ್ಥಿತಿಯಲ್ಲೂ ಕೂಡ, ದಿನಬಿಟ್ಟು ದಿನ ನೀರು ಕೊಟ್ಟು, ಎಲ್ಲೆಲ್ಲಿ ನೀರಿನ ಸಮಸ್ಯೆ ಇತ್ತು, ಅದನ್ನು ನೀಗಿಸುತ್ತಿದ್ದರು. ಇವತ್ತು ಏನಾಗಿದೆ, ಈಗತಾನೇ ಮಾನ್ಯ ಸದಸ್ಯರಾದ ಪ್ರಮೀಳಾರವರು ಹೇಳಿದರು, ಮಾನ್ಯ ಮುನಿಯಪ್ಪನವರು ಮಾತನಾಡಿದರು, ಮಾನ್ಯ ಸುರೇಶ್ ಕುಮಾರ್‌ರವರು ಮಾತನಾಡಿದರು. ನಾನು ಬರುವುದಕ್ಕೆ ಮುಂಚೆ ಮಾನ್ಯ ನಂಜೇಗೌಡರು ಮಾತನಾಡಿದರು. ಬೆಂಗಳೂರು ನಗರದಲ್ಲಿ ಎಲ್ಲೂ ಕೂಡ ನೀರು ಬರುತ್ತಾ ಇಲ್ಲವೆಂದು ಹೇಳುವುದಕೆಡಕ ನನಗಂತೂ ಆಗುವುದಿಲ್ಲ. ಆದರೆ, ಈ ನೀರು ಕೊಡತಕ್ಕ ವ್ಯವಸ್ಥೆ ಏನಿದೆ, ಆ ಕೊಡುತ್ತಿರತಕ್ಕ ವ್ಯವಸ್ಥೆ ಬಗ್ಗೆ ತಮ್ಮ ಮೂಲಕ ನಮ್ಮ ನಾಯಕರಲ್ಲಿ ವಿನಂತಿ ಮಾಡುತ್ತೇನೆ. ಒಂದನೇ ಹಂತದಲ್ಲಿ, ಒಂದು ಭಾಗಕ್ಕೆ ನೀರನ್ನು ಕೊಡುತ್ತಾರೆ. ಎರಡನೇ ಹಂತದಲ್ಲಿಯೂ, ಒಂದನೇ ಹಂತದಲ್ಲಿ ಕೊಟ್ಟಿರುವವರಿಗೇ ಕೊಡುತ್ತಾರೆ. ಮತ್ತೆ ಮೂರನೇ ಹಂತದಲ್ಲಿಯೂ ಕೂಡ 1-2 ಹಂತದಲ್ಲಿ ಕೊಟ್ಟಿರತಕ್ಕಂಥವರಿಗೆ ನೀರು ಕೊಡುತ್ತಾರೆ. ಇದರಲ್ಲಿ ದುರಂತವೇನಾಗಿದೆ ಎಂದರೆ, ಬೆಂಗಳೂರು ನಗರ ಎಂದರೆ, ಕೇವಲ ಕೆಲವೇ ಭಾಗಗಳು ಎನ್ನುವ ಮಟ್ಟದಲ್ಲಿ ಅಧಿಕಾರಿಗಳು ಕೆಲಸ ಕಾರ್ಯಗಳನ್ನು ಮಾಡಿದ್ದಾರೆ. ತಮ್ಮ ಗಮನಕ್ಕೆ ಒಂದು ವಿಷಯವನ್ನು ತರುತ್ತೇನೆ. ಸನ್ಮಾನ್ಯ ಅಧ್ಯಕ್ಷರೇ, ಈ ಸಂಗ್ರಹಣಾ ಕೇಂದ್ರಗಳು ಏನಿರುತ್ತವೆ, ನೀರನ್ನು ಬೆಂಗಳೂರು ನಗರಕ್ಕೆ ಏನು ಪಂಪ್ ಮಾಡುತ್ತಾರೆ, ಈ ರೀತಿ ಪಂಪ್ ಮಾಡುವಾಗ ಬರತಕ್ಕ ನೀರನ್ನು ಸಂಗ್ರಹಣ ಮಾಡಿಕೊಳ್ಳುವುದಕ್ಕೆ ಸರಿಯಾದ, ವ್ಯವಸ್ಥಿತವಾಗಿ, ಎಷ್ಟು ನೀರು ಬೆಂಗಳೂರು ನಗರಕ್ಕೆ ಬೇಕೆಂಬುದನ್ನು ಆಲೋಚನೆ ಮಾಡದೇ, 1ನೇ ಹಂತದ, 2ನೇ ಹಂತದ ಹಾಗೂ 3ನೇ ಹಂತವನ್ನೂ ಮುಗಿಸಿದ್ದಾರೆ ಹಾಗೂ 4ನೇ ಹಂತದಲ್ಲಿಯೂ ಕೂಡ ಇವತ್ತು ಎಲ್ಲಾ ಕ್ಷೇತ್ರಗಳಲ್ಲಿಯೂ ವ್ಯವಸ್ಥೆ ಮಾಡುತ್ತಾ ಇಲ್ಲ. ನಾನು ತಮ್ಮ ಮೂಲಕ, ಈ ಸಭೆಯ ಮೂಲಕ ಅಧಿಕಾರಿಗಳಿಗೆ ವಿನಂತಿ ಮಾಡುತ್ತೇನೆ. ಈ ಮೂಲರು ಹಂತದಲ್ಲಿ ಬರತಕ್ಕ ನೀರು ಎಷ್ಟು ? ವೋಲ್ಟೇಜ್ ಒಂದು ದಿನಕೆಡಕ ಎಷ್ಟು ಸಾರಿ ಹೋಗುತ್ತದೆ ? ಈ ವೋಲ್ಟೇಜ್ ಎನ್ನುವ ಸಮಸ್ಯೆಯನ್ನು, ಒಂದು-ಒಂದೂವರೆ ತಿಂಗಳಿಂದ ಈಚೆಗೆ ಎಷ್ಟೊಂದು ದೊಡ್ಡ ಗದಾಪ್ರಹಾರವಾಗಿ ಮಾಡಿಕೊಂಡಿದ್ದಾರೆ. ಮಾತೆತ್ತಿದ್ದರೆ ವೋಲ್ಟೇಜ್ ಇಲ್ಲ ಎಂದು ಹೇಳುತ್ತಾರೆ. ಅಧ್ಯಕ್ಷರೇ, ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಕೆಲವು ಕಡೆ 10-12 ಗಂಟೆಗಳ ಕಾಲ ನೀರು ಬರುತ್ತದೆ. ಇನ್ನು ರಿಡ್ಜ್ ಪಾಯಿಂಟ್ ಬಗ್ಗೆ ಹೇಳಬೇಕಾದರೆ, ಯಾರು ತುಂಬಾ ದಿವಸ ಸಫರ್ ಆಗುತ್ತಿದ್ದಾರೆ, ಆ ಸಫರ್ ಆಗುತ್ತಿರುವವರು ಮಾತ್ರ ಸಫರ್ ಆಗುತ್ತಿದ್ದಾರೆ. ಸನ್ಮಾನ್ಯ ಅಧ್ಯಕ್ಷರೇ, ತಮ್ಮ ಗಮನಕ್ಕೆ ತರುವುದು ಇಷ್ಟೆ. ಯಾವುದೋ ಒಂದು ಹಂತದವರೆಗೆ ನೀರು ಹೋಗುತ್ತದೆ, ಇನ್ನೇನು ನೀರು ಬರುತ್ತದೆ ಎನ್ನುವ ವೇಳೆಗೆ ಸರಿಯಾಗಿ, ವಾಲ್ವ್‌ಮ್ಯಾನ್ ಹೋಗಿ ನಿಲ್ಲಿಸುತ್ತಾನೆ. ಈ ನಿರ್ವಹಣೆ ಮತ್ತು ಪ್ರಾಜೆಕ್ಟ್‌ಗೆ ಸಂಬಂಧಪಟ್ಟ ಎಕ್ಸಿಕ್ಯೂಟಿವ್ ಇಂಜಿನಿಯರ್, ಚೀಫ್ ಇಂಜಿನಿಯರ್ ಮತ್ತಿತರ ಎಲ್ಲಾ ಅಧಿಕಾರಿಗಳನ್ನು ಕರೆದು, ಮುಖ್ಯ ಇಂಜಿನಿಯರ್‌ರವರ ಕೊಠಡಿಯಲ್ಲಿ ಎರಡು ಸಾರಿ ಸಭೆ ಮಾಡಿದೆ. ಕೊನೆಗೆ ನಾನು ತೀರ್ಮಾನ ಮಾಡಿದ್ದು ಒಂದೇ ಒಂದು. ಇವರು ಯಾರನ್ನು ಹಿಡಿದುಕೊಂಡರೂ ಆಗುವುದಿಲ್ಲ, ವಾಲ್ವ್‌ಮ್ಯಾನ್‌ಗಳನ್ನು ಸರಿಮಾಡಿಕೊಂಡರೆ ನೀರು ಕೊಡಬಹುದು ಎನ್ನುವ ಮಟ್ಟಕ್ಕೆ ನಾವು ಹೋಗಿದ್ದೇವೆ.

ಅದಕ್ಕಾಗಿ, ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದು ಇಷ್ಟೆ. ಬೆಂಗಳೂರು ನಗರಕ್ಕೆ ಬರತಕ್ಕಂಥ ನೀರನ್ನು, ಸರಬರಾಜು ಮಾಡುವುದಕ್ಕೆ ಎಷ್ಟೆಷ್ಟು ಫೀಡರ್ ಮೆಯಿನ್‌ಗಳನ್ನು, ಎಲ್ಲೆಲ್ಲಿ ಹಾಕಿದ್ದಾರೆ, ಈ ಫೀಡರ್ ಮೆಯಿನ್‌ಗಳು ಎಂದರೆ ಏನು ? ನಾನು ನೊಂದು, ಒಂದು ಮಾತನ್ನು ಹೇಳುತ್ತೇನೆ. ಹೊಸಹಳ್ಳಿ ಮಧ್ಯದಲ್ಲಿ ಬೂಸ್ಟರ್ ಪಂಪ್ ಇದೆ. ಪ್ರಾಯಶಃ ನಮ್ಮ ವಾಟಾಳ್ ನಾಗರಾಜ್‌ರವರು ಇರುವುದಕ್ಕೆ ಮುಂಚೆ ಹಾಕಿರತಕ್ಕ ಬೂಸ್ಟ್ ಪಂಪ್ ಎಂದು ಕಾಣುತ್ತದೆ. ಇದರಿಂದ 3-4 ಸಾವಿರ ಮನೆಗಳಿಗೆ ನೀರನ್ನು ಬೂಸ್ಟ್ ಮಾಡುವುದಕ್ಕೆ ಸಾಧ್ಯ. ಆದರೊಳಗೆ 45-50 ಸಾವಿರ ಮನೆಗಳಿಗೆ ನೀರು ಕೊಡುತ್ತೇವೆಂದು ಹೇಳುತಾರೆ. ಇದು ಸಾಧ್ಯ ಇದೆಯೇ ? ಶ್ರೀಮತಿ ಪ್ರಮೀಳಾರವರು ಮಾತನಾಡುತ್ತಾ ಹೇಳಿದರು. ಸನ್ಮಾನ್ಯ ಅಧ್ಯಕ್ಷರೇ, ಬಿನ್ನಿಪೇಟೆ ಕ್ಷೇತ್ರದಲ್ಲಿ, ನಾನು ಈ ಕ್ಷೇತ್ರವನ್ನು ಹೇಳುವುದು ಬೇಡವೆಂದು ಇದ್ದೆ, ತಾವೂ ಕೂಡ ನನಗೆ ಎಚ್ಚರಿಕೆಯನ್ನು ಕೊಡುತ್ತೀರಿ. ಇಡೀ ಬೆಂಗಳೂರು ನಗರದ ಸಮಸ್ಯೆ ಮಾತನಾಡಿ ಎಂದು ಹೇಳಿದರೆ, ಯಾವುದೋ ಒಂದು ಕ್ಷೇತ್ರದ ವಿಚಾರ ಮಾತನಾಡುತ್ತಿದ್ದೀರಿ ಎಂದು ಹೇಳಬಹುದು. ಈ ಕ್ಷೇತ್ರ 3 ಲಕ್ಷ ಮತದಾರರು ಇರತಕ್ಕ ಕ್ಷೇತ್ರ. ಇಲ್ಲಿರುವವರು ಬಹುತೇಕ ಬಡವರು ಮತ್ತು ಕಡುಬಡವರು. ನಮಗೆ ನೀರು ಬರುವುದು ಮೊದಲು ಸೌತ್ ಎಂಡ್ ಸರ್ಕಲ್‌ನಿಂದ ಇಲ್ಲಿಂದ ಬರುವಾಗ ಜಯನಗರದವರು ಎಲ್ಲವನ್ನೂ ಕಿತ್ತುಕೊಳ್ಳುತ್ತಾರೆ. ಆದಾದ ಮೇಲೆ ಎಂ.ಎನ್.ಕೆ. ಯಿಂದ ಬಸವನಗುಡಿಯವರು ಎಲ್ಲಾ ತೆಗೆದುಕೊಳ್ಳುತ್ತಾರೆ. ತದನಂತರ ಉಳಿಯತಕ್ಕಂಥಾದ್ದು ಚಾಮರಾಜಪೇಟೆ. ಈ ಚಾಮರಾಜಪೇಟೆಯವರಿಗೇ ನೀರಿಲ್ಲ ಎಂದ ಮೇಲೆ ಬಿನ್ನಿಪೇಟೆಯವರಿಗೆ ನೀರು ಎಲ್ಲಿಂದ ಬರಬಹುದು ಎಂಬುದನ್ನು ತಾವೇ ಹೇಳಿ. ಈ ಕಡೆ ಹೀಗಾದರೆ, ಮತ್ತೊಂದು ಕಡೆ ತಿಪ್ಪಗೊಂಡನಹಳ್ಳಿಯಿಂದ ಬರತಕ್ಕ ನೀರು, ಮಲ್ಲೇಶ್ವರಂ, ರಾಜಾಜಿನಗರ ಭಾಗ, ತದನಂತರ ನಮಗೆ ಬರಬೇಕು. ಇದು ಯಾವ ರೀತಿ ಇದೆಯೆಂದರೆ, ಇಕ್ಕಟ್ಟಿನಲ್ಲಿ ಸಿಕ್ಕಿಹಾಕಿಕೊಂಡು ಒದ್ದಾಡತಕ್ಕ ಪರಿಸ್ಥಿತಿಯಾಗಿದೆ. ನಾನು ಅನೇಕ ಸಂದರ್ಭಗಳಲ್ಲಿ ಮುಖ್ಯ ಇಂಜಿನಿಯರ್‌ರವರ ಹತ್ತಿರ ಮತ್ತು ಸಂಬಂಧಪಟ್ಟ ಅಧಿಕಾರಿಗಳ ಹತ್ತಿರ ಮಾತನಾಡಿದೆ. ನಮಗೆ ಏನು ನೀರು ಬರುತ್ತದೆ, ಈ ರೀತಿ ಬರತಕ್ಕ ನೀರನ್ನು ಪ್ರತಿಯೊಬ್ಬರಿಗೂ ಕೊಡಲು, ವ್ಯವಸ್ಥಿತವಾಗಿ ಹಂಚಿಕೆ ಮಾಡಿದರೆ, ಇರತಕ್ಕ ನೀರನ್ನು ಎಲ್ಲರೂ ವಿನಿಯೋಗಿಸಿಕೊಳ್ಳಬಹುದು. ಒಂದು ಕಣ್ಣಿಗೆ ಬೆಣ್ಣೆ, ಮತ್ತೊಂದು ಕಣ್ಣಿಗೆ ಸುಣ್ಣ ಹಾಕಿ ನಮ್ಮನ್ನು ಬೀದಿಪಾಲು ಮಾಡತಕ್ಕ ಪರಿಸ್ಥಿತಿಗೆ ತಂದಿದ್ದಾರೆ. ನಾನು ತಮ್ಮ ಮೂಲಕ, ಸಭಾ ನಾಯಕರ ಗಮನಕ್ಕೆ ತರುವುದು, ಈ ಮೂರು ಹಂತದಲ್ಲಿ ಎಷ್ಟು ನೀರು ಬರುತ್ತದೆ, ತಿಪ್ಪಗೊಂಡನಹಳ್ಳಿಯಿಂದ ನೀರು ಬರುತ್ತಿದೆಯೇ? ಒಂದು ವೇಳೆ ಬರುತ್ತಾ ಇದ್ದರೆ, ಆ ನೀರನ್ನು ಎಲ್ಲಿಗೆ ಕೊಡುತ್ತೀರಿ? ನಮ್ಮಲ್ಲಿ ಒಂದೋ ಎರಡೋ ಓವರ್ ಹೆಡ್ ಟ್ಯಾಂಕ್‌ಗಳಿವೆ. ಇಡೀ ದೊಡ್ಡ ಕ್ಷೇತ್ರಕ್ಕೆ ಒಂದು ಮಾಗಡಿ ರಸ್ತೆಯಲ್ಲಿ ಮತ್ತೊಂದು ವಿಜಯನಗರದಲ್ಲಿ. ಈ ಓವರ್ ಹೆಡ್ ಟ್ಯಾಂಕ್‌ಗಳಲ್ಲಿ ಒಂದು ಲಕ್ಷ ಅಥವಾ ಒಂದೂ ಕಾಲು ಲಕ್ಷ ಲೀಟರ್ ನೀರು ಹಿಡಿಸತಕ್ಕಂಥಾದ್ದು. ಅಷ್ಟು ಬಿಟ್ಟರೆ ಏನೇನೂ ಇಲ್ಲ. ನಾನು ಮೊನ್ನೆ ಸಂಬಂಧಪಟ್ಟ ಅಧ್ಯಕ್ಷರನ್ನು ಕೇಳಿ, ಬನ್ನಿ ಸ್ವಾಮಿ, ಆ ಜಾಗವನ್ನು ನೋಡಿಕೊಂಡು ಬರೋಣ, ಮಾಗಡಿ ರಸ್ತೆಯಲ್ಲಿ ಜಿ.ಎಲ್.ಆರ್. ಮಾಡಬಹುದು ಎಂದು ಹೇಳಿದರೆ, ನೀವು ಹೇಳಿಬಿಡಿ, ನಾವು ಮಾಡುತ್ತೇವೆಂದು

ಹೇಳುತ್ತಾರೆ. ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ನಮಗೂ ಸ್ವಲ್ಪ ಜವಾಬ್ದಾರಿ ಇದೆ, ಈ ಜವಾಬ್ದಾರಿಯನ್ನು ಅರಿತುಕೊಳ್ಳಬೇಕಾಗಿದೆ, ನಮಗೆ ಯಾರ ಮೇಲೂ ಹೊಟ್ಟೆಕಿಚ್ಚು ಇಲ್ಲ. ಬೆಂಗಳೂರಿನ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಏನಿದೆ, ಇದೊಂದು ದೊಡ್ಡ ಸ್ವಾಯುತ್ತ ಸಂಸ್ಥೆ. ಈ ಸಂಸ್ಥೆಗೆ ಇರತಕ್ಕ ಜವಾಬ್ದಾರಿ ಜಾಸ್ತಿ. ಬೇರೆಯವರು, ಯಾರು ಒಂದು ರಸ್ತೆ ಮಾಡಿದವರು ತೆಗೆದುಕೊಳ್ಳುತ್ತಾರೆ ಅಥವಾ ಬೇರೆ ಕೆಲಸ ಮಾಡಿದವರು ತಡೆದುಕೊಳ್ಳುತ್ತಾರೆ. ಆದರೆ, ಕುಡಿಯುವ ನೀರು ಇಲ್ಲ ಎಂದು ಹೇಳಿದರೆ, ತಡೆದುಕೊಳ್ಳುವುದಕ್ಕೆ ಸಾಧ್ಯತೆ ಇಲ್ಲ. ನಾನು ಇಡೀ ಬೆಂಗಳೂರು ನಗರಕ್ಕೆ ನೀರು ಬರುತ್ತಾ ಇಲ್ಲವೆಂದು ಹೇಳುವುದಕ್ಕೆ ತಯಾರಿಲ್ಲ. ಇರತಕ್ಕಂಥ ನೀರಿನ ವಿತರಣೆ ಸರಿಯಾಗಿಲ್ಲ. ಅವರು ನಂಬುತ್ತಾರೋ ಇಲ್ಲವೋ. ಇನ್ನೊಂದು ಇವರಲ್ಲಿ ಕೋ ಆರ್ಡಿನೇಷನ್ ಇಲ್ಲ. ಒಬ್ಬ ಎಕ್ಸಿಕ್ಯೂಟಿವ್ ಇಂಜಿನಿಯರ್‌ಗೂ ಇನ್ನೊಬ್ಬ ಎಕ್ಸಿಕ್ಯೂಟಿವ್ ಎಂಜಿನಿಯರ್‌ಗೆ ಆಗುವುದಿಲ್ಲ. ಒಬ್ಬ ಅಸಿಸ್ಟಂಟ್ ಇಂಜಿನಿಯರ್‌ಗೂ ಇನ್ನೊಬ್ಬ ಅಸಿಸ್ಟಂಟ್ ಇಂಜಿನಿಯರ್‌ಗೆ ಆಗುವುದಿಲ್ಲ. ಅವರ ಕಾಲು ಇವರು ಎಳೆಯುತ್ತಾರೆ, ಇವರ ಕಾಲು ಅವರು ಎಳೆಯುತ್ತಾರೆ. ಅದಕ್ಕಾಗಿ, ನಮ್ಮ ಮುಖ್ಯ ಮಂತ್ರಿಗಳು ಹಾಗೂ ಸಭಾನಾಯಿರಿಗೆ ಹೇಳುವುದು, ದಯಮಾಡಿ, ಇವತ್ತೇ ಒಂದು ಕನ್‌ಸಲ್ಟೆಟೀವ್ ಕಮೀಟಿಯನ್ನು ಮಾಡುವುದಕ್ಕೆ ಆದೇಶ ನೀಡಬೇಕು; ತಮಗೆ ಗೊತ್ತಿದೆ, ಇವತ್ತು ಏನಾಗಿದೆ, ಕೆಲವು ಲೈನ್‌ಗಳು ಹಾಕಿ ಸುಮಾರು 30-40-50 ವರ್ಷಗಳಾಗಿವೆ. ಎರಡೂವರೆ ಇಂಚು ಪೈಪ್ ಹಾಕಿದ್ದಾರೆ, ಅದರಲ್ಲಿ ಒಂದು ಇಂಚು ಪೈಪು ಹಿಡಿದಿರುತ್ತದೆ. ಇನ್ನು ಒಂದೂವರೆ ಇಂಚು ಪೈಪಿನಲ್ಲಿ ನೀರು ಎಷ್ಟು ಮಟ್ಟಿಗೆ ಬರಬೇಕು. ಇಡೀ ಬೆಂಗಳೂರು ನಗರದಲ್ಲಿ ಬೇರೆ ಕಡೆಗೆ ಇಲ್ಲದಷ್ಟು ಸಿ.ಆರ್.ಪೋಲೀಸ್ ಕ್ವಾರ್ಟರ್ಸ್ ನನ್ನ ಕ್ಷೇತ್ರದಲ್ಲಿದೆ. ಅವರ ಗೋಳನ್ನು ಹೇಳುವುದಕ್ಕೆ ತೀರದು. ಮತ್ತೆ ಬಿನ್ನಿ ಕ್ವಾರ್ಟರ್ಸ್ ಎಂದು ಸುಮಾರು ಒಂದು ಸಾವಿರ ಮನೆಗಳು ಇವೆ. ಅಲ್ಲಿ ಅವರು 4-5 ಅಡಿ ಗುಂಡಿಗಳನ್ನು ತೆಗೆದಿದ್ದಾರೆ. ಆ ಗುಂಡಿಯಲ್ಲಿ ಬರತಕ್ಕಂಥ ನೀರನ್ನು ಕುಡಿಯುತಾರೆ. ಬೆಂಗಳೂರು ನಗರವನ್ನು ಸ್ವಚ್ಛ ಮಾಡತಕ್ಕಂಥ ಪೌರ ಕಾರ್ಮಿಕರು ಬಹುತೇಕ ಇರತಕ್ಕಂಥಾದ್ದು ನನ್ನ ಕ್ಷೇತ್ರದಲ್ಲಿ. ವೆಂಕಟಸ್ವಾಮಿ ಗಾರ್ಡನ್ ರಾಯರಪುರ ಬೆನ್ಸನ್ ಲೈನ್ ಈ ಕಡೆಯಲ್ಲಿರತಕ್ಕಂಥವರು 4-5 ಅಡಿ ಗುಂಡಿಗಳನ್ನು ತೆಗೆದಿದ್ದರು. ನಾನು ಹೋದಾಗ ಕೇಳಿದೆ ಏಕೆ ತಾಯಿ ಈ ರೀತಿ ಗುಂಡಿಗಳನ್ನು ತೆಗೆದಿದ್ದೀರಿ ಎಂದು. ಅದಕ್ಕೆ ಅವರು, ನಾವು ಕೆಲಸಕ್ಕೆ ಹೋದ ಮೇಲೆ ಆ ಗುಂಡಿಗಳಲ್ಲಿ ನೀರು ಏನಾದರೂ ತುಂಬಿಕೊಂಡಿದ್ದರೆ ಆ ನೀರು ತೆಗೆದು ನಾವು ಮನೆಗೆ ಉಪಯೋಗಿಸಿಕೊಳ್ಳುತ್ತೇವೆ ಎಂದು ಹೇಳಿದರು. ಇದನ್ನು ನಾನು ಬೆಂಗಳೂರು ಜಲ ಮಂಡಳಿಯ ಅಧಿಕಾರಿಗಳಿಗೆ ಸ್ಪಷ್ಟವಾಗಿ ಕಣ್ಣಿನಿಂದ ತೋರಿಸಿರತಕ್ಕಂಥ ಚಿತ್ರ. ಈ ಮಟ್ಟದಲ್ಲಿ ಇರಬೇಕಾದರೆ ಸೋಮಣ್ಣನವರ ಕ್ಷೇತ್ರಕ್ಕೆ ಬಿನ್ನಿಪೇಟೆಗೆ ನೀರು ಬರುತ್ತದೆಂದು ಹೇಳಿದರೆ ನಾನು ಅಳಬೇಕೋ ನಗಬೇಕೋ ಎನ್ನುವುದನ್ನು ನೀವೆ ಯೋಚನೆ ಮಾಡಿ. ಆದ್ದರಿಂದ ನಾನು ಈ ಕ್ಷೇತ್ರದ ಬಗ್ಗೆ ಹೆಚ್ಚು ಹೇಳುವುದಕ್ಕೆ ಬದಲು ಮುಂಚೆ ಬರುವಂತಹ ಎರಡು ತಿಂಗಳುಗಳು ಏನು ಬರುತ್ತಿದೆ ಅದಕ್ಕೆ ಪ್ರಕೃತಿ ಬಂದು ಮಳೆ ಬಂದರೆ ಪರವಾಗಿಲ್ಲ ಇಲ್ಲದಿದ್ದರೆ ಆಲ್ಟರ್‌ನೇಟಿವ್ ಕಾರ್ಯಕ್ರಮಗಳಿಗೆ ಸರಕಾರ ಏನಾದರೂ ಕಾರ್ಯಕ್ರಮ ಹಾಕಿಕೊಂಡಿದೆಯೇ ಮತ್ತು ವೋಲ್ಟೇಜ್ ಇಂಪ್ರೂವ್ ಮಾಡಿ ಎಲ್ಲರಿಗೂ ಸಮಗ್ರವಾಗಿ ನೀರು ಕೊಡುತ್ತೀರಾ ? ಆ ಸಿ.ಆರ್. ಪೋಲೀಸ್

ಕ್ವಾಟರ್ಸ್‌ನಲ್ಲಿ ಒಂದು ಟ್ಯಾಂಕ್ ಕಟ್ಟಿ ಸುಮಾರು 10 ವರ್ಷಗಳು ಆಗಿವೆ. ಏತಕ್ಕೆ ಈ ಟ್ಯಾಂಕ್ ಕಟ್ಟಿದ್ದೀರಿ ಎಂದು ಕೇಳಿದರೆ ಏನು ಸ್ವಾಮಿ ಮಾಡುವುದು ನೀರು ಬರುವುದಿಲ್ಲ ಎಂದು ಹೇಳುತ್ತಾರೆ. ನಾನು ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ ಶ್ರೀಮತಿ ಪ್ರಮೀಳಾರವರು ಸೋಮಣ್ಣನವರ ಕ್ಷೇತ್ರಕ್ಕೆ ಚೆನ್ನಾಗಿ ನೀರು ಬರುತ್ತಿದೆ ಎಂದು ಹೇಳಿದ್ದಕ್ಕೆ. ನಾವೇನಾದರೂ ಅವಲಂಬಿಯಾಗಿದ್ದೇನೆ ಅಂದರೆ ಬೇರೆ ಬೇರೆ ಕ್ಷೇತ್ರಗಳಿಗೆ ಇವತ್ತು ನನ್ನಲ್ಲಿರತಕ್ಕಂಥ ಅವ್ಯವಸ್ಥೆ ಹೇಳತೀರು. ನನ್ನ ಕ್ಷೇತ್ರದಲ್ಲಿರತಕ್ಕಂತಹ ಜನಸಂಖ್ಯೆಯನ್ನು 3 ಕ್ಷೇತ್ರಗಳನ್ನಾಗಿ ಮಾಡಬಹುದು. ಅಷ್ಟು ಜನ ಸಂಖ್ಯೆ ಇದ್ದಾರೆ. ಬಹುತೇಕವಾಗಿ ಕಡುಬಡವರು, ಮಧ್ಯಮ ವರ್ಗದವರು ಹಿಂದುಳಿದವರು ವಾಸ ಮಾಡುತ್ತಿರುವಂತಹ ಕ್ಷೇತ್ರ ಅದು. ಆದ್ದರಿಂದ ನಾನು ತಮ್ಮ ಮೂಲಕ ವಿನಂತಿ ಮಾಡುವುದು ಇಷ್ಟೇ; ಬರತಕ್ಕಂಥ ನೀರನ್ನು ಎಲ್ಲರಿಗೂ ಸಮನಾಗಿ ಕೊಡುವುದಕ್ಕೆ ಏನೇನು ಅಲ್ಟರ್‌ನೇಟೀವ್ಸ್ ಮಾಡಬಹುದು ಅದನ್ನು ಮಾಡಿಸಿ. ಒಂದು ಕಣ್ಣಿಗೆ ಸುಣ್ಣ ಒಂದು ಕಣ್ಣಿಗೆ ಬೆಣ್ಣೆ ಕೊಟ್ಟು ಎಲ್ಲೋ ಒಂದು ಕಡೆ ಒಂದು ರಸ್ತೆಯಲ್ಲಿ ನೀರು ಇಲ್ಲ ಅಂದರೆ ಕೂಗಾಡುವುದು ಬೇಡ. ನಮ್ಮಲ್ಲಿ ಶೇಕಡ 50 ಪರ್ಸೆಂಟಿನಷ್ಟು ಜನ ನೀರು ಇಲ್ಲದೆ ಒದ್ದಾಡುತಿದ್ದಾರೆ. ಯಾರು 16 ದಿವಸಗಳಿಂದ ನೀರು ಇಲ್ಲದೆ ಒದ್ದಾಡುತ್ತಿದ್ದಾರೆ, ಅವರಿಗೆ ಸಮರ್ಪಕವಾಗಿ ನೀರು ಕೊಡುವುದಕ್ಕೆ ಅಧಿಕಾರಿಗಳು ಕಾರ್ಯಕ್ರಮಗಳನ್ನು ರೂಪಿಸಿಕೊಳ್ಳಬೇಕು. ಕನ್‌ಸಲ್‌ಟೀಟೀವ್ ಕಮಿಟಿಗಳನ್ನು ಇವತ್ತಿನಿಂದಲೇ ಪ್ರಾರಂಭ ಮಾಡಬೇಕು. ಆಯಾಯಾ ಬೂಸ್ಟರ್ ಪಂಪ್‌ಗಳನ್ನು ಆಯಾಯಾ ಆಫೀಸ್‌ನವರು ಹೋಗಿ ನೋಡಬೇಕು. ಶ್ರೀಮಾನ್ ಚಿತ್ರಂಜನ್‌ದಾಸ್ ಅವರು ತೀರಿ ಹೋಗಿದ್ದಾರೆ. ನಾನು ಅವರನ್ನು ನೆನೆಪಿಸಿಕೊಳ್ಳುತ್ತೇನೆ. ಶ್ರೀಮಾನ್ ತ್ಯಾಗರಾಜ್‌ರವರು ಯುಗಾದಿ ಹಬ್ಬ ಬಂದರೆ ಹೊಸಹಳ್ಳಿ ಮಾಗಡಿ ರಸ್ತೆಯಲ್ಲಿ ಕುಳಿತುಕೊಳ್ಳುತ್ತಿದ್ದರು. ನಾವು ಕೆಂಪಾಪುರ ಅಗ್ರಹಾರವನ್ನು ಸುತ್ತಾಡಿದ್ದೇವೆ. ಇವತ್ತು ಆ ರೀತಿಯ ಸ್ಟೆಪ್ಪನ್ನು ಒಬ್ಬರೇ ಒಬ್ಬ ಅಧಿಕಾರಿಯೂ ತೆಗೆದುಕೊಳ್ಳಲು ಸಾಧ್ಯ ಇಲ್ಲವೇ ಇರುವಾಗ ನೀರು ಕೊಡಲು ಎಲ್ಲಿಂದ ಸಾಧ್ಯವಾಗುತ್ತದೆ ? ದಯವಿಟ್ಟು ನಾನು ಇವತ್ತು ಅಧಿಕಾರಿಗಳನ್ನು ಕೇಳಿ ಏನೂ ಪ್ರಯೋಜನವಾಗದೇ ಆ ವಾಲ್ವ್ ಮ್ಯಾನ್‌ಗೆ ಹೋಗಿ ನಮಸ್ಕಾರ ಹೊಡೆಯುವ ಪರಿಸ್ಥಿತಿ ಬಂದಿದೆ. ದಯವಿಟ್ಟು ಸರ್ಕಾರ ಇದಕ್ಕೆ ಏನಾದರೂ ಒಂದು ತಿಲಾಂಜಲಿಯನ್ನು ಹಾಕಬೇಕಾಗುತ್ತದೆ. ಬೆಂಗಳೂರು ನಗರಕ್ಕೆ ನನಗೆ ತಿಳಿದ ಮಟ್ಟಿಗೆ ಸಾಕಷ್ಟು ನೀರು ಬರುತಿದೆ. ಒಂದು ಕಣ್ಣಿಗೆ ಮೋಸ ಮಾಡುತ್ತಿದಾದರೆ ಮತ್ತೊಂದು ಕಣ್ಣಿಗೆ ವ್ಯವಸ್ಥೆ ಮಾಡುತ್ತಿದ್ದಾರೆ. ಇದನ್ನು ಸನ್ಮಾನ್ಯ ಮುಖ್ಯ ಮಂತ್ರಿಗಳು ಗಮನ ಹರಿಸಿ ಕೆಲಸ ಮಾಡಿಕೊಡಬೇಕು ಮತ್ತು ಬೋರ್‌ವೆಲ್‌ಗಳನ್ನು ಹಾಕುವಾಗ ಸಬ್‌ಮರ್ಸಿಬಲ್ ಪಂಪ್‌ಗಳನ್ನು ಹಾಕುವಾಗ ಎಲ್ಲೆಲ್ಲಿ ಆದ್ಯತೆ ಕೊಟ್ಟು ಹಾಕಬೇಕೋ ಅಲ್ಲಿ ಹಾಕಿ ಕೊಡಬೇಕು. ಬಡವರು ಹಾಗೂ ಕಡುಬಡವರು ನೀರು ಸ್ಟೋರೇಜ್ ಮಾಡುವುದಕ್ಕೆ ಆಗುವುದಿಲ್ಲ. ಆದ್ದರಿಂದ ಅವರಿಗೆ ನೀರು ಕೊಡುವ ಬಗ್ಗೆ ಹೆಚ್ಚು ಗಮನ ಹರಿಸಬೇಕೆಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀಮತಿ ಡಿ.ಜಿ.ಹೇಮಾವತಿ (ಶಾಂತಿನಗರ) :- ಮಾನ್ಯ ಅಧ್ಯಕ್ಷರೇ, ಶಾಂತಿನಗರ ಕ್ಷೇತ್ರದಲ್ಲಿ ಬಹಳಷ್ಟು ನೀರಿನ ತೊಂದರೆ ಇದೆ. ನನ್ನ ಕ್ಷೇತ್ರದಲ್ಲಿ

ಕೆ.ಎಸ್.ಆರ್.ಟಿ.ಸಿ.ಕ್ವಾರ್ಟರ್ಸ್ ಪೋಲೀಸ್ ಕ್ವಾರ್ಟರ್ಸ್ ಜೋಗಪಾಳ್ಯ ಪೋಲೀಸ್ ಕ್ವಾರ್ಟರ್ಸ್‌ನಲ್ಲಿರುವ ಜನ ದಿನ ನಮ್ಮ ಮನೆಗೆ ಬರುತ್ತಾರೆ. ಏನಮ್ಮ, ಒಂದು ದಿನ ನೀರು ಬರಲಿಲ್ಲ ಅಂದರೆ ಪರವಾಗಿಲ್ಲ, ಎರಡು ದಿನ ನೀರು ಬಂದರೂ ಪರವರಗಿಲ್ಲ; ನಮಗೆ ವಾರಗಟ್ಟಲೇ ನೀರು ಬರುವುದಿಲ್ಲ , ನಾವು 4ನೇ ಮಹಡಿಗೆ ನೀರು ತೆಗೆದುಕೊಂಡು ಹೋಗಬೇಕು ನಮಗೆ ಬಹಳ ಕಷ್ಟವಾಗುತ್ತಿದೆ ಎಂದು ನನ್ನಲ್ಲಿ ದೂರು ಮಾಡುತ್ತಾರೆ. ನನ್ನ ಮನೆಯಲ್ಲಿ ಏನೋ ನೀರು ಸುಮಾರಾಗಿ ಬರುತ್ತದೆ. ಆದರೆ ಕೆಲವು ಭಾಗಗಳಾದ ಆಸ್ಟಿನ್ ಟೌನ್, ವಿವೇಕನಗರ, ಅಶೋಕನಗರ, ಈ ಕಡೆಗಳಲ್ಲಿ ಬಹಳ ತೊಂದರೆ ಇದೆ. ಈ ಬಗ್ಗೆ ಸರ್ಕಾರ ಗಮನ ಹರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ (ಚಾಮರಾಜನಗರ) :- ಮಾನ್ಯ ಅಧ್ಯಕ್ಷರೇ, ನಾವು ಕುಡಿಯುವ ನೀರಿನ ಬಗ್ಗೆ ಹತ್ತಾರು ವರ್ಷ ಹೋರಾಟ ಮಾಡಿದ್ದೇವೆ ಬೆಂಗಳೂರು ನಗರದಲ್ಲಿ. ಬೆಂಗಳೂರು ಎಷ್ಟು ಬೆಳೆಯುತ್ತಿದೆ ಎನ್ನುವ ಬಗ್ಗೆ ಸರ್ಕಾರಕ್ಕೆ ಒಂದು ನಿರ್ಧಾರ ಇರಬೇಕು. ಈಗಿನ ಲೆಕ್ಕದ ಪ್ರಕಾರ ಸುಮಾರು 50 ಲಕ್ಷ ಜನ ಬೆಂಗಳೂರು ನಗರದಲ್ಲಿದ್ದಾರೆ. ಇದರ ಜೊತೆಗೆ ಇನ್ನು 5- 10 ವರ್ಷಗಳಲ್ಲಿ ಸುಮಾರು ಒಂದು ಕೋಟಿ ಜನ ಆಗುತ್ತಾರೆ. ಬೆಂಗಳೂರು ಸುತ್ತಮುತ್ತ ಇರತಕ್ಕಂಥ ಹೊಸಕೋಟೆ ಆನೇಕಲ್ ಈ ತಾಲ್ಲೂಕುಗಳು ಬೆಂಗಳೂರಿಗೆ ಈಗಾಗಲೇ ಸೇರಿವೆ. ಇದರ ಜೊತೆಗೆ ರೆವಿನ್ಯೂ ನಿವೇಶನಗಳಲ್ಲಿ ಕಟ್ಟಿರತಕ್ಕಂಥ ಲಕ್ಷಾಂತರ ಮನೆಗಳು. ಈಗ ಒಂದನೇ ಹಂತ, ಎರಡನೇ ಹಂತ, ಮೂರನೇ ಹಂತ ಮುಗಿದಿದೆ. ನಾಲ್ಕನೆ ಪ್ರಾರಂಭ ಅಲ್ಲ, ಇನ್ನೂ ಹತ್ತನೇ ಹಂತ ಪ್ರಾರಂಭ ಆದರೂ ನೀರು ಸಮರ್ಪಕವಾಗಿ ಕೊಡುವಂತಹ ವ್ಯವಸ್ಥೆ ಆಗಲಾರದೇನೋ ಎನ್ನುವಂತಹ ಭಯ ಬರುತ್ತಿದೆ. ಬೆಂಗಳೂರು ನಗರದ ಜನಸಂಖ್ಯೆಯನ್ನು ತಡೆಯುವಂಥ ವ್ಯವಸ್ಥೆ ಪರಿಣಾಮಕಾರಿಯಾಗಿ ಆಗಬೇಕಾದುದು ಅತಿ ಮುಖ್ಯ. ಇದರ ಜೊತೆಗೆ ಕುಡಿಯುವ ನೀರಿನ ವ್ಯವಸ್ಥೆಯನ್ನು ಸಮಗ್ರವಾಗಿ ಚಿಂತನೆ ಮಾಡಿ ಒಂದು ಪರಿಣಾಮಕಾರಿಯಾದ ಯೋಜನೆಯ ಮೂಲಕ ಕುಡಿಯುವ ನೀರಿನ ವ್ಯವಸ್ಥೆಯನ್ನು ನಾವು ಮಾಡಲೇಬೇಕಾಗಿದೆ. ಅದು ಆಗಲಿಲ್ಲ ಎಂದು ಹೇಳಿದರೆ ಇವತ್ತಿನ ನೀರಿನ ಬರ ಇನ್ನು ಬರುವ 5 ವರ್ಷಗಳಲ್ಲಿ ಇದಕ್ಕಿಂತ ಹೆಚ್ಚು ಪ್ರಮಾಣದಲ್ಲಿ ಪ್ರಾರಂಭವಾಗುತ್ತದೆ. ಇವತ್ತು ಏನೋ ಸ್ವಲ್ಪ ಮಾತುಕತೆಯಲ್ಲಿ ತಡೆದುಕೊಳ್ಳಬಹುದು. ಆಗ ಜನ ರಸ್ತೆಗೆ ಬರುತ್ತಾರೆ. ಪರಿಣಾಮಕಾರಿಯಾದಂತಹ ಹೋರಾಟ ಶುರು ಮಾಡುತ್ತಾರೆ; ತೊಂದರೆಗೆ ಸಿಗತಕ್ಕಂಥ ಪರಿಸ್ಥಿತಿ ನಿರ್ಮಾಣ ಆಗುತ್ತದೆ. ಇದರ ಜೊತೆಯಲ್ಲಿ ಬೆಂಗಳೂರಿನಲ್ಲಿ ನೀರನ್ನು ಮಾರಾಟ ಮಾಡುತ್ತಿದ್ದಾರೆ. ಒಂದು ದಿವಸದಲ್ಲಿ ಸುಮಾರು ಒಂದು ಸಾವಿರ ಲಾರಿಗಳ ನೀರನ್ನು ಮಾರಾಟ ಮಾಡುತ್ತಾರೆ ಎಂದು ನಾನು ಅಂದುಕೊಂಡಿದ್ದೇನೆ. ಈ ನೀರು ಎಲ್ಲಿಂದ ಸಿಗುತ್ತದೆ. ಎಲ್ಲಿ ಕೊಳವೆ ಬಾವಿಗಳನ್ನು ತೆಗೆದು ನೀರು ಜಾಸ್ತಿ ಬಂದಿದೆ ಅಲ್ಲಿ ನೀರು ಹೆಚ್ಚು ಸಿಗುತ್ತದೆ. ನಾನೇನು ತಮಗೆ ಸಲಹೆ ಕೊಡುವುದು ತಮಗೆ ಅಂದರೆ ಆ ನೀರು ಸಹ ಜಲಮಂಡಲಿ ನೀರು ಎಂದು ತೀರ್ಮಾನ ಮಾಡಬೇಕು. ಆ ನೀರು ಜಲಮಂಡಲಿಯ ಸ್ವತ್ತು ಅವರ ಮನೆಗೆ ಎಷ್ಟು ನೀರು ಬೇಕೋ ಅಷ್ಟು ನೀರು ಇಟ್ಟುಕೊಳ್ಳಲಿ. ಅವರು ಪ್ರತಿದಿನ 50 ಲಾರಿ ನೂರು ಲಾರಿ ನೀರು ಮಾರಾಟ ಮಾಡುತ್ತಿದ್ದರೆ ಒಂದು ಲಾರಿಗೆ 2 ಸಾವಿರ ಮೂರು ಸಾವಿರ ಮಾರುವ ವ್ಯವಸ್ಥೆ ಆದರೆ

ಅದನ್ನು ತಡೆಯುವಂತಹ ವ್ಯವಸ್ಥೆ ಈಗ ಸಧ್ಯಕ್ಕೆ ಜಲ ಮಂಡಲಿಗೆ ಇಲ್ಲ. ಯಾರು ಬೇಕಾದರೂ ಧಾರಾಳವಾಗಿ ಮಾರಾಟ ಮಾಡಬಹುದು. ಮತ್ತು ಆ ನೀರು ಪರಿಶುದ್ಧವೇ ಇಲ್ಲವೇ ಎಂಬುದನ್ನೂ ಯಾರೂ ನೋಡುವುದಿಲ್ಲ. ಇದು ಒಂದು ಬಹಳ ಪರಿಣಾಮಕಾರಿಯಾಗಿ ಸರ್ಕಾರ ಮಾಡಬೇಕಾದಂತಹ ಕೆಲಸ. ಈ ಪರಿಸ್ಥಿತಿ ಇರುವುದರಿಂದ ನಾನು ಸರ್ಕಾರಕ್ಕೆ ಒಂದು ಸಲಹೆ ಮಾಡುತ್ತೇನೆ. ಬೆಂಗಳೂರು ನಗರದ ನೀರು ಸರಬರಾಜು ವ್ಯವಸ್ಥೆ ನೋಡಿಕೊಳ್ಳುವುದಕ್ಕಾಗಿ, ಬೆಂಗಳೂರು ನಗರದ ಎಲ್ಲಾ ಶಾಸಕರುಗಳನ್ನೊಳಗೊಂಡಂತೆ ಒಂದು ಸಲಹಾ ಮಂಡಳಿಯನ್ನು ರಚನೆ ಮಾಡುವುದರ ಜೊತೆಗೆ ಕ್ಷೇತ್ರಾವಾರು ಸಹ ಒಂದೊಂದು ಉಪ ಸಲಹಾ ಮಂಡಳಿಯನ್ನು ರಚನೆ ಮಾಡಿ ಪ್ರತಿ ಕ್ಷೇತ್ರದಲ್ಲೂ ಜನರಿಗೆ ಧಾರಾಳವಾಗಿ ನೀರು ಕೊಡತಕ್ಕಂತಹ ನೀತಿಯನ್ನು ಮಾನ್ಯ ಮುಖ್ಯ ಮಂತ್ರಿಗಳು ಮಾಡಬೇಕೆಂದು ತಮ್ಮ ಮೂಲಕ ಕಳಕಳಿಯಿಂದ ಮನವಿ ಮಾಡುತ್ತೇನೆ.

ಶ್ರೀ ಕೆ.ಎನ್.ನಾಗೇಗೌಡ (ಕಿರುಗಾವಲು) :- ಮಾನ್ಯ ಅಧ್ಯಕ್ಷರೇ, ಬೆಂಗಳೂರು ನಗರದ ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಈಗಾಗಲೇ ಸಾಕಷ್ಟು ಪ್ರಸ್ತಾಪ ಮಾಡಲಾಗಿದೆ. ಈಗ ನಾನು ಸರ್ಕಾರದ ಗಮನಕ್ಕೆ ತರುವುದೇನೆಂದರೆ, ಬೆಂಗಳೂರು ನಗರಕ್ಕೆ ಕುಡಿಯುವ ನೀರನ್ನು ತೊರೆಕಾಡನಹಳ್ಳಿಯಿಂದ ತರಲಾಗುತ್ತಿದೆ. ಇದು ಮಾನ್ಯ ಸದಸ್ಯರಾದ ಸೋಮಶೇಖರ್‌ರವರ ಕ್ಷೇತ್ರಕ್ಕೆ ಸೇರುತ್ತದೆ. ಕಾವೇರಿ ನೀರನ್ನು ಬೆಂಗಳೂರು ನಗರಕ್ಕೆ ತರುವ ಯೋಜನೆ ಹಾಕಿಕೊಳ್ಳುವ ಸಂದರ್ಭದಲ್ಲಿ ಅಂದಿನ ಮುಖ್ಯ ಮಂತ್ರಿಗಳು ಆ ಕ್ಷೇತ್ರದ ಶಾಸಕರಾಗಿದ್ದ ಮಾನ್ಯ ಮಲ್ಲಿಕಾರ್ಜುನ ಸ್ವಾಮಿಯವರೊಂದಿಗೆ ಒಂದು ಒಪ್ಪಂದ ಮಾಡಿಕೊಳ್ಳಲಾಗಿತ್ತು. ಅದೇನೆಂದರೆ, ಈ ನೀರು ಸರಬರಾಜು ಯೋಜನೆಯಿಂದ ಸರ್ಕಾರವು ವಶಪಡಿಸಿಕೊಳ್ಳುವ ಜಮೀನಿಗೆ ಬದಲಾಗಿ ಸಂಬಂಧಪಟ್ಟವರ ಕುಟುಂಬದವರಿಗೆ ಸರ್ಕಾರದಲ್ಲಿ ಕೆಲಸ ಕೊಡುತ್ತೇವೆ ಹಾಗೂ ಪೈಪ್ ಹಾದು ಬರುವ ಪಕ್ಕದ ಊರುಗಳಿಗೆ ಕುಡಿಯುವ ನೀರು ಒದಗಿಸಿ ಕೊಡುತ್ತೇವೆಂದು ಹೇಳಿದ್ದರು. ನಮ್ಮ ಶಿಂಷಾ ನದಿ ನೀರಿನಿಂದ ಉತ್ಪಾದಿಸುವ ವಿದ್ಯುತನ್ನು ಬ್ಲಫ್‌ನಿಂದ ಕೊಡುತ್ತೇವೆ. ಆದರೆ ನಮಗೇ ಕುಡಿಯಲು ನೀರಿಲ್ಲ. ಮಳವಳ್ಳಿ, ಭಾರತೀನಗರ, ಅಲಗೂರು, ಕನಕಜಪುರಕ್ಕೆ, ರಾಮನಗರ ಟೌನ್‌ಗಳಿಗೆ ಮೊದಲು ನೀರು ಕೊಡುವಂಥ ವ್ಯವಸ್ಥೆಯಾಗಬೇಕು. ಮಾನ್ಯ ಸಿಂಧ್ಯಾರವರು ಆ ಕಡೆ ಸದಸ್ಯರಾಗಿದ್ದಾಗ ನಮ್ಮ ಕಡೆ ಊರುಗಳಿಗೆ ಕುಡಿಯುವ ನೀರು ಕೊಡಬೇಕೆಂದು ಜೋರಾಗಿ ಹೇಳಿದ್ದರು. ಮಳವಳ್ಳಿ ಟೌನ್‌ಗೆ ಒಂದು ಪ್ರಾಜೆಕ್ಟ್ ಮಾಡಿದ್ದೀರಿ. ಅದಕ್ಕೆ ಹಣ ಬಿಡುಗಡೆ ಮಾಡಬೇಕು. ಭಾರತೀನಗರ, ಅಲಗೂರುಗಳ ಮುಂಭಾಗದಲ್ಲಿ ದೊಡ್ಡ ದೊಡ್ಡ ಪೈಪ್‌ಗಳಲ್ಲಿ ನೀರು ಬೆಂಗಳೂರು ನಗರಕ್ಕೆ ಸರಬರಾಜು ಆಗುತ್ತಿದ್ದರೂ ಅವರಿಗೆ ಕುಡಿಯಲೂ ನೀರಿಲ್ಲದೇ ಇರುವುದರಿಂದ ಅದರ ಬಗ್ಗೆ ಕೂಡಲೇ ಗಮನ ಹರಿಸಿ ಆ ಊರುಗಳ ಜನರಿಗೆ ಕುಡಿಯುವ ನೀರು ಕೊಡುವಂಥ ವ್ಯವಸ್ಥೆ ಮಾಡಬೇಕು. ಇದು ಬಹಳ ಸೀರಿಯಸ್ ವಿಚಾರ. ಬಹಳ ವರ್ಷಗಳಿಂದ ಅದನ್ನು ಮಾಡುತ್ತಾರೆಂಬ ನಂಬಿಕೆ ಇತ್ತು. ಈಗ ಮಾನ್ಯ ಮುಖ್ಯ ಮಂತ್ರಿಗಳು ಈ ಕೆಲಸವನ್ನು ಮಾಡಿಕೊಡುತ್ತಾರೆಂಬ ಸಂಪೂರ್ಣ ನಂಬಿಕೆ ನಮಗಿದೆ.

ಶ್ರೀ ಬಿ.ಸೋಮಶೇಖರ್ (ಮಳವಳ್ಳಿ) :- ಮಾನ್ಯ ಅಧ್ಯಕ್ಷರೇ, ತೊರೆಕಾಡನಹಳ್ಳಿಯಿಂದ ಬೆಂಗಳೂರು ನಗರಕ್ಕೆ ನೀರು ಸರಬರಾಜು ಮಾಡಲಾಗುತ್ತಿದೆ. ನೀರು ಸರಬರಾಜು ಪೈಪ್‌ಗಳನ್ನು ಹಾಕಿರುವ ಮಾರ್ಗಗಳಲ್ಲಿ ಯಾವ ಯಾವ ಗ್ರಾಮಗಳು, ಪಟ್ಟಣಗಳು ಬರುತ್ತವೋ ಅವುಗಳಿಗೆ ಕುಡಿಯುವ ನೀರನ್ನು ಒದಗಿಸುವುದು ಸೂಕ್ತವೆಂದು ಕಾಣಿಸುತ್ತದೆ. ಕಾವೇರಿ ನೀರಿನ ಸರಬರಾಜಿನ 4ನೇ ಹಂತದ ಕಾರ್ಯವನ್ನು ಮಾಡುತ್ತಿರುವುದರಿಂದ ಈ ಸಂದರ್ಭದಲ್ಲಾದರೂ ಸಂಬಂಧಪಟ್ಟ ಗ್ರಾಮ ಮತ್ತು ಪಟ್ಟಣಗಳಿಗೆ ಕುಡಿಯುವ ನೀರು ಕೊಡುವಂಥ ಕಾರ್ಯಕ್ರಮವನ್ನು ಸೇರಿಸಿಕೊಳ್ಳುವುದು ಸೂಕ್ತವೆಂದು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಶ್ರೀ ಹೆಚ್.ಡಿ.ದೇವೇಗೌಡ (ಮುಖ್ಯ ಮಂತ್ರಿಗಳು):- ಮಾನ್ಯ ಅಧ್ಯಕ್ಷರೇ, ಹಿರಿಯ ಸದಸ್ಯರಾದ ನಂಜೇಗೌಡರು ಹಾಗೂ ಸುರೇಶ್ ಕುಮಾರ್‌ರವರು, ಶ್ರೀಮತಿ ಪ್ರಮೀಳಾರವರು ತಂದಂಥ ಈ ಒಂದು ವಿಶೇಷ ಚರ್ಚೆಯಲ್ಲಿ ಬೆಂಗಳೂರು ನಗರದ ವ್ಯಾಪ್ತಿಯಲ್ಲಿ ಬರತಕ್ಕಂಥ ಗೌರವಾನ್ವಿತ ಸದಸ್ಯರುಗಳೂ ಸಹ ಭಾಗವಹಿಸಿ ಹಲವಾರು ಸಲಹೆ ಸೂಚನೆಗಳನ್ನು ಕೊಟ್ಟಿರುವುದರಿಂದ ನಾನು ಅವರಿಗೆ ಅಭಾರಿಯಾಗಿದ್ದೇನೆ. ಈ ಒಂದು ಸಮಸ್ಯೆಯ ಬಗ್ಗೆ ಯಾವುದೇ ರೀತಿಯಾದಂಥ ಅಸಡ್ಡೆ ಅಥವಾ ಅನಾದಾರಣೆಯನ್ನು ಸರ್ಕಾರ ಹೊಂದಿ ಕರ್ತವ್ಯಲೋಪ ಮಾಡಲಾಗಿದೆ ಎಂದು ಯಾರೂ ಭಾವಿಸಬೇಕಾದ್ದಿಲ್ಲ. ಈ ಸಮಸ್ಯೆಗೆ ತಾತ್ಕಾಲಿಕ ಪರಿಹಾರದ ಬದಲು ಶಾಶ್ವತವಾದ ಪರಿಹಾರವನ್ನು ಕಂಡು ಹಿಡಿಯಬೇಕೆಂದು ಮಾನ್ಯ ಸದಸ್ಯರಾದ ನಂಜೇಗೌಡರು ಹೇಳಿದ್ದಾರೆ; ಆಮೇಲೆ, 2 ಸಾವಿರ ಇಸವಿಯ ಒಳಗೆ ಬೆಂಗಳೂರು ನಗರದಲ್ಲಿ ಜನಸಂಖ್ಯೆಯ ಪ್ರಮಾಣ ಸುಮಾರು 1 ಕೋಟಿಗೂ ಮೀರಬಹುದೆಂದು ಮಾನ್ಯ ವಾಟಾಳ್ ನಾಗರಾಜ್‌ರವರು ಹೇಳಿದ್ದಾರೆ. ನಿಜ. ಇಡೀ ರಾಷ್ಟ್ರದಲ್ಲಿ ಅತ್ಯಂತ ವೇಗವಾಗಿ ಬೆಳೆಯುತ್ತಿರತಕ್ಕಂಥ ನಗರ ಎಂದರೆ ಬೆಂಗಳೂರು. ಬೇರೆ ಎಲ್ಲಾ ನಗರಗಳಿಗೆ ಹೋಲಿಸಿಕೊಂಡಾಗ ಬೆಂಗಳೂರು, ಬಹಳ ವೇಗವಾಗಿ ಬೆಳೆಯುತ್ತಿರತಕ್ಕಂಥ ನಗರವೆಂದು ಅಂಕಿ ಅಂಶಗಳಿಂದ ಸಾಬೀತಾಗಿರುತ್ತದೆ. ಅದರಿಂದಾಗಿ, ಇವತ್ತು ಈ ನಗರಕ್ಕೆ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸತಕ್ಕಂಥ ಜವಾಬ್ದಾರಿ ಸರ್ಕಾರದ ಮೇಲಿದೆ. ಇದರ ಬಗ್ಗೆ ಯಾರೇ ಅಧಿಕಾರಿ ನಡೆಸಲಿ ಆ ಕೆಲಸವನ್ನು ಮಾಡಬೇಕಾಗುತ್ತದೆ. ಈಗ್ಗೆ ಸುಮಾರು ಎರಡು ತಿಂಗಳ ಹಿಂದೆ, ಬೆಂಗಳೂರು ಮಹಾ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರತಕ್ಕಂಥ ಎಲ್ಲಾ ಗೌರವಾನ್ವಿತ ಸದಸ್ಯರುಗಳನ್ನು ಕರೆಯಿಸಿ ಮತ್ತು ಅಧಿಕಾರಿಗಳನ್ನೂ ಕರೆಯಿಸಿ ಜೊತೆಯಲ್ಲಿ ಸಮಾಲೋಚನೆ ಮಾಡಿ ಕೆಲವು ನಿರ್ಣಯಗಳನ್ನು ತೆಗೆದುಕೊಳ್ಳತಕ್ಕಂಥ ಪ್ರಯತ್ನ ಮಾಡಿದ್ದೇನೆ. ಆದರೆ, ಅದರಲ್ಲಿ ಪೂರ್ಣ ಸಫಲತೆ ಆಗಿಲ್ಲವೆಂದು ನಾನು ಒಪ್ಪಿಕೊಳ್ಳುತ್ತೇನೆ; ಇದಕ್ಕೆ ಒಂದಲ್ಲ ಒಂದು ಕಾರಣ ಇರಬಹುದು. ಮೊನ್ನೆ ಈ ಸದನದಲ್ಲಿ ಈ ವಿಷಯ ಪ್ರಸ್ತಾಪ ಮಾಡಿದಾಗ ಇದರಲ್ಲಿ ಸ್ವಲ್ಪ ಮಟ್ಟಿಗೆ ಸುದಾರಣೆಯಾಗಿದೆ ಎಂದು ನಾನು ಹೇಳಿದ್ದೆ. ಬೆಂಗಳೂರು ನಗರಕ್ಕೆ ನೀರು ಸರಬರಾಜು ಆಗುತ್ತಿರುವ ಬಗ್ಗೆ 4-5 ದಿವಸಗಳಿಂದ ಲೆಕ್ಕ ತೆಗೆದರೆ ಮೊದಲು ಪ್ರತಿ ದಿನ 200 ರಿಂದ 575 ಮಿಲಿಯನ್ ಗ್ಯಾಲನ್ ನೀರು ಬರುತ್ತಿದ್ದರೆ ಈಗ ಅದು 420

ರಿಂದ 490 ಮಿಲಿಯನ್ ಗ್ಯಾಲನ್‌ಗೆ ಇಳಿದಿದೆ. ಅದಕ್ಕೆ ಕಾರಣ, ಸನ್ಮಾನ್ಯ ನಂಜೇಗೌಡರು ಹೇಳಿದ ಹಾಗೆ ಈ ಅನಿಶ್ಚಿತ ವಿದ್ಯುಚ್ಛಕ್ತಿಯ ಸರಬರಾಜಿನ ಹಿನ್ನಲೆಯಲ್ಲಿ ಇವತ್ತು ನಾವು ಸಾಕಷ್ಟು ಈ ಸಮಸ್ಯೆಯನ್ನು ಎದುರಿಸಬೇಕಾಗಿದೆ. ಆ ಕಾರಣದಿಂದ ಈ ಸಮಸ್ಯೆಯನ್ನು ತಾತ್ಕಾಲಿಕವಾಗಿಯಾದರೂ ಬಗೆಹರಿಸುವುದಕ್ಕೋಸ್ಕರ ಹೆಚ್.ಯು.ಡಿ. ಸೆಕ್ರೆಟರಿಯವರ ನೇತೃತ್ವದಲ್ಲಿ ಜಲ ಮಂಡಳಿ ಮತ್ತು ಕಾರ್ಪೊರೇಷನ್ ಅಧಿಕಾರಿಗಳು ಒಂದುಗೂಡಿ ಕೆಲಸ ಮಾಡಬೇಕೆಂದು ಒಂದು ನಿರ್ಣಯ ತೆಗೆದುಕೊಂಡಿದ್ದೇನೆಂದು ನಾನು ಈ ಸದನದ ಗಮನಕ್ಕೆ ತರಲಿಚ್ಛಿಸುತ್ತೇನೆ. ಇದಕ್ಕೆ ಸಂಬಂಧಪಟ್ಟಂಥ ಕೆಲಸಗಳಿಗೆ ಹಣವನ್ನು ಬಿಡುಗಡೆ ಮಾಡುವುದಕ್ಕೆ ಸರ್ಕಾರ ಹಿಂದು ಮುಂದು ನೋಡುವುದಿಲ್ಲ. ನಾವು ಯಾವುದೇ ಅಭಿವೃದ್ಧಿಯ ವೇಗವನ್ನು ಕುಂಠಿತ ಮಾಡಿದರೂ, ಕುಡಿಯುವ ನೀರಿನ ಸಮಸ್ಯೆಯು ಬಂದಾಗ ಯಾವುದೇ ಕಾರಣದಿಂದಲೂ ಅದಕ್ಕೆ ಅಸಡ್ಡೆ ತೋರಿಸುವುದಕ್ಕೆ ಆಗುವುದಿಲ್ಲ. ಇದಕ್ಕಾಗಿ ಐದು ಕೋಟಿ ರೂಪಾಯಿಗಳನ್ನು ಈಗ ಒಂದು ವಾರದಲ್ಲಿ ಬಿಡುಗಡೆ ಮಾಡಿದ್ದೇವೆ. ಅಷ್ಟೇ ಅಲ್ಲ ಸುಮಾರು 80 ಲಕ್ಷ ರೂಪಾಯಿಗಳನ್ನು ಕೂಡ ಬಿಡುಗಡೆ ಮಾಡಿದ್ದೇವೆ. ಒಂದು ಕೋಟಿ ರೂಪಾಯಿಗಳನ್ನು ಎಮರ್ಜೆನ್ಸಿಗಾಗಿ ಉಪಯೋಗಿಸಲು ಬಿಡುಗಡೆ ಮಾಡಿದ್ದು, ಪದೇ ಪದೇ ಸರಕಾರದ ಹತ್ತಿರ ಈ ಕಾರಣಕ್ಕಾಗಿ ಬರಬಾರದೆಂಬ ದೃಷ್ಟಿಯಿಂದ ಹಣವನ್ನು ಬಿಡುಗಡೆ ಮಾಡಿದ್ದೇವೆ. ಹೀಗೆ ಬೆಂಗಳೂರು ನಗರಕ್ಕೆ ಐದು ಕೋಟಿ ರೂಪಾಯಿಗಳನ್ನು ಹಾಗೂ ಇಡೀ ರಾಜ್ಯಕ್ಕೆ ಕುಡಿಯುವ ನೀರಿಗಾಗಿ ಬಿಡುಗಡೆ ಮಾಡಿದ್ದೇವೆ. ಈ ಹಣ ಎಲ್ಲಾ ಖರ್ಚಾಗಿದೆ ಎಂಬ ವಾದವನ್ನು ನಾನು ಮಾಡುವುದಿಲ್ಲಲ, ಹಣ ಇದೆ. ಸಮಸ್ಯೆಗಳೂ ಇವೆ. ತಾತ್ಕಾಲಿಕವಾಗಿ ನಮ್ಮ ಕೈಯಲ್ಲಿ ಏನು ಮಾಡಬಹುದೋ ಅದನ್ನು ಮಾಡುತ್ತಾ ಇದ್ದೇವೆ. ಕೆಲವು ಕಡೆಗಳಲ್ಲಿ ಬೋರ್‌ವೆಲ್‌ಗಳನ್ನು ಹಾಕಿಸುವುದು, ಕೆಲವು ಕಡೆಗಳಲ್ಲಿ ಡೀಸೆಲ್ ಮೋಟಾರ್ ಇತ್ಯಾದಿಗಳನ್ನು ಫಿಕ್ಸ್ ಮಾಡಿ ನೀರು ಒದಗಿಸುವುದಕ್ಕೆ ಪ್ರಯತ್ನ ಮಾಡಬಹುದು. ಇನ್ನು ಕೆಲವು ಕಡೆಗಳಲ್ಲಿ ಟ್ಯಾಂಕರ್ಸ್ ಮೂಲಕ ಜನರಿಗೆ ನೀರು ಕೊಡಬೇಕೆಂಬುದನ್ನು ನಿರ್ಣಯ ಮಾಡಿ, ಸುಮಾರು 36 ಟ್ಯಾಂಕರ್‌ಗಳ ಮೂಲಕ ವಿವಿಧ ಭಾಗಗಳಿಗೆ ನೀರನ್ನು ಒದಗಿಸುತ್ತಾ ಇದ್ದೇವೆ. ಹೀಗೆ ನಮ್ಮ ಕಡೆಯಿಂದಾದ ಎಲ್ಲಾ ಪ್ರಯತ್ನಗಳನ್ನು ಮಾಡುತ್ತಿದ್ದೇವೆ, ಇದನ್ನು ಉತ್ಪ್ರೇಕ್ಷೆ ಮಾಡಿ ಹೇಳಬೇಕಾಗಿಲ್ಲ. ಪ್ರತಿನಿತ್ಯ ಈ ಲಾರಿಗಳು ಓಡುತ್ತಾ ಇದ್ದು ನೀರು ಸರಬರಾಜು ಮಾಡುತ್ತಿವೆ. ಇವುಗಳ ಉಸ್ತುವಾರಿಯನ್ನು ನಮ್ಮ ಹಿರಿಯ ಅಧಿಕಾರಿಗಳು ಸೂಕ್ತ ರೀತಿಯಲ್ಲಿ ನೋಡಿಕೊಳ್ಳುತ್ತಿದ್ದಾರೆ. ಈ ಕುರಿತು ಏನೇ ತೊಂದರೆ ಇದ್ದರೂ ಕೂಡ ನಮ್ಮ ಶಕ್ತಿ ಮೀರಿ ಕೆಲಸ ಮಾಡೋಣ. ಆದರೂ ಕೂಡ ಸಮಸ್ಯೆಯು ಉಲ್ಬಣಗೊಳ್ಳುತ್ತಿದೆ. ಅದರ ಬಗ್ಗೆ ನಾನು ಎಲ್ಲಾ ಸುಗಮವಾಗಿದೆ, ಯಾವುದು ಸಮಸ್ಯೆ ಇಲ್ಲ ಎಂದು ಹೇಳುವುದಕ್ಕೆ ಸಿದ್ಧನಾಗಿಲ್ಲ. ತಮಗೆ ಒಂದು ಭರವಸೆಯನ್ನು ಈ ಸದನದಲ್ಲಿ ಕೊಡಬಯಸುತ್ತೇನೆ. 31ನೇ ತಾರೀಖಿನೊಳಗಡೆ ಬೆಂಗಳೂರು ನಗರಕ್ಕೆ ನೀರು ಸರಬರಾಜು ಮಾಡುವುದಕೆಡಕ ಎಷ್ಟು ವಿದ್ಯುಚ್ಛಕ್ತಿ ಪೂರೈಕೆ ಮಾಡಬೇಕಾಗಿದೆಯೋ ಅದನ್ನು ಯಾವುದೇ ರೂಪದಿಂದಾಗಲೀ, ಯಾವುದೇ ಮೂಲದಿಂದಾಗಲೀ, ನಿರಾತಂಕವಾಗಿ ಒದಗಿಸಿಕೊಡುವುದಕ್ಕಾಗಿ, ಆ ಒಂದು ಭರವಸೆಯನ್ನು ವಿದ್ಯುಚ್ಛಕ್ತಿ ಮಂಡಳಿಯವರು

ಒಪ್ಪಿಗೆಯ ಮೂಲಕ ಕೊಟ್ಟಿದ್ದಾರೆ. ಅವರು ನಮ್ಮ ಒಂದು ಷರತ್ತಿಗೆ ಒಪ್ಪಿಗೆಯನ್ನು ಕೊಟ್ಟಿರುವುದರಿಂದ ಆ ಭರವಸೆಯಿಂದ ತಮಗೆ ಈ ಮಾತನ್ನು ಹೇಳುತ್ತಿದ್ದೇನೆ. ಹೂಡಿಯಲ್ಲಿನ ವ್ಯವಸ್ಥೆಯು 31ನೇ ತಾರೀಖಿನಿಂದ ಫಂಕ್ಷನ್ ಮಾಡಲು ಪ್ರಾರಂಭವಾಗುತ್ತದೆ. ರಾಯಚೂರಿನ ನಾಲ್ಕನೇ ಘಟಕವು ಸಿದ್ಧವಾಗಿದ್ದು ಅದನ್ನು ಟ್ರಯಲ್ ರನ್ ಮಾಡಿದ್ದೇವೆ. ಹೂಡಿಯಿಂದ ಈ ಬಗ್ಗೆ ನಿರಾತಂಕವಾಗಿ ವಿದ್ಯುಚ್ಛಕ್ತಿಯು ಸರಬರಾಜು ಆಗುವುದಕ್ಕೆ ಯಾವುದೇ ಸಂಶಯ ಇಲ್ಲ, ಇದನ್ನು ಕುಡಿಯುವ ನೀರಿನ ಸಮಸ್ಯೆಯ ಬಗ್ಗೆ ಪೂರ್ಣ ಬಳಕೆ ಮಾಡಿಕೊಂಡ ಮೇಲೆ ಈ ಸಮಸ್ಯೆಯು ಇರಲಾರದು. ಆದರೂ ಇನ್ನೂ ಐದು ದಿವಸಗಳಿದ್ದು, ಈ ದಿವಸಗಳ ಕಾಲ ಕಷ್ಟವಾಗಬಹುದು. ಹಳ್ಳಿಗಳಲ್ಲಾದರೆ ತೋಟದ ಬಾವಿ ಇತ್ಯಾದಿಯಾಗಿ ಯಾವುದಾದರೂ ಒಂದು ಸೌಲಭ್ಯ ಇದ್ದೇ ಇರುತ್ತದೆ. ಇಲ್ಲಿ ಇಲ್ಲ. ನಗರ ಪ್ರದೇಶಗಳಲ್ಲಿ ಪರಿಸ್ಥಿತಿಯು ವಿಕೋಪಕ್ಕೆ ಹೋಗುತ್ತದೆ. ನಾನು ಈ ಬಗ್ಗೆ ಎಲ್ಲಾ ಕ್ರಮಗಳನ್ನು ತೆಗೆದುಕೊಂಡಿದ್ದೇನೆ. ನೀವು ನಂಬುತ್ತೀರೋ ಇಲ್ಲವೋ ಗೊತ್ತಿಲ್ಲ, ಲೋಕೋಪಯೋಗಿ ಇಲಾಖೆಯವರಿಗೆ, ನೀರಾವರಿ ಇಲಾಖೆಯವರಿಗೆ, ನಿಮ್ಮಲ್ಲಿ ಎಲ್ಲಿ ಟ್ಯಾಂಕರ್‌ಗಳು ಇವೆಯೋ, ಯಾವ ಕಂಟ್ರಾಕ್ಟರ್ ಹತ್ತಿರ ಇದೆಯೋ ಅವುಗಳೆಲ್ಲವನ್ನೂ ವಾಪಸ್ ತರಿಸಿ ಬೆಂಗಳೂರಿಗೆ ನೀರು ಸರಬರಾಜಿಗೆ ಉಪಯೋಗಿಸಿ ಎಂದು ಹೇಳಿದ್ದೇನೆ. ದುರಾದೃಷ್ಟಕ್ಕೆ ಅವರಿಂದ ಕೇವಲ ಎಂಟು ಲಾರಿಗಳು ಮಾತ್ರ ಬಂದಿವೆ. ಇಲ್ಲಿ ನಗರದಲ್ಲಿ 25 ಇರಬಹುದು, ಅದೇ ರೀತಿಯಲ್ಲಿ ಖಾಸಗಿಯವರಲ್ಲಿರುವ ಟ್ಯಾಂಕರ್‌ಗಳನ್ನು ಕೂಡ ನಾವು ಉಪಯೋಗಕ್ಕೆ ತೆಗೆದುಕೊಳ್ಳಬೇಕೆಂದು ಮಾಡಿದ್ದೇವೆ. ಅವರುಗಳು ನೀರಿನ ವ್ಯಾಪಾರವನ್ನು ಚೆನ್ನಾಗಿ ಮಾಡಿಕೊಂಡಿದ್ದಾರೆ. ಅವರು ದಿನಕ್ಕೆ 9- 10 ಲೋಡ್‌ಗಳನ್ನು ನೀರನ್ನು ಸರಬರಾಜು ಮಾಡುತ್ತಾ ಇದ್ದಾರೆ. ಅವರಿಂದ ನೀರನ್ನು ನಾವು ಕೊಂಡುಕೊಳ್ಳಬೇಕು. ಅದನ್ನು ಜನರಿಗೆ ಸರಬರಾಜು ಮಾಡಬೇಕೆಂದಿದ್ದೇವೆ. ಅನೇಕ ಎಕ್ ಟೆನ್ ಷನ್ ಏರಿಯಾದಲ್ಲಿರತಕ್ಕ ನತದೃಷ್ಟ ಜನರ ಪರಿಸ್ಥಿತಿಯನ್ನು ನೋಡಿದ್ದೇವೆ. ರೆವಿನ್ಯೂ, ನೋಟಿಫೈಡ್ ಏರಿಯಾ, ಮುಂತಾಗಿ ಎಲ್ಲಿ ಜಾಗ ಸಿಕ್ಕಿದೆಯೋ ಅಲ್ಲೆಲ್ಲಾ ಮನೆಗಳನ್ನು ಜನರು ಕಟ್ಟಿಕೊಂಡಿದ್ದಾರೆ. ಅವರುಗಳಿಗೆಲ್ಲಾ ನಾವು ನೀರನ್ನು ಕೊಡಬೇಕಾಗುತ್ತದೆ. ಅವರುಗಳನ್ನು ನೀವು ಕಾನೂನು ಬಾಹಿರವಾಗಿ ಮನೆಗಳನ್ನು ಕಟ್ಟಿಕೊಂಡಿದ್ದೀರಿ, ನಿಮಗೆ ನೀರು ಕೊಡುವುದಿಲ್ಲ ಎಂದಿತ್ಯಾದಿಯಾಗಿ ಹೇಳಲು ಬರುವುದಿಲ್ಲ. ಅವರು ಸರಕಾರವನ್ನು ಬೇರೆ ಬೇರೆ ಕಾರಣಗಳಿಗಾಗಿ ಟೀಕೆ ಮಾಡುತ್ತಿರುತ್ತಾರೆ. ಅದಕ್ಕೆ ನಾವು ಸ್ಪಂದಿಸಬೇಕಾಗುತ್ತದೆ. ನಾವು ಟೀಕೆಗಳನ್ನು ಕೇಳಿ ಬೇಸಿಪಡುವಂತಿಲ್ಲ; ನಾನು ಹಿಂದೆ ನೀರಾವರಿ ಮಂತ್ರಿಯಾಗಿದ್ದಾಗಿನ ಒಂದು ಅನುಭವವನ್ನು ಹೇಳುತ್ತೇನೆ. ಒಮ್ಮೆ ರೈತರುಗಳು ನಮ್ಮ ಅಧಿಕಾರಿಗಳನ್ನು ಬಹಳ ಕೆಟ್ಟ ಶಬ್ದಗಳಿಂದ ಟೀಕೆ ಮಾಡಿದರು. ನಾನು ಅಲ್ಲಿಯೇ ಕುಳಿತಿದ್ದೆ. ರೈತರುಗಳು ಎಷ್ಟು ಅನ್‌ಪಾರ್ಲಿಮೆಂಟರಿ ಶಬ್ದಗಳನ್ನು ಪ್ರಯೋಗ ಮಾಡಿದರು ಅಂದರೆ, ಅದನ್ನೂ ನನ್ನ ಸಮ್ಮುಖದಲ್ಲಿಯೇ ಮಾಡಿದರು. ಅದೆಲ್ಲಾ ಕೇಳಿದ ಮೇಲೆ ನಮ್ಮ ಚೀಫ್ ಇಂಜನೀಯರ್‌ಗೆ ರಜೆ ಹಾಕಿ ಮನೆಗೆ ಹೋಗಲು ಹೇಳಿ, ನೀವೇ ಇಲ್ಲಿನ ನೀರು ಸರಬರಾಜಿನ ವ್ಯವಸ್ಥೆಯನ್ನು ನೋಡಿಕೊಳ್ಳಿ, ಯಾರಾದರೂ ಏನಾದರೂ ಹೇಳಿದರೆ ನೀವೆ ಸುಧಾರಿಸಿಕೊಳ್ಳಿ ಎಂದು ಹೇಳಿ ಹೊರಟು ಹೋದೆವು. ಆಮೇಲೆ ಅವರೇ ಹೇಳಿದರು ನಾವು ಹೊಡೆದಾಡುವಾಗ ಹೊಡೆದಾಡುತ್ತೇವೆ. ಯಾರೋ ಏನೋ ಅಂದರು ಎಂದು

ನೀವು ಮನಸ್ಸು ಕೆಡಿಸಿಕೊಳ್ಳಬೇಡಿ ಎಂದರು. ನಾನು ಏತಕ್ಕೆ ಇದನ್ನು ಹೇಳಿದೆ ಅಂದರೆ, ನಾವು ನೋ ಟ್ಯಾಕ್ಸ್ ನೋ ಫೆಸಿಲಿಟೀಸ್ ಎಂದು ಹೇಳಬಹುದು. ಆದರೆ ಜನತೆಯ ಸಮಸ್ಯೆಯ ಗಾತ್ರವನ್ನು ನೋಡಿ ಅದನ್ನು ಎದುರಿಸತಕ್ಕಂಥ ಎಲ್ಲಾ ಪ್ರಯತ್ನಗಳನ್ನು ಜನತೆಯ ಸಹಕಾರದಿಂದ ಮಾಡಿದರೂ ಸಮಸ್ಯೆಯನ್ನು ಬಗೆಹರಿಸುವುದು ಕಷ್ಟವಾಗುತ್ತದೆ ಎಂಬ ಹಿನ್ನಲೆಯಲ್ಲಿ ಈ ಮಾತುಗಳನ್ನು ಹೇಳಿದೆ. ಹೀಗೆ ಬೆಂಗಳೂರಿನ ಕುಡಿಯುವ ನೀರಿನ ಸಮಸ್ಯೆಯು ಅಷ್ಟು ಸುಲಭವಾದುದು ಅಲ್ಲ, ಅದೊಂದೇ ಅಲ್ಲಧ ಇತರ ನಾಗರೀಕರ ಸೌಲಭ್ಯಗಳನ್ನು ಒದಗಿಸಿಕೊಡತಕ್ಕಂಥಾದ್ದು ಕೂಡ ಅಷ್ಟು ಸುಲಭವಲ್ಲ. ನಮ್ಮ ಸದನದಲ್ಲಿ ನಗರಪಾಲಿಕೆಯಲ್ಲಿ ಸೇವೆ ಸಲ್ಲಿಸಿದಂಥವರು ಕೂಡ ಸದಸ್ಯರಾಗಿದ್ದಾರೆ. ಅವರಿಗೆ ಎಲ್ಲಾ ವಿಚಾರಗಳು ಗೊತ್ತಿವೆ. ಅದರ ಬಗ್ಗ ನಾವು ಇಲ್ಲಿ ಚರ್ಚೆ ಮಾಡುವುದು ಬೇಡ. ಈ ವೇದಿಕೆಯನ್ನು ನಾನು ಅದಕ್ಕೆ ಬಳಕೆ ಮಾಡಿಕೊಳ್ಳುವುದಿಲ್ಲ. ಇಲ್ಲಿ ಟ್ಯಾಕ್ಸೇಷನ್ ಸಿಸ್ಟಂ ಯಾವ ರೀತಿಯಲ್ಲಿ ಇದೆ ಎಂಬುದನ್ನು ಇನ್ನೊಂದು ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರುತ್ತೇನೆ. ಏತಕ್ಕೆಂದರೆ ಹಲವಾರು ರೀತಿಯಾದಂಥ ಪ್ರಕರಣಗಳು ಜರುಗಿ ಹೋಗಿವೆ. ಆದ್ದರಿಂದ ಒಂದು ದಿನದಲ್ಲಿ ಇವುಗಳನ್ನೆಲ್ಲಾ ಸರಿಪಡಿಸುತ್ತೇವೆಂದು ಯಾರಾದರೂ ಹೇಳಿದರೆ ಅದು ಅಷ್ಟು ಸುಲಭಸಾಧ್ಯವಾದುದು ಅಲ್ಲ. ಒಂದು ಮಾತನ್ನು ಹೇಳುತ್ತೇನೆ, ಇನ್ನು 4-5 ದಿನಗಳ ಒಳಗೆ ಯಾವ ಅಧಿಕಾರಿಗೆ ನಾನು ಜವಾಬ್ಧಾರಿಯನ್ನು ಕೊಟ್ಟಿದ್ದೇನೋ, ಟ್ಯಾಂಕರ್‌ಗಳಿಂದ ನೀರನ್ನು ಒದಗಿಸುವಂಥ ಜವಾಬ್ಧಾರಿಯನ್ನು ಕೊಟ್ಟಿದ್ದೇನೋ ಅದನ್ನು ಅವರು ಸಮರ್ಪಕವಾಗಿ ನಿರ್ವಹಿಸುತ್ತಾರೆ. ಅದೇ ರೀತಿಯಲ್ಲಿ ಬೇರೆ ಬೇರೆ ಕೆಲಸಗಳು ಇವೆ, ಅದು ಬೋರ್‌ವೆಲ್‌ಗಳನ್ನು ರಿಪೇರಿ ಮಾಡತಕ್ಕಂಥಾದ್ದು ಇರಬಹುದು; ಹೊಸದಾಗಿ 180 ಬೋರ್‌ವೆಲ್‌ಗಳನ್ನು ಕೊರೆಯಲು ಟೆಂಡರ್ ಹಾಕಿದ್ದೇವೆ. ಇವೆಲ್ಲವನ್ನೂ ಮಾಡುತ್ತಿರುತ್ತೇವೆ. ಯಾವುದನ್ನೂ ನಿಲ್ಲಿಸುವುದಿಲ್ಲ. ಹೊಸ ಬೋರ್‌ವೆಲ್‌ಗಳನ್ನು ಕೊರೆಯಲು ಏನು ಕ್ರಮ ತೆಗೆದುಕೊಳ್ಳಬೇಕೋ ಟೆಂಡರ್ ಕರೆಯುವುದು ಇತ್ಯಾದಿಯಾಗಿ ಎಲ್ಲಾ ಕಾರ್ಯಕ್ರಮಗಳನ್ನು ಕಾರ್ಯಗತ ಮಾಡಿದ್ದೇವೆ. 31ನೇ ತಾರೀಖಿಗೆ ರಾಯಚೂರಿನಿಂದ ಪವರ್ ಬಂದ ತಕ್ಷಣ ನೀರು ಸರಬರಾಜಿಗೆ ಆದ್ಯತೆ ಕೊಟ್ಟು ಕೆಲಸವನ್ನು ಮಾಡುತ್ತೇವೆ. ಇನ್ನೊಂದು ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಬೆಂಗಳೂರಿನ ಸಮಸ್ಯೆಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಒಂದೇ ಅಲ್ಲ. ಈ ಸದನದಲ್ಲಿ ಕುಳಿತುಕೊಳ್ಳುವುದಕ್ಕೆ ನನಗೆ ಬೇಜಾರು ಆಗುತ್ತದೆ. ನಮ್ಮಲ್ಲಿ ಪವರ್ ಸಮಸ್ಯೆ ಬಹಳ ಇದೆ. ನಾವು ಹಿಂದಿ ವಿರೋಧಿ ಪಕ್ಷದಲ್ಲಿ ಕುಳಿತುಕೊಂಡು ಕೆಲಸ ಮಾಡುವಾಗ ಎಲ್ಲೋ ಒಂದೆರಡು ಸಾರಿ ಕರೆಂಟ್ ಹೋಗಿರಬಹುದು. ಆದರೆ ಈ ದಿನಕ್ಕೆ 2-3 ಸಾರಿ ಹೋಗುವ ಸ್ಥಿತಿ ಇದೆ. ಹೀಗಿರುವಾಗ ಇಲ್ಲಿ ಸದನದಲ್ಲಿ ಕೆಲಸ ಮಾಡುವುದಕ್ಕೆ ನನ್ನ ಮನಸ್ಸಿಗೇ ಕಿರಿಕಿರಿಯಾಗುತ್ತದೆ. ಇವೊತ್ತು ರಾಜ್ಯದಲ್ಲಿ ವಿದ್ಯುಚ್ಚಕ್ತಿಯ ಸಮಸ್ಯೆ ಏನಿದೆ, ಅದಕ್ಕೆ ಯಾವುದೇ ರೀತಿಯ ನಿರ್ಣಯವನ್ನು ತೆಗೆದುಕೊಳ್ಳುವಾಗ ಪರ ಮತ್ತು ವಿರೋಧ ಬರುತ್ತದೆ ಅಂದರೂ ಕೂಡ ಅದನ್ನು ಸ್ವಲ್ಪ ಮಟ್ಟಿಗೆ ಅದು ಖಾಸಗಿಯವರಿಗೆ ವಹಿಸಿಕೊಡತಕ್ಕಂಥ ಸನ್ನಿವೇಶ ಬರಲಿ, ಅಥವಾ ಇನ್ನಾವುದೇ ಸೂಕ್ತ ನಿರ್ಣಯ ಇರಲಿ, ಅದನ್ನು ಅತಿ ಶೀಘ್ರವಾಗಿ ಮಾಡಲು ಕ್ರಮ ಕೈಗೊಳ್ಳುತ್ತೇವೆ. ಬಾಂಬೆ ಕಲ್ಕತ್ತಾಕ್ಕೆ

ಹೋದರೆ ಯಾವುದೋ ಒಂದು ಪ್ರೈವೇಟ್ ಫರ್ಮ್‌ಗೆ ಕೊಟ್ಟಿದ್ದಾರೆ. ಮಾರ್ಕ್ಸಿಸ್ಟ್ ಎಡಪಕ್ಷದವರು ಅಲ್ಲಿ ಸರ್ಕಾರ ನಡೆಸುತ್ತಿದ್ದಾರೆ. ನಾವು ಖಾಸಗಿ ಬಂಡವಾಳ ಇದರಲ್ಲಿ ಹೂಡಿ ತಕ್ಷಣ ಏನೋ ದೊಡ್ಡ ನೀತಿ ಬದಲಾವಣೆ ಧೋರಣೆಗಳಲ್ಲಿ ಬದಲಾವಣೆ ಮಾಡುತ್ತೇವೆಂಬ ವಾದ ಎದ್ದೇಳುತ್ತದೆ. ಆದರೆ ಅಲ್ಲಿ ಇಡೀ ಕಲ್ಕತ್ತಾದಲ್ಲಿ ನನಗೆ ಕೇಳಿ ಆನಂದವಾಯಿತು, ಸುಮಾರು 3 ವರ್ಷದಿಂದ ಒಂದು ದಿನ ಪವರ್ ಷಟ್ ಡೌನ್ ಆಗಲಿಲ್ಲವಂತೆ. ಬಾಂಬೆಯಲ್ಲಿ ಸರಿ; ಅಲ್ಲಿ ಆರ್.ಪಿ.ಗೋಯೆಂಕಾರವರಿಗೆ ಮೊನ್ನೆ ಜ್ಯೋತಿ ಬಸು ಅವರು ಕೊಟ್ಟಿದ್ದಾರೆ. ಒಂದು ಮಾತು ಈ ಸಂದರ್ಭದಲ್ಲಿ ಹೇಳುತ್ತೇನೆ, ಇವತ್ತು ನಮಗೆ ಬೇಕಾಗಿರುವುದು ಸೌಲಭ್ಯ, ಸವಲತ್ತು; ಬೆಂಗಳೂರಿನಲ್ಲಿ ಕುಡಿಯುವ ನೀರಿನದ್ದು ಪ್ರಥಮ ಪ್ರಾಶಸ್ತ್ಯ ಇದೆ. ಇಂತಹ ಒಂದು ಸಂಕಷ್ಟದಿಂದ ಪಾರಾಗಬೇಕಾಗಿದ್ದರೆ ಸರ್ಕಾರ ಕೆಲವು ನೀತಿಯನ್ನು ಬದಲಾವಣೆ ಮಾಡಿ ಇನ್ನೊಂದು ವಾರದೊಳಗೆ ಇದಕ್ಕೆ ನಾವು ನಿರ್ಣಯಗಳನ್ನು ಮಾಡುವರಿದ್ದೇವೆಂಬ ಮಾತು ಹೇಳಿ, ನಾಲ್ಕೈದು ದಿನ ಸಣ್ಣಪುಟ್ಟ ಅಡೆತಡೆಗಳಾದರೆ ನಗರದ ಮಹಾಜನತೆಯಲ್ಲಿ ಆರಿಕೆ ಮಾಡಿಕೊಳ್ಳುತ್ತೇನೆ, ದಯವಿಟ್ಟು ಕ್ಷಮಿಸಬೇಕು ಎಂದು. ನಿಜ, ಸೋದರಿ ಪ್ರಮೀಳಾ ಅವರು ಒಂದು ಮಾತು ಹೇಳಿದರು, ಯುಗಾದಿ ಹಬ್ಬದಲ್ಲಿ ಒಂದು ದಿನವಾದರೂ ಸ್ನಾನ ಮಾಡುವುದಕ್ಕೆ ಅವಕಾಶ ಮಾಡಿ ಎಂದು. ಅವರಿಗೆ ಅದೆಷ್ಟು ಕಳಕಳಿ ಇದೆಯೆಂದು ನನಗೆ ಅರ್ಥವಾಗುತ್ತದೆ. ಏಕೆಂದರೆ ಸ್ವಾಭಾವಿಕವಾಗಿ ಹೊಸ ವರ್ಷದ ಹಬ್ಬ ಮಾಡುವ ಸಂದರ್ಭದಲ್ಲಿ, ಬಾಕಿ ದಿನ ಮಾಡಲಿ ಬಿಡಲಿ ಅವತ್ತಾದರೂ ಮಾಡಲೇಬೇಕೆಂಬುದು ನಮ್ಮ ಪ್ರತೀತ. ಇದಕ್ಕೆ ರಾಜಕೀಯ ಬಣ್ಣ ಹಚ್ಚಬೇಕಾದ್ದಿಲ್ಲ. 31ನೇ ತಾರೀಖು ಹಬ್ಬ ಇರಬಹುದು ಬಹುಶ: 30-31ರೊಳಗೆ ಆ ಸ್ಟೇಷನ್ ಚಾರ್ಜ್ ಮಾಡಿದ ಮೇಲೆ ಬೆಂಗಳೂರಿನ ನೀರು ಸರಬರಾಜು 1ನೇ ತಾರೀಖಿನಿಂದ ನಿರಾತಂಕವಾಗಿ ಆಗತಕ್ಕಂತಹ ಸರ್ವ ಪ್ರಯತ್ನ ಮಾಡಲಿಕ್ಕೆ ಪ್ರಯತ್ನ ಮಾಡುತ್ತೇನೆಂದು ಒಂದು ಮಾತಿನಲ್ಲಿ ಭರವಸೆ ಕೊಡುತ್ತೇನೆ.

ಶ್ರೀ ಎಂ.ಶ್ರೀನಿವಾಸ್ (ಉತ್ತರಹಳ್ಳಿ) :- ಕೆಲವು ಬಡಾವಣೆಗಳಲ್ಲಿ 6-7 ವರ್ಷ ಬಿ.ಡಬ್ಲ್ಯು.ಎಸ್.ಎಸ್.ಬಿ.ಗೆ ದುಡ್ಡು ಕಟ್ಟಿಬಿಟ್ಟಿದ್ದಾರೆ, ಮನೆಗಳೂ ಕಟ್ಟಿದ್ದಾರೆ. ಇದುವರೆಗೂ ಅವರಿಗೆ ಕನೆಕ್ಷನ್ ಕೊಟ್ಟಿಲ್ಲ. ಅನಧಿಕೃತವಾಗಿ ಕನೆಕ್ಷನ್ ತೆಗೆದುಕೊಂಡಿದ್ದಾರೆ. ಬಿ.ಡಿ.ಎ.ಬಡಾವಣೆಗಳಲ್ಲಿ ಮನೆ ಕಟ್ಟಿರುವ ಕಡೆ ಅವರು ದುಡ್ಡು ಕಟ್ಟಿ 6 ವರ್ಷವಾಗಿದೆ, ಅದುವರೆಗೂ ನೀರು ಕೊಟ್ಟಿಲ್ಲ. ಅದನ್ನೇನು ಮಾಡುತ್ತೀರಿ

ಶ್ರೀ ಹೆಚ್.ಡಿ.ದೇವೇಗೌಡ :- ಮಾನ್ಯ ನಂಜೇಗೌಡರು ಹೇಳಿದ್ದಾರೆ ಆ ಮಾತನ್ನು. ನೀವು ಹೇಳಿದ್ದುದು ಸತ್ಯ ಇದೆ. ಆ ಭಾಗದಲ್ಲಿ ಕೂಡ ಬಗೆಹರಿಸಲಿಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಇದರೊಳಗೆ ರೆವಿನ್ಯೂ ವಿಭಾಗ, ನೋಟಿಫೈಡ್ ವಿಭಾಗ, ಯಾವ ಬಡಾವಣೆ ಇದನ್ನೆಲ್ಲಾ ಗಮನದಲ್ಲಿಟ್ಟುಕೊಂಡು ಪ್ರಯತ್ನ ಮಾಡುತ್ತೇವೆ. ಶ್ರೀ ಸೋಮಣ್ಣನವರು ಹೇಳಿದ್ದರಲ್ಲಿ ಸತ್ಯ ಇದೆ. ಅಲ್ಲಿ ಕೆಲವು ಸಲ ಕೆಳಗಡೆ ಅಧಿಕಾರಿಗಳು ಸಣ್ಣಪುಟ್ಟ ರಾಜಕೀಯ ಮಾಡುತ್ತಾರೆ. ಅವರು ಹೇಳಿದ ಮಾತಿನಲ್ಲಿ ವಾಸ್ತವಿಕತೆ ಇದೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ :- ತಾವು 5 ಕೋಟಿ ಬೆಂಗಳೂರು ನಗರಕ್ಕೆ ಮತ್ತು 25 ಕೋಟಿ ಇಡೀ ರಾಜ್ಯಕ್ಕೆ ಕುಡಿಯುವ ನೀರಿನ ವ್ಯವಸ್ಥೆಗಾಗಿ ಕೊಟ್ಟಿದ್ದೇವೆಂದಿರಿ. ಈ 25 ಕೋಟಿ ರೂ.ಗಳನ್ನು ನ್ಯಾಚುರಲ್ ಕ್ಯಲಾಮಿಟಿ ಕೆಳಗಡೆ ರಿಲೀಸ್ ಮಾಡಿದ್ದೀರೋ ಅಥವಾ ಪಿ.ಎಚ್.ಇ.ಯ ರೆಗ್ಯುಲರ್ ಫಂಡ್‌ನಲ್ಲಿ ರಿಲೀಸ್ ಮಾಡಿದ್ದೀರೋ? ಏಕೆಂದರೆ ಪಿ.ಎಚ್.ಇ.ನಲ್ಲಿರುವ ಪ್ರಾವಿಷನ್‌ನಲ್ಲಿ ಮಾಡಿದ್ದರೆ ಅದು ರೂಟೀನ್ ಆಯಿತು. ಆದರೆ ನ್ಯಾಚುರಲ್ ಕ್ಯಲಾಮಿಟಿ ಕೆಳಗಡೆ ಮಾಡಿದ್ದರೆ ಅದು ಎಕ್ಸ್‌ಟ್ರಾ ಹಣ ಆಗುತ್ತದೆ. ಇದರ ಬಗ್ಗೆ ಕ್ಲಾರಿಫೈ ಮಾಡಿ.

ಶ್ರೀ ಹೆಚ್.ಡಿ.ದೇವೇಗೌಡ :- ಬಹುಶಃ ನನಗೆ ಜ್ಞಾಪಕ ಇದೆ, ಸಬ್ಜೆಕ್ಟ್ ಟು ಕರೆಕ್ಷನ್ 5 ಕೋಟಿ ರೂ.ಗಳನ್ನು ನಾವು ನ್ಯಾಚುರಲ್ ಕ್ಯಲಾಮಿಟಿಯಲ್ಲಿ ಬಿಡುಗಡೆ ಮಾಡಿರಬಹುದು. ಬಾಕಿಯದು ಗ್ರಾಮಾಂತರ ಪ್ರದೇಶಕ್ಕೆ ನೀರು ಕೊಡುವುದಕ್ಕಿರು ಹೆಡ್‌ನಲ್ಲಿ ನಾವು ಬಿಡುಗಡೆ ಮಾಡಿದ್ದೇವೆಂದು ನನ್ನ ಭಾವನೆ. ಬೆಂಗಳೂರು ನಗರಕ್ಕೆ ರಿಲೀಸ್ ಮಾಡಿರುವ 5 ಕೋಟಿಗೂ ನ್ಯಾಚುರಲ್ ಕ್ಯಲಾಮಿಟಿ ಫಂಡ್‌ಗೂ ಸಂಬಂಧ ಇಲ್ಲ.

ಶ್ರೀ ಎಸ್.ಸುರೇಶ್ ಕುಮಾರ್ :- ಜಲಮಂಡಳಿಯವರಿಗೆ, ಒಂದು, ಈ ಬೇಸಿಗೆ ಮುಗಿಯುವವರೆಗೂ ಯಾವುದೇ ಕಿರು ನೀರು ಸ್ಕೀಮದ್ದು ವಿದ್ಯುತ್ ಕನೆಕ್ಷನ್ ಯಾವುದೇ ಇದ್ದರೂ ಡಿಸ್‌ಕನೆಕ್ಟ್ ಮಾಡಬಾರದೆಂದು ಕೆ.ಇ.ಬಿ. ಯವರಿಗೆ ಆದೇಶ ಕೊಡಬೇಕು. ಎಲೆಕ್ಟ್ರಿಕಲ್ ಬಿಲ್‌ದು ಏನೇ ಗೊಂದಲ ಇದ್ದರೂ ಇದು ಡಿಸ್‌ಕನೆಕ್ಟ್ ಆಗಬಾರದು. ಎರಡನೆಯದು ಇಡೀ ಬೆಂಗಳೂರಿನಲ್ಲಿ ನೀರು ಸರಬರಾಜು ಸಂದರ್ಭದಲ್ಲಿ ನೀರಿನ ಸರ್ವಿಸ್ ಸ್ಟೇಷನ್‌ಗಳಲ್ಲಿ ಅಧಿಕಾರಿಗಳಿರಬೇಕು. ಹಿರಿಯ ಅಧಿಕಾರಿಗಳು ಸ್ವಲ್ಪ ಮಾನಿಟರ್ ಮಾಡಬೇಕು. ಈ ಎರಡು ಆದೇಶಗಳನ್ನು ತಾವು ದಯವಿಟ್ಟು ಕೊಡಬೇಕು.

ಶ್ರೀ ಬಿ.ಮುನಿಯಪ್ಪ :- ಆ ಮಿನಿ ಸ್ಕೀಂಗಾಗಿ ಕೆ.ಇ.ಬಿ. ಜಲ ಮಂಡಲಿಯವರು ಬಿಲ್ ಕಟ್ಟಬೇಕು. ಅವರು ಕಟ್ಟದಿದ್ದರೆ ಡಿಸ್‌ಕನೆಕ್ಟ್ ಮಾಡಬಾರದು, ಡಿಸಕನೆಕ್ಟ್ ಮಾಡಿರುವುದನ್ನು ಕೂಡಲೇ ಕನೆಕ್ಟ್ ಮಾಡುವ ಆದೇಶ ನೀಡಬೇಕು. ಈ ಬಗ್ಗೆ ಮುಖ್ಯ ಮಂತ್ರಿಗಳು ಜಲಮಂಡಲಿ ಅಧಿಕಾರಿಗಳಿಗೆ ಆದೇಶ ನೀಡಬೇಕು.

ಶ್ರೀ ವಾಟಾಳ್ ನಾಗರಾಜ್ :- 4ನೇ ಹಂತದಲ್ಲಿ ಬೆಂಗಳೂರಿಗೆ ಏನು ಕಾವೇರಿ ನೀರನ್ನು ತರುತ್ತೀರಿ, ಈ ಕಾವೇರಿಯಿಂದ ತರುವ ನೀರು ಸಾಕಾಗುತ್ತದೆಯೋ ಅಥವಾ ಬೇರೆ ಯಾವುದಾದರೂ ನದಿ ನೀರು ತರುವ ಯೋಜನೆ ಸರ್ಕಾರಕ್ಕಿದೆಯೋ ? ಏಕೆಂದರೆ ತಾವು ನೀರಾವರಿ ಮಂತ್ರಿಗಳಾಗಿದ್ದೀರಿ. ಎರಡೂ ನಿಮಗೆ ಸಂಬಂಧ ಬರುತ್ತದೆ. ಅಲ್ಲಿಂದ ನೀರು ತಂದರೆ ಆ ನೀರಿಗೆ ಏನು ತೊಂದರೆ ಆಗುತ್ತದೆ. ಎರಡನೆಯದು ಬೆಂಗಳೂರಿನ ಬೆಳಗಣಿಗೆ ಇದೆಯಲ್ಲಾ, ಇದನ್ನು ಗಮನಿಸಬೇಕು. 31ನೇ ತಾರೀಖಿನೊಳಗಾಗಿ ತಾವು ಏನಾದರೂ ಮಾಡಿ. ಒಂದನೇ ತಾರೀಖು ಎಲ್ಲರೂ ಸ್ನಾನ ಮಾಡಬಹುದೆಂದು ಹೇಳಿದ್ದೀರಿ. ಈ ಬೆಂಗಳೂರಿಗೆ ಬರುವ

ಜನರನ್ನು ತಡೆಯುವುದಕ್ಕೆ ಯಾವುದಾದರೂ ಯೋಜನೆ ಬೇಕಲ್ಲಾ ಸರ್ಕಾರಕ್ಕೆ. ಎಲ್ಲಾದರೂ ಒಂದು ಹಂತದಲ್ಲಿ ನಿಲ್ಲಬೇಕಲ್ಲಾ ಬೆಂಗಳೂರಿನ ಬೆಳವಣಿಗೆ. 1 ಕೋಟಿ ಬೆಳೆದರೆ ಅದಕ್ಕೆ ಮುಂದೆ ನಿಮ್ಮ ಯೋಜನೆ ಏನು? ಈಗಿನ ಪ್ರಕಾರ 4ನೇ ಹಂತದಲ್ಲಿ ನೀರು ತರುವ ಯೋಜನೆ ಇದೆ. ಆದರೆ ಮುಂದೆ 2 ಸಾವಿರ ವರ್ಷದೊಳಗಾಗಿ ಆನೇಕಲ್ ಸೇರುತ್ತದೆ, ಹೊಸಕೋಟೆ ಸೇರುತ್ತದೆ. ನೆಲಮಂಗಲ ಸೇರುತ್ತದೆ. ಈ ಕಡೆ ಕನಕಪುರ ರಾಮನಗರ ಎಲ್ಲಾ ಸೇರಿ ಹೆಚ್ಚು ಕಡಿಮೆ ಈಗಲೇ ಒಂದು ಯೋಜನೆ ಇದೆಯೇ ಎಂಬುದನ್ನು ದಯಮಾಡಿ ತಾವು ತಿಳಿಸಿ.

ಶ್ರೀ ಹೆಚ್.ಡಿ.ದೇವೇಗೌಡ :- ಬೆಂಗಳೂರು ವಾಟರ್ ಸಪ್ಲೈ ಅಂಡ್ ಸ್ಯೂವರೇಜ್ ಬೋರ್ಡ್‌ನವರು ಕಾವೇರಿ ನಾಲ್ಕನೇ ಹಂತದ ಯೋಜನೆಗೆ ಸಂಬಂಧಪಟ್ಟ ಹಾಗೆ ಪ್ರೊಜೆಕ್ಷನ್ ಏನು ಕೊಟ್ಟಿದ್ದಾರೆ ಎಂದರೆ 2011 ಇಸವಿಗೆ ಜನಸಂಖ್ಯೆ ಸುಮಾರು 70 ಲಕ್ಷ ಆಗಬಹುದೆಂದು ಹೇಳಿದ್ದಾರೆ. ಅದಕ್ಕೇ ಏನೇನು ಮಾಡಬೇಕೆಂಬ ಬಗ್ಗೆ ಹಿಂದಿನ ಸರ್ಕಾರದವರೇ ಒಂದು ರಿಪೋರ್ಟ್ ತಯಾರಿಸಿದ್ದಾರೆ. ರಿಪೋಟ್ ಆನ್ ದಿ ಪ್ರೊಜೆಕ್ಟ್ ಕಾನ್‌ಸೆಪ್ಟ್‌ನಲ್ಲಿ ಇದರ ಬಗ್ಗೆ ಹೇಳಿದ್ದಾರೆ. ಅದರ ವಿವರಣೆಯನ್ನೆಲ್ಲಾ ಸೇರಿ ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಒಂದು ಮಾತ್ರ ತಮ್ಮ ಗಮನಕ್ಕೆ ತರಲು ಇಚ್ಛಿಸುತ್ತೇನೆ. ಈಗ ಬೆಂಗಳೂರಿನಲ್ಲಿ ಹೆಚ್ಚಿನ ಜನಸಂದಣಿ ಆಗುವುದಕ್ಕೆ ಅವಕಾಶ ಕೊಡಬಾರದೆಂದೇ ತುಮಕೂರು, ರಾಮನಗರ, ಚನ್ನಪಟ್ಟಣ, ಆನೇಕಲ್, ಮುಂತಾದ ಕಡೆ ಕೆಲವು ಬಡಾವಣೆ ಅಥವಾ ಮಿನಿ ಟೌನ್‌ಷಿಪ್ಸನ್ನು ತರಬೇಕೆಂದು ನಮ್ಮ ಆಲೋಚನೆಯಲ್ಲಿದೆ. ಈ 4ನೇ ಹಂತಕ್ಕೆ ಸುಮಾರು 600 ಕೋಟಿ ಆಗುತ್ತವೆಂದಿದ್ದಾರೆ. ದುಡ್ಡಿಲ್ಲ, ಸುಮ್ಮನೆ ಎಷ್ಟೆ ಮಾತಾಡಿದರೂ ನಾವು ಬಾಯಿ ಮಾತಿನಲ್ಲಿ ಸಮಸ್ಯೆ ಬಗೆಹರಿಸಲಿಕ್ಕಾಗುವುದಿಲ್ಲ. ಅದಕ್ಕೇ ನಾವು ಖಾಸಗಿಯವರಿಗೆ ಇದನ್ನು ವಹಿಸಿಕೊಟ್ಟು ಬೆಂಗಳೂರು ನಗರದ ಹಂತದಲ್ಲಿ ರಿಸೀವಿಂಗ್ ಪಾಯಿಂಟ್ಸ್ ಬಳಿ ಬಲ್ಕ್ ಪರ್ಚೇಸ್ ಮಾಡಬೇಕೆಂಬ ಉದ್ದೇಶವೂ ನಮಗಿದೆ. ಏಕೆಂದರೆ 18 ತಿಂಗಳಿನಲ್ಲಿ ನಾವು ಮುಗಿಸಿಕೊಡುತ್ತೇವೆಂದು ಅವರು ಹೇಳಿದ್ದಾರೆ. ನೀವು ಬಲ್ಕ್ ಪರ್ಚೇಸ್ ಮಾಡಬೇಕು. ಅದಕ್ಕೆ ನಾವು ಒಪ್ಪಿಕೊಂಡರೆ ಎಲ್ಲಾ ಹಣವನ್ನು ನಾವೇ ಹಾಕುತ್ತೇವೆಂದು ಖಾಸಗಿ ವಿದೇಶಿ ಬಂಡವಾಳದಾರರು ಬಂದಿದ್ದಾರೆ. ನಾವಿನ್ನೂ ತೀರ್ಮಾನ ತೆಗೆದುಕೊಂಡಿಲ್ಲ. ಏಕೆಂದರೆ ಒಂದಲ್ಲ ಒಂದು ಸ್ವರೂಪದಲ್ಲಿ ರಾಜ್ಯ ಏನು ಸಮಸ್ಯೆ ಎದುರಿಸುತ್ತಿದೆ ಅದಕ್ಕೆ ಖರ್ಗೆಯವರು ಕಾರಣ ದೇವೇಗೌಡರು ಕಾರಣ ನಂಜೇಗೌಡರು ಹಿಂದೆ ಮಂತ್ರಿಯಾಗಿದ್ದು ಕಾರಣ- ಇದನ್ನು ಚರ್ಚೆ ಮಾಡಿ ಏನೂ ಉಪಯೋಗವಾಗುವುದಿಲ್ಲ. ಇದಕ್ಕೆ ಏನಾದರೂ ಮಾಡಿ ಪರಿಹಾರ ಕಂಡು ಹಿಡಿಯಬೇಕೆಂಬ ಹಂತಕ್ಕೆ ಬಂದಿದ್ದೇವೆ. ಇನ್ನು ಒಂದು ಅಥವಾ ಎರಡು ತಿಂಗಳೊಳಗೆ ಹಲವಾರು ಪ್ರಾಮುಖ್ಯ ನಿರ್ಣಯಗಳನ್ನು ತೆಗೆದುಕೊಂಡು ಈ ರಾಜ್ಯದಲ್ಲಿರುವ ಬಹುತೇಕ ಸಮಸ್ಯೆಗಳ ಬಗ್ಗೆ ಅಂತಿಮವಾದ ಸರ್ಕಾರಿ ಧೋರಣೆಯನ್ನು ತಮ್ಮ ಮುಂದಿಡುತ್ತೇವೆ. ಆದರೆ ಈ 600 ಕೋಟಿ ಎಸ್ಟಿಮೇಟ್ಸ್ ನನ್ನದಲ್ಲ, ನಮ್ಮಲ್ಲೆಲ್ಲಿದೆ ದುಡ್ಡು ? ಸನ್ಮಾನ್ಯ ನಿಜಲಿಂಗಪ್ಪನವರು ಕಾವೇರಿ ನೀರು ತರಬೇಕೆಂದು 1962ರಲ್ಲಿ ಬ್ಯಾಂಕ್ವೆಟ್ ಹಾಲ್‌ನಲ್ಲಿ ಸಭೆ ಮಾಡಿದರು. 12 ವರ್ಷವೋ

14 ವರ್ಷವೋ ಆಯಿತು ಅದು ಮುಗಿಯಬೇಕಾದರೆ. ನನಗೆ ಗೊತ್ತಿದೆ. ಆದ್ದರಿಂದ 18-20 ತಿಂಗಳಿಗೆ ಖಾಸಗೀ ಬಂಡವಾಳ 600 ಕೋಟಿ ಹಾಕಿದ ಮೇಲೆ ನಾವು ಬಲ್ಕ್ ಪರ್ಚೇಸ್ ಮಾಡಬೇಕಾಗುತ್ತದೆ ಎಂಬುದು ಒಂದು ಅಭಿಪ್ರಾಯ ಇದೆ. ಮಾನ್ಯ ವಾಟಾಳ್ ನಾಗರಾಜ್‌ರವರು ಹೇಳಿದೆ ಹಾಗೆ ಬೆಂಗಳೂರು ನಗರದ ಅಭಿವೃದ್ಧಿಯ ಕೆಲಸಗಳ ಬಗ್ಗೆ ಗಮನ ಹರಿಸಬೇಕೆಂಬ ಕಾರಣಕ್ಕಾಗಿ ನಾನೇ ಆ ಪೋರ್ಟ್‌ಫೋಲಿಯೋ ಇಟ್ಟುಕೊಂಡಿದ್ದೇನೆ. ನನ್ನ ಜೊತೆಗೆ ಶ್ರೀಮಾನ್ ರೋಶನ್‌ಬೇಗ್‌ರವರು ಇದ್ದಾರೆ. ನಾನು ಕೇವಲ ಹಳ್ಳಿಯವರ ಕಡೆಗೆ ಮಾತ್ರ ಗಮನ ಕೊಡುತ್ತಾ ಇದ್ದೇನೆ ಎಂಬ ಆರೋಪ ಬರಬಾರದು ಎಂದು ಆ ಖಾತೆಯನ್ನು ನಾನೇ ಇಟ್ಟುಕೊಂಡಿದ್ದೇನೆ. ಕೊನೆಯದಾಗಿ ಒಂದು ಮಾತನ್ನು ಹೇಳುತ್ತೇನೆ. ಒಂದು ಕನ್‌ಸಲ್‌ಟೇಟೀವ್ ಕಮಿಟಿ ಮಾಡಿ ಎಂದು ಹೇಳಿದ್ದಾರೆ. ಎಲ್ಲಾ ಶಾಸಕರುಗಳನ್ನು ಒಳಗೊಂಡಂತೆ ಒಂದು ಕನ್‌ಸಲ್‌ಟೇಟಿವ್ ಕಮಿಟಿಯನ್ನು ಮಾಡಿ ಪ್ರತಿ ತಿಂಗಳೂ ಮೀಟಿಂಗ್ ಸೇರಿ ಚರ್ಚೆ ಮಾಡುವ ವ್ಯವಸ್ಥೆ ಮಾಡುತ್ತೇನೆ. ಕೇವಲ ಕುಡಿಯುವ ನೀರಿನ ಸಮಸ್ಯೆ ಮಾತ್ರ ಅಲ್ಲ, ಎಲ್ಲಾ ನಾಗರೀಕ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡಿ, ಪರಿಹಾರವನ್ನು ಕಂಡುಕೊಳ್ಳುವುದಕ್ಕೆ ವ್ಯವಸ್ಥೆ ಮಾಡುತ್ತೇನೆ. ಮಾನ್ಯ ವಾಟಾಳ್ ನಾಗರಾಜ್‌ರವರು ಹಳ್ಳಿಯಿಂದ ಬರತಕ್ಕ ಶಾಸಕರಿಗೆ ಏನಾದರೂ ಅವಕಾಶ ಮಾಡಬೇಕೆಂದು ಹೇಳುವಾಗ ನಗರ ಪ್ರದೇಶಕ್ಕೆ ಏಕೆ ಆಗಬಾರದು ? ಇಲ್ಲಿಯೂ ಅಂಥ ಸಮಿತಿಯನ್ನು ಮಾಡೋಣ. ಮಾನ್ಯ ನಾಗೇಗೌಡರು ಒಂದು ವಿಷಯವನ್ನು ಹೇಳಿದರು. ಕಾವೇರಿ ನೀರು ಬರುವ ದಾರಿಯಲ್ಲಿ ಅನೇಕ ಸಣ್ಣಪುಟ್ಟ ನಗರಗಳು ಬರುತವೆ. ಅವುಗಳಿಗೆ ಕುಡಿಯುವ ನೀರು ಕೊಡಲು ಸರಕಾರದವರು ಮನಸ್ಸು ಮಾಡಬೇಕೆಂದು ಹೇಳಿದ್ದಾರೆ. ಈ ಬಗ್ಗೆ ನಾನು ಮನಸ್ಸು ಮಾಡುವುದಲ್ಲ. ಈ ಬಗ್ಗೆ ಹಿಂದೆ ಕೂಡ ಚರ್ಚೆಯಾಗಿದೆ. ಚರ್ಚೆಯಾಗಿ ಆ ಕುರಿತು ಒಪ್ಪಿಗೆ ಕೂಡ ಕೊಟ್ಟಿರತಕ್ಕಂಥಾದ್ದು ನನಗೆ ಗೊತ್ತಿರತಕ್ಕಂಥ ವಿಚಾರವಾಗಿದೆ. ಅದನ್ನು ಕೂಡ 4ನೇ ಹಂತದಲ್ಲಿ ಅಳವಡಿಸಿಕೊಂಡು ಮಾಡುತ್ತೇವೆ ಎಂಬ ಮಾತನ್ನು ಹೇಳಿ, ಮಾನ್ಯ ಕುಮಾರ್‌ರವರು ಮಿನಿವಾಟರ್‌ಗೆ ಕೊಟ್ಟಿರತಕ್ಕಂಥ ಹಣದ ಬಗ್ಗೆ ಹೇಳಿದರು. ಅದರಲ್ಲಿ ಗೊಂದಲ ಬೇಕಾಗಿಲ್ಲ. ನಾನಿಷ್ಟೇ ಹೇಳಬಯಸುತ್ತೇನೆ, ನೀವು ಕೊಟ್ಟಿರತಕ್ಕಂಥ ಸಲಹೆಗಳನ್ನು ಗಮನದಲ್ಲಿಟ್ಟುಕೊಂಡು ಕಾರ್ಯಗತ ಮಾಡುತ್ತೇನೆ ಎಂಬ ಮಾತನ್ನು ಹೇಳಿ, ನಿಮ್ಮೆಲ್ಲರ ಸಹಕಾರದಿಂದ ಈ ಜ್ವಲಂತ ಸಮಸ್ಯೆಯನ್ನು ಬಗೆಹರಿಸಲು ಸರಕಾರವು ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತದೆ ಎಂದು ಹೇಳಿ, ತಮ್ಮನ್ನು ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು :- ಸನ್ಮಾನ್ಯ ಹಣಕಾಸು ಮತ್ತು ಯೋಜನಾ ಸಚಿವರು ಬೆಳಿಗ್ಗೆ ತಿಪಟೂರಿನ ಶಾಸಕರಾದ ನಂಜಮರಿ ಮತ್ತು ಶ್ರೀಮಾನ್ ವಾಟಾಳ್ ನಾಗರಾಜ್‌ರವರು ತಿಪಟೂರಿನಲ್ಲಿ ನಡೆದ ಕೊಬ್ಬರಿ ವರ್ತಕರ ಹರತಾಳದ ಬಗ್ಗೆ ಗಮನ ಸೆಳೆದಿದ್ದರು. ಅದಕ್ಕೆ ಸಚಿವರು ಹೇಳಿಕೆ ಮಾಡಲಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ಮಾನ್ಯ ಅಧ್ಯಕ್ಷರೇ, ರೂರಲ್ ವಾಟರ್ ಸಪ್ಲೈ ಬಗ್ಗೆ ಮತ್ತು ರಾಜ್ಯದಲ್ಲಿ ಅನೇಕ ಕಡೆಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಇದೆ, ಅದರ